ಬುದ್ಧನ ಕುರಿತ ಕನ್ನಡ ನಾಟಕಗಳು

***

ಕನ್ನಡ ಎಂ.ಫಿಲ್ ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕರು

ಮಹದೇವಮ್ಮ

ಮಾರ್ಗದರ್ಶಕರು

ಡಾ|| ರಾಮೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೦೭-೦೮

ಬುದ್ಧನ ಕುರಿತ ಕನ್ನಡ ನಾಟಕಗಳು

ಕನ್ನಡ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕರು
ಮಹದೇವಮ್ಮ

ಮಾರ್ಗದರ್ಶಕರು
ಡಾ|| ರಾಮೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)
೨೦೦೭–೦೮

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ನೇ ಸಾಲಿಗೆ ಕನ್ನಡ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ. ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಬುದ್ಧನ ಕುರಿತ ಕನ್ನಡ ನಾಟಕಗಳು" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ|| ರಾಗೌ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ: ೧೨-೦೫-೨೦೦೮

ಅಭ್ಯರ್ಥಿಯ ಸಹಿ

ಪ್ರಮಾಣ ಪತ್ರ

ಮಹದೇವಮ್ಮ ಅವರು ಕನ್ನಡ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ "ಬುದ್ಧನ ಕುರಿತ ಕನ್ನಡ ನಾಟಕಗಳು" ಎಂಬ ನಿಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೧೨-೯-೨೦೦೮

ಮಾರ್ಗದರ್ಶಕರು
ಡಾ॥ ರಾಮೇಗೌಡ
೧೪೪, ಕಾಳೀದಾಸ ರಸ್ತೆ
ಜಯಲಕ್ಷ್ಮೀಪುರಂ
ಮೈಸೂರು–೦೨.

[illegible]

[illegible]

[illegible]

~ಃ ಬುದ್ಧನ ಕುರಿತ ಕನ್ನಡ ನಾಟಕಗಳು ಃ~

~: ಪರಿವಿಡಿ :~

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜನಮನದ ಶಕ್ತಿ ಮೇಣವರಭೀಪ್ಸೆಯೆ

ಮಹಾತ್ಮರಂ ನಮ್ಮಿಳೆಗೆ ತಪ್ಪದೆಳತರ್ಪುದು ಕಣಾ

ಎಂಬ ಕವಿವಾಣಿಯಂತೆ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡಲು ಮಹಾನ್ ವ್ಯಕ್ತಿಗಳ ಹುಟ್ಟು ಸಂಭವಿಸುತ್ತದೆ. ಲೋಕದ ಜನರನ್ನು ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲಿನಿಂದ ಬೆಳಕಿನ ಕಡೆಗೆ ಕೊಂಡೊಯ್ಯಲು ಅವತರಿಸಿದ ಮಹಾನ್ ವ್ಯಕ್ತಿಗಳ ಪರಂಪರೆಯೇ ಭಾರತೀಯ ಸಂಸ್ಕೃತಿಗಿದೆ. ಇಂತಹವರ ಸಾಲಿನಲ್ಲಿ ತನ್ನ ಸಮಸ್ತ ಲೌಕಿಕ ಸಂಪತ್ತನ್ನು ತ್ಯಜಿಸಿ, ಅಲೌಕಿಕ ಜಗತ್ತಿನ ಕಡೆಗೆ ಸಾಗಿ, ಆಸೆಯೇ ದುಃಖಕ್ಕೆ ಮೂಲವೆಂಬ ಮೂಲಮಂತ್ರವನ್ನು ಸಾರಿದ ಗೌತಮಬುದ್ಧನ ಹೆಸರು ಚಿರಸ್ಥಾಯಿಯಾಗಿರುವಂಥದ್ದು, ಪ್ರಾಪಂಚಿಕ ಸುಖಭೋಗಗಳೇ ಸರ್ವಸ್ವವೆಂಬ ಭ್ರಮೆಯಲ್ಲಿ ತೊಳಲಾಡುತ್ತ, ಕ್ಷಣಿಕ ಸುಖಕ್ಕೆ ಮಾರುಹೋಗಿ ಅಜ್ಞಾನದ ಕಾರ್ಗತ್ತಲಲ್ಲಿ ದಿಕ್ಕು ಕಾಣದೆ ತಡವರಿಸುತ್ತಿದ್ದ ಲೋಕಕ್ಕೆ ಸತ್ಯದ ಬೆಳಕನ್ನು, ಜ್ಞಾನದ ಹಾದಿಯನ್ನು ತೋರಿಸಿದ ಮಹಾನ್ ಸಾಧಕ. ಭಾರತದ ಇತಿಹಾಸದಲ್ಲಿ ಬುದ್ಧ ಬಹುದೊಡ್ಡ ವ್ಯಕ್ತಿ. ಕೌಟುಂಬಿಕ ಸುಖ ಹಾಗೂ ರಾಜ್ಯಸುಖಗಳ ಎಲ್ಲೆಯನ್ನು ಮೀರಿ ಆತ್ಮಸುಖದ ಶೋಧದಲ್ಲಿ ತೊಡಗಿದವನು. ಆ ದಾರಿಯಲ್ಲಿ ಎದುರಾದ ಎಲ್ಲ ತೊಡಕು ತೊಂದರೆಗಳನ್ನು ಹರಿದೊಗೆದು, ಸಮಾಜದ ಉದ್ಧಾರದ ಹಾದಿಯನ್ನು ಕಂಡುಕೊಂಡವನು.

ದುಃಖದಾರಿದ್ರ್ಯಗಳ ಸುಳಿಯಲ್ಲಿ ಸಿಲುಕಿ ನಲುಗುತ್ತಿರುವ ಮನುಕುಲಕ್ಕೆ ಅದರಿಂದ ಬಿಡುಗಡೆ ನೀಡುವುದು ಜಗತ್ತಿನ ಎಲ್ಲ ಧರ್ಮಗಳ ಗುರಿಯಾಗಿದೆ. ಆಯಾಯ ಧರ್ಮದ ಉಗಮ ಮತ್ತು ವಿಕಾಸಕ್ಕೆ ಕಾರಣರಾದ ಮಹಾನ್ ವ್ಯಕ್ತಿಗಳು ತಮ್ಮ ವಿಶಿಷ್ಟ ಚಿಂತನೆಗಳ ಮೂಲಕ ಧರ್ಮದ ಗುರಿಯನ್ನು ಸಾಧಿಸಲು ಪ್ರಯತ್ನಿಸಿದ್ದಾರೆ. ಜಗತ್ತಿನ ಎಲ್ಲ ಧರ್ಮಗಳ ಕೇಂದ್ರ ಮಾನವೀಯತೆಯಾಗಿದ್ದು, ಮಾನವೀಯತೆಯ ಮಂತ್ರದೊಂದಿಗೆ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದವರಲ್ಲಿ ಗೌತಮಬುದ್ಧನು ಪ್ರಮುಖನಾಗಿದ್ದಾನೆ. ತನ್ಮೂಲಕ ಬೌದ್ಧಧರ್ಮದ ಹುಟ್ಟಿಗೆ

ಕಾರಣನಾಗಿದ್ದಾನೆ. ಗೌತಮಬುದ್ಧನು ಬೋಧಿಸಿದ ತತ್ವ ಬೋಧನೆಗಳು ಅನೇಕರ ಮೇಲೆ ಪ್ರಭಾವಬೀರಿ ಅವರ ಬದುಕನ್ನು ಬೆಳಕಾಗಿಸಿವೆ.

ಸಮಾಜದ ಯಾವುದೇ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿಯ ಜೀವನದ ಮೇಲೆ ಸಮಾಜವು ಪ್ರಭಾವ ಬೀರುವಂತೆ, ವ್ಯಕ್ತಿಯ ಜೀವನವೂ ಸಮಾಜದ ಮೇಲೆ ಪ್ರಭಾವ ಬೀರುತ್ತದೆ. ವ್ಯಕ್ತಿಯನ್ನು ರೂಪಿಸಿದ ಸಮಾಜ ಕೆಲವೊಮ್ಮೆ ವ್ಯಕ್ತಿಯಿಂದಲೇ ವಿಶೇಷ ರೂಪ ಪಡೆಯುತ್ತದೆ. ಇಂತಹ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಸಮಾಜದ ಭಾಗವಾದ ಸಾಹಿತ್ಯದ ಮೇಲೆಯೂ ತನ್ನ ಪ್ರಭಾವವನ್ನು ವಿಸ್ತರಿಸುತ್ತದೆ. ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದ ಇಂತಹ ಮಹನೀಯರು ತಮ್ಮ ವಿಶಿಷ್ಟ ಸಾಧನೆಯಿಂದ ಸಾಹಿತ್ಯದಲ್ಲಿಯೂ ಎಡೆಪಡೆದುಕೊಳ್ಳುತ್ತಾರೆ. ಅಂಧಕಾರದಲ್ಲಿ ಮುಳುಗಿದ್ದ ಲೋಕಕ್ಕೆ ಜ್ಞಾನದ ಬೆಳಕನ್ನು ತಂದ ಗೌತಮಬುದ್ಧನ ಜೀವನವೂ ಇದಕ್ಕೆ ಹೊರತಲ್ಲ. ಐತಿಹಾಸಿಕ ವ್ಯಕ್ತಿಯಾದ ಬುದ್ಧ ಸಾಹಿತ್ಯಿಕವಾಗಿ ಕೂಡ ಮಹತ್ವ ಪಡೆದುಕೊಂಡಿದ್ದಾನೆ. ಇಂತಹ ಮಹಾನ್ ಸಾಧಕನ ಜೀವನವನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿ ಅಪಾರವಾದ ಸಾಹಿತ್ಯರಾಶಿ ಸೃಷ್ಟಿಯಾಗಿದೆ.

ಗೌತಮಬುದ್ಧನ ಸಮಗ್ರ ಜೀವನವನ್ನೊ, ಅವನ ಜೀವನದಲ್ಲಿ ನಡೆದ ಒಂದು ಘಟನೆಯನ್ನೊ, ಆತನ ಜ್ಞಾನದ ಹಾದಿಯಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳನ್ನೊ, ಬುದ್ಧನ ಪ್ರಭಾವಲಯಕ್ಕೆ ಸಿಕ್ಕಿ ಬದಲಾದ ವ್ಯಕ್ತಿಗಳನ್ನೊ ಕುರಿತು ಬಹುತೇಕ ಭಾಷೆಗಳಲ್ಲಿ ಸಾಹಿತ್ಯದ ರಚನೆಯಾಗಿದ್ದು, ಬೌದ್ಧಧರ್ಮದ ಶ್ರೇಷ್ಠತೆಯ ಕಡೆಗೆ ಜನರ ಮನಸೆಳೆಯಲು ಪ್ರಯತ್ನಿಸಿವೆ. ಈ ನಿಟ್ಟಿನಲ್ಲಿ ೨೦ನೆಯ ಶತಮಾನದ ಕನ್ನಡ ಸಾಹಿತ್ಯ ಬೌದ್ಧ ಸಾಹಿತ್ಯದ ಪರ್ವಕಾಲವೆಂದರೆ ತಪ್ಪಾಗಲಾರದು. ನಮ್ಮ ಪ್ರಾಚೀನ ಸಾಹಿತ್ಯಪರಂಪರೆಯಲ್ಲಿ ಬುದ್ಧ ಪರವಾದ ರಚನೆ ಕಾಣಿಸಿಕೊಂಡಿದ್ದು ಆಧುನಿಕ ಕಾಲದಲ್ಲಿಯೆ. ಈ ಕಾಲಘಟ್ಟದಲ್ಲಿ ಬುದ್ಧ ಜೀವನದ ಕಥಾವಸ್ತುವನ್ನೊಳಗೊಂಡ ಕಾವ್ಯ, ಮಹಾಕಾವ್ಯ, ಖಂಡಕಾವ್ಯ, ನಾಟಕ, ಜೀವನಚರಿತ್ರೆ, ಕಥೆ ಹೀಗೆ ಹಲವು ಪ್ರಕಾರಗಳು ಸ್ವತಂತ್ರ ಹಾಗೂ ಅನುವಾದಿತ ರೂಪದಲ್ಲಿ ಕಾಣಿಸಿಕೊಂಡಿವೆ.

ಬುದ್ಧನ ಜೀವನ ಚರಿತ್ರೆ ಮತ್ತು ಸಾಧನೆ ಐತಿಹಾಸಿಕವಾಗಿ ಎಂತೊ ಅಂತೆಯೇ ಸಾಹಿತ್ಯಿಕವಾಗಿಯೂ ಮಹತ್ವದ್ದಾಗಿದೆ. ಸಂಸ್ಕೃತದ ಬೌದ್ಧಕವಿಯಾದ ಅಶ್ವಘೋಷನಿಂದ ಆಧುನಿಕ ಕಾಲದವರೆಗೆ ಬುದ್ಧನ ಬಗೆಗಿನ ಕಥಾವಸ್ತು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ.

ಸಾಹಿತ್ಯ ಮತ್ತು ಪುರಾಣಕಥೆಗಳಿರುವ ಸಂಬಂಧ ಉಳಿದೆಲ್ಲವುಗಳಿಗಿಂತ ವಿಶಿಷ್ಟವಾಗಿದ್ದು, ಪ್ರಾಚೀನ ಕಾಲದಿಂದಲೂ ಎಲ್ಲಾ ದೇಶಗಳ ಸಾಹಿತಿಗಳು ತಮ್ಮ ಪರಂಪರೆಯ ಪುರಾಣಗಳಿಂದ ಸಾಹಿತ್ಯ ನಿರ್ಮಾಣಕ್ಕೆ ಸತ್ವವನ್ನು ಪಡೆದಿದ್ದಾರೆ. ಪುರಾಣಕಥೆಗಳು ಸಾರ್ವತ್ರಿಕವಾಗಿ ಎಲ್ಲ ಕಾಲಕ್ಕೂ ಸಲ್ಲುವುದರಿಂದ ಸಾಹಿತಿಗಳು ಇದಕ್ಕೆ ವಿಶೇಷ ಪ್ರಾತಿನಿಧ್ಯ ನೀಡಿರುತ್ತಾರೆ. ಪುರಾಣದ ವಸ್ತುವೊಂದು ಸಾಹಿತ್ಯದ ಸೃಜನಶೀಲ ಪ್ರಕ್ರಿಯೆಗೆ ಒಳಗಾಗಿರುವ ರೀತಿ, ಅದರಲ್ಲಿ ಒಡಮೂಡಿರುವ ಲೇಖಕರ ದೃಷ್ಟಿಕೋನ, ಕಥಾವಸ್ತುವಿನ ವೈವಿಧ್ಯ, ಅಭಿವ್ಯಕ್ತಿಯ ವೈಶಿಷ್ಟ ಇವುಗಳ ವಿವೇಚನೆಯೇ ಪ್ರಸ್ತುತ ನಿಬಂಧದ ಉದ್ದೇಶವಾಗಿದೆ.

ಕಥಾವಸ್ತು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಯಾವುದೇ ಇರಲಿ ಸಾಹಿತ್ಯಿಕವಾಗಿ ಅದನ್ನು ಪುನರ್ ಸೃಜಿಸುವ ಲೇಖಕನ ಮನೋಧರ್ಮವೂ ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು, ಬಿ. ಪುಟ್ಟಸ್ವಾಮಯ್ಯ, ಮಾಸ್ತಿ, ಶಿವರಾಮಕಾರಂತ, ಪ್ರಭುಶಂಕರ, ಮನಜ ಈ ಆರು ಲೇಖಕರ ನಾಟಕಗಳನ್ನು ಮುಖ್ಯವಾಗಿರಿಸಿಕೊಂಡು ಈ ನಾಟಕಕಾರರ ದೃಷ್ಟಿಕೋನ, ಆಶಯ, ಧೋರಣೆಗಳನ್ನು ಅಧ್ಯಯನ ಮಾಡುವುದು ಈ ನಿಬಂಧದ ಉದ್ದೇಶವಾಗಿದೆ.

ಬೌದ್ಧಧರ್ಮದ ಸಂಸ್ಥಾಪಕನಾಗಿ, ವಿಶ್ವದ ಆಧ್ಯಾತ್ಮಿಕ ಅವತಾರ ಪುರುಷರಲ್ಲಿ ಒಬ್ಬನಾದ ಗೌತಮಬುದ್ಧ ಪ್ರಪಂಚದ ಕಷ್ಟ ಪರಂಪರೆಗಳ ಪರಿಹಾರಕ್ಕಾಗಿ ಸತ್ಯದ ಸಾಕ್ಷಾತ್ಕಾರಕ್ಕಾಗಿ ಮಧ್ಯರಾತ್ರಿಯಲ್ಲಿ ತನ್ನ ಸರ್ವಸಂಪತ್ತನ್ನು ಬಿಟ್ಟು ಹೊರಟವನು ಲೌಕಿಕದಿಂದ ಅಲೌಕಿಕದ ಕಡೆಗೆ ಸಾಗಿದ ಬುದ್ಧನ ಜೀವನ ಪಯಣವನ್ನು, ಪರಿವರ್ತನೆಯ ಹಾದಿಯನ್ನು ರಾಜ್ಯ ಕೋಶಗಳನ್ನು ತ್ಯಜಿಸಿ ಹೊರಟದ್ದು, ತಪಸ್ಸು ಮಾಡಿ ದಿವ್ಯ ಜ್ಞಾನವನ್ನು ಪಡೆದಿದ್ದು, ತನ್ನ ಸಿದ್ಧಿಯ ಫಲವನ್ನು ಲೋಕ ಕಲ್ಯಾಣಕ್ಕಾಗಿ ವಿನಿಯೋಗಿಸಲು ಮತ್ತೆ ಜನತೆಯ ಬಳಿಗೆ ಬಂದದ್ದು, ಹೀಗೆ ಮೂರು ಹಂತಗಳಲ್ಲಿ ಗುರುತಿಸಬಹುದು.

ಈ ಸಾಧನೆಯ ಹಾದಿಯನ್ನು ಜಗತ್ತಿನ ಹಲವು ಭಾಷೆಯ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ಬಿಂಬಿಸಲು ಪ್ರಯತ್ನಿಸಿವೆ. ಸಂಸ್ಕೃತ ಮೊದಲ್ಗೊಂಡು ಇತರ ಭಾರತೀಯ ಭಾಷೆಗಳಲ್ಲಿ ಪೂರ್ಣ ಪ್ರಮಾಣದಲ್ಲಿಯೊ, ಆಂಶಿಕವಾಗಿಯೊ, ಸ್ವತಂತ್ರ ಅಥವಾ ಅನುವಾದ ರೂಪದಲ್ಲಿಯೊ ಬೌದ್ಧಸಾಹಿತ್ಯ ರಚನೆಯಾಗಿದೆ. ಪ್ರಸ್ತುತ ನಿಬಂಧದಲ್ಲಿ ಆಧುನಿಕ ಕನ್ನಡ ನಾಟಕ

ಸಾಹಿತ್ಯ ಪ್ರಕಾರದಲ್ಲಿ ರಚಿತವಾಗಿರುವ ಗೌತಮಬುದ್ಧನ ಜೀವನ ಚಿತ್ರಣವನ್ನಷ್ಟೇ ವಿಶ್ಲೇಷಿಸಲಾಗಿದೆ. ಕನ್ನಡದಲ್ಲಿ ಈವರೆಗೆ ಬುದ್ಧನನ್ನು ಕುರಿತ ಹತ್ತು ನಾಟಕಗಳು ಬಂದಿದ್ದು, ಬೌದ್ಧಸಾಹಿತ್ಯಕ್ಕೆ ಆಧುನಿಕ ಕನ್ನಡ ನಾಟಕಕಾರರ ಮಹತ್ತರ ಕೊಡುಗೆ ಇದಾಗಿದೆ.

ಕುವೆಂಪು ಅವರ 'ಮಹಾರಾತ್ರಿ' (೧೯೩೧) ರಚನೆಯಾದ ನಂತರ ಬಂದ ಒಂಬತ್ತು ನಾಟಕಗಳು ಬುದ್ಧನ ಜೀವನದ ಕಥಾವಸ್ತುವನ್ನು ಒಳಗೊಂಡಿವೆ. ನಮ್ಮ ಹಲವಾರು ನಾಟಕಕಾರರು ಬೆರಗುಗೊಳಿಸುವ ಆ ಯುಗದ ದನಿಗೆ ಈ ಮೂಲಕ ಸ್ಪಂದಿಸಿದ್ದಾರೆ. ಒಂದೇ ಕಥಾವಸ್ತುವನ್ನೊಳಗೊಂಡ ಹಲವು ಕೃತಿಗಳು ರಚನೆಯಾದಾಗ ಒಂದಕ್ಕಿಂತ ಒಂದು ವಿಭಿನ್ನವಾಗಿರಬೇಕಾದುದು ಅನಿವಾರ್ಯವಾಗಿರುತ್ತದೆ. ಈ ವಿಭಿನ್ನತೆಯಲ್ಲಿಯೇ ಸಾಹಿತಿಯ ವೈಶಿಷ್ಟ್ಯ ಅಡಗಿರುತ್ತದೆ. ಅದರಲ್ಲಿಯೂ ಪುರಾಣವನ್ನು ಕಥಾವಸ್ತುವಾಗಿ ಆಯ್ಕೆ ಮಾಡಿಕೊಂಡವರಿಗೆ ಇದು ಅತ್ಯಗತ್ಯ. ಪುರಾಣದ ಪಾತ್ರಗಳು ಈಗಾಗಲೇ ಜನಮಾನಸದಲ್ಲಿ ಅಚ್ಚಾಗಿರುವುದರಿಂದ, ಆ ಜನರ ಪರಂಪರಾಗತ ನಂಬಿಕೆಗಳಿಗೆ ಕುಂದಾಗದಂತೆ ಜಾಗ್ರತೆ ವಹಿಸುವುದರ ಜೊತೆಗೆ ತನ್ನ ಸ್ವಂತಿಕೆಯನ್ನು ಸಾಹಿತಿಯಾದವನು ಮೆರೆಯಬೇಕಾಗುತ್ತದೆ. ಈ ಸ್ವಂತಿಕೆ ಕಥಾವಸ್ತುವಿನ ಆಯ್ಕೆಯಲ್ಲಿಯೊ, ಅದರ ನಿರೂಪಣೆಯಲ್ಲಿಯೊ ಅಭಿವ್ಯಕ್ತಿಯಲ್ಲಿಯೊ ಕಾಣಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಗಳನ್ನು ಅಧ್ಯಯನ ಮಾಡಲಾಗುತ್ತದೆ.

ಈಗಾಗಲೇ ಈ ನಾಟಕಕೃತಿಗಳನ್ನು ಕುರಿತ ಸಾಂದರ್ಭಿಕ ವಿಮರ್ಶೆ, ಬಿಡಿ ಲೇಖನಗಳು ಪ್ರಕಟವಾಗಿದ್ದರೂ ಈ ಎಲ್ಲಾ ಕೃತಿಗಳನ್ನು ಒಟ್ಟಿಗಿಟ್ಟು ಅವುಗಳ ತೌಲನಿಕ ವಿವೇಚನೆ ಮಾಡುವುದು ಇಲ್ಲಿಯ ಉದ್ದೇಶ. ಈ ನಾಟಕಗಳ ರಚನಕಾರರು ಜನಪ್ರಿಯ ಸಾಹಿತಿಗಳಾಗಿದ್ದು, ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಂತಹವರು. ಅವರುಗಳ ಸಾಹಿತ್ಯ ನಿರ್ಮಾಣದ ಪ್ರತಿಭೆ ನಾಟಕ ಪ್ರಕಾರದಲ್ಲಿ ಹೇಗೆ ಹೊರಹೊಮ್ಮಿದೆ ಎಂಬುದನ್ನು ಈ ನಿಬಂಧದಲ್ಲಿ ಅದೇ ವಸ್ತುವಿನ ಇತರ ನಾಟಕಗಳೊಂದಿಗೆ ಇಟ್ಟು ತೌಲನಿಕವಾಗಿ ವಿವೇಚಿಸಲಾಗುವುದು.

~*~*~*~*~

ಅಧ್ಯಾಯ–೨

ನಾಟಕಕಾರರ ಪರಿಚಯ

ಸಾಹಿತ್ಯವನ್ನು ಜನಜೀವನದ ಗತಿಬಿಂಬ ಎಂಬರ್ಥದಲ್ಲಿ ಪರಿಭಾವಿಸುವುದಾದರೆ ಯಾವುದೇ ಸಾಹಿತ್ಯಕೃತಿ ಅಂದಂದಿನ ಜನಜೀವನದ ಗತಿಯನ್ನು ಬಿಂಬಿಸುತ್ತದೆ. ಉದಾಹರಣೆಗೆ ಪಂಪನ ಕಾಲದ ಕ್ಷಾತ್ರ, ತ್ಯಾಗ, ಭೋಗ, ೧೨ನೇ ಶತಮಾನದ ಭಕ್ತಿ ಇತ್ಯಾದಿ. ಹಾಗೆಯೇ ಕಾಲದ ಜೊತೆಯಲ್ಲಿಯೇ ಕೃತಿಯ ಕರ್ತೃವಿನ ಮನೋಭಾವ, ಆತ ಇದೇ ವಸ್ತುವನ್ನು ಆಯ್ಕೆ ಮಾಡಿಕೊಳ್ಳಲು ಇರುವ ಕಾರಣ, ಹಿನ್ನೆಲೆಯೂ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ನಿಬಂಧದ ವ್ಯಾಪ್ತಿಗೆ ಒಳಪಡುವ ನಾಟಕಗಳಲ್ಲಿ ಐದು ನಾಟಕಗಳು ರಚನೆಯಾದುದು ನವೋದಯ ಕಾಲಘಟ್ಟದಲ್ಲಿ. ಎಲ್ಲ ಮಹತ್ತಾದುದನ್ನು ಸುಂದರವಾದುದನ್ನು ಚಿತ್ರಿಸುವುದು ಸಾಹಿತ್ಯದ ಉದ್ದೇಶವಾಗಿದ್ದಂತಹ ಕಾಲದಲ್ಲಿ. ಅಲ್ಲದೆ ಸಮಾಜದ ಮೇಲೆ ಪ್ರಭಾವಬೀರಿದ, ಬದುಕಿನಲ್ಲಿ ಉನ್ನತ ಆದರ್ಶಗಳನ್ನು ಮೆರೆದ ಮಹಾತ್ಮರ ಜೀವನವನ್ನು ಸಮಾಜದ ಮುಂದಿಟ್ಟು ಸಮಾಜದ ಕಣ್ತೆರೆಸುವ, ಸಾಹಿತ್ಯವನ್ನು ಸಾಮಾಜಿಕ ಅಸ್ತ್ರವಾಗಿ ಪರಿಗಣಿಸುತ್ತಿದ್ದ ಸಾಹಿತಿಗಳಿಂದ ರಚನೆಯಾದಂತಹ ನಾಟಕಕೃತಿಗಳಿವು. ಇನ್ನು ಪ್ರಭುಶಂಕರರಿಂದ ರಚನೆಯಾದ ನಾಲ್ಕು ನಾಟಕಗಳು ನವೋದಯದ ಪ್ರಭಾವಕ್ಕೆ ಒಳಗಾದಂಥವು. ಮನದ ಅವರ 'ಜಲ' ಬಂಡಾಯಸಾಹಿತ್ಯದ ಹಿನ್ನೆಲೆಯಲ್ಲಿ ರಚನೆಯಾಗಿರುವಂಥದ್ದು. ಹಾಗಾಗಿ ಈ ನಿಬಂಧದಲ್ಲಿ ಕೃತಿಗಳಷ್ಟೇ ಮುಖ್ಯವಾಗದೆ ಅದನ್ನು ರಚಿಸಿರುವ ಸಾಹಿತಿಗಳೂ ಮುಖ್ಯವಾಗುತ್ತಾರೆ. ಬುದ್ಧನಂತಹ ಮಹಾನ್ ಸಾಧಕನ ಜೀವನವನ್ನು ತಮ್ಮ ಸಾಹಿತ್ಯದ ವಸ್ತುವಾಗಿ ಆಯ್ಕೆಮಾಡಿಕೊಂಡ ಲೇಖಕರ ಕಿರುಪರಿಚಯ ಇಲ್ಲಿದೆ.

ಕಾಲಮಾನದ ದೃಷ್ಟಿಯಿಂದ ಬುದ್ಧನ ಕುರಿತ ಕನ್ನಡ ನಾಟಕವನ್ನು ರಚಿಸಿದವರಲ್ಲಿ ಕುವೆಂಪು ಅವರು ಮೊದಲಿಗರು. ಜಗದಕವಿ, ಯುಗದಕವಿ ಎಂದು ಕೀರ್ತಿತರಾಗಿರುವ ಕುವೆಂಪುರವರು ಕನ್ನಡ ಸಾಹಿತ್ಯ ಪರಂಪರೆಯ ಮೇರು ಶಿಖರ. ತಮ್ಮ ಅನನ್ಯ ಸೃಜನಶೀಲ ಪ್ರತಿಭೆಯಿಂದ, ಅಪೂರ್ವವಾದ ಸಾಮಾಜಿಕ ಕಾಳಜಿಯಿಂದ ಕೂಡಿದ ಕೃತಿಗಳನ್ನು ರಚಿಸಿದವರು. ಕನ್ನಡ ಸಾಹಿತ್ಯದ ಹಿರಿಮೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಿದಂತಹವರು.

ಕಾವ್ಯ, ಮಹಾಕಾವ್ಯ, ಕಾದಂಬರಿ, ಸಣ್ಣಕಥೆ, ನಾಟಕ, ಸಾಹಿತ್ಯ ವಿಮರ್ಶೆ ಮತ್ತು ಮೀಮಾಂಸೆ ಈ ಎಲ್ಲ ಪ್ರಕಾರದಲ್ಲೂ ಗಣನೀಯ ಕೊಡುಗೆ ಸಲ್ಲಿಸಿರುವ ಕುವೆಂಪು ಅವರ ಕೃತಿಗಳನ್ನು ಹೊರತುಪಡಿಸಿ ಸಾಹಿತಾಧ್ಯಯನ ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಅವರ ಪ್ರತಿಭೆಯ ಛಾಪು ಕನ್ನಡ ಸಾಹಿತ್ಯಕ್ಕಿದೆ.

೧೯೦೪ ಡಿಸೆಂಬರ್ ೨೯ ರಂದು ಜನಿಸಿದ ಕುವೆಂಪು ಅವರು ೧೯೧೮ರಿಂದ ೧೯೨೮ ರವರೆಗೆ ಮೈಸೂರಿನಲ್ಲಿ ಎಂ.ಎ ವರೆಗೆ ವ್ಯಾಸಂಗಮಾಡಿದರು. ೧೯೨೨ರಲ್ಲಿ ತಮ್ಮ ಮೊದಲ ಇಂಗ್ಲಿಷ್ ಪದ್ಯಗಳ ಸಂಕಲನ 'ಬಿಗಿನರ್ಸ್ ಮ್ಯೂಸ್' ಪ್ರಕಟಿಸಿದರು. ಮುಂದೆ ಜೇಮ್ಸ್ ಕಸಿನ್ಸ್‌ರವರು ನೀಡಿದ ಸಲಹೆಯಿಂದ ಕವಿಯ ಜೀವನವಾಹಿನಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಹರಿಯತೊಡಗಿತು.

ಕುವೆಂಪು ಅವರ ಸಾಹಿತ್ಯ ಕೃತಿಗಳ ವಸ್ತು ವೈವಿಧ್ಯ ಬೆರಗುಗೊಳಿಸುವಂಥದ್ದು. ಪ್ರಕೃತಿ, ಕ್ರಾಂತಿ ಮತ್ತು ಅಧ್ಯಾತ್ಮವನ್ನೊಳಗೊಂಡ ಕವನಸಂಕಲನಗಳು, ಸಾಮಾಜಿಕ ಕಳಕಳಿ ಹಾಗೂ ಶೂದ್ರಪ್ರಜ್ಞೆಯನ್ನು ಒಳಗೊಂಡ 'ಬೆರಳ್‌ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ' ಮೊದಲಾದ ನಾಟಕಗಳನ್ನು, ಮಲೆನಾಡಿನ ಜನಜೀವನದ ಸಮಗ್ರ ಚಿತ್ರಣ ನೀಡುವ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳನ್ನು, ವಿಚಾರ ಪ್ರಧಾನವಾದ 'ನನ್ನದೇವರು ಮತ್ತು ಇತರ ಕಥೆಗಳು', 'ಸಂನ್ಯಾಸಿ ಮತ್ತು ಇತರ ಕಥೆಗಳು', ಕಥಾ ಸಂಕಲನಗಳನ್ನು ಮಹಾಕಾವ್ಯವಾದ 'ಶ್ರೀರಾಮಾಯಣದರ್ಶನಂ' ಮೊದಲಾದ ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ಕೃತಿಗಳನ್ನು ಕುವೆಂಪು ರಚಿಸಿದ್ದಾರೆ. ಕುವೆಂಪು ಅವರು ಮೂಲತಃ ಕವಿಯಾಗಿದ್ದರೂ ಕಾವ್ಯ, ಕಥೆ, ಕಾದಂಬರಿ, ಜೀವನಚಿತ್ರ, ಮಕ್ಕಳ ಸಾಹಿತ್ಯ, ವಿಮರ್ಶೆ, ವಿಚಾರ, ಆತ್ಮಕತೆ ಮುಂತಾದ ಪ್ರಕಾರಗಳಲ್ಲಿ ೮೦ ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ.

ಪ್ರಧಾನತಃ ವಿಚಾರಶೀಲ ವ್ಯಕ್ತಿತ್ವದ, ಕ್ರಾಂತಿಕಾರಕ ಮನೋಭಾವದ, ಮೌಢ್ಯದ ಪರಮವಿರೋಧಿಯಾದ ಕುವೆಂಪು ಅವರಿಗೆ ಸಂದಿರುವ ಪ್ರಶಸ್ತಿಗಳು ಹಲವಾರು. ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು, ಬೆಂಗಳೂರು, ಕರ್ನಾಟಕ, ಕಾನ್ಪುರ ವಿಶ್ವವಿದ್ಯಾನಿಲಯಗಳಿಂದ ಗೌರವ 'ಡಿ.ಲಿಟ್' ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ, ಗೌರವ ಡಾಕ್ಟರೇಟ್, ಪಂಪಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿಗಳು ಶ್ರೀಯುತರನ್ನು ಅಲಂಕರಿಸಿ ನಿಜವಾದ ಅರ್ಥದಲ್ಲಿ ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿವೆ.

ಕುವೆಂಪು ಅವರು ರಚಿಸಿರುವ ಹದಿಮೂರು ನಾಟಕಗಳಲ್ಲಿ 'ಮಹಾರಾತ್ರಿ'ಯೂ ಒಂದಾಗಿದ್ದು, ಸಿದ್ಧಾರ್ಥನ ಜೀವನ ಮಹತ್ವದ ತಿರುವು ಪಡೆದುಕೊಂಡ, ಆತ ಸಂಸಾರ ತ್ಯಜಿಸಿ ಸನ್ಯಾಸದ ಕಡೆಗೆ ತನ್ನ ಒಲವು ತೋರಿದ ಆ ರಾತ್ರಿಯನ್ನು ಕುರಿತದ್ದಾಗಿದೆ.

ಬಿ. ಪುಟ್ಟಸ್ವಾಮಯ್ಯ :

'ಕ್ರಾಂತಿಕಲ್ಯಾಣ' ಎಂಬ ತಮ್ಮ ಕಾದಂಬರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿರುವ ಬಿ. ಪುಟ್ಟಸ್ವಾಮಯ್ಯನವರು ನಾಟಕಕಾರರಾಗಿಯೇ ಚಿರಪರಿಚಿತರು. ಇವರು ಇಪ್ಪತೆರಡು ನಾಟಕಗಳನ್ನು ರಚಿಸಿದ್ದು, ಅವುಗಳು ಯಾವುದೇ ಕೀಳು ಅಭಿರುಚಿಯಿಲ್ಲದ ಕಲಾತ್ಮಕ ಗುಣದಿಂದ ನಾಟಕ ಪ್ರಪಂಚದಲ್ಲಿ ವಿಶಿಷ್ಟವಾಗಿ ನಿಲ್ಲುವಂಥವು. ರಂಗಭೂಮಿಯ ಚಟುವಟಿಕೆಗಳಿಗೆ ಶುದ್ಧ ಸಾಹಿತ್ಯಕ ಸ್ಪರ್ಶವನ್ನು, ದೃಶ್ಯ ವೈಭವವನ್ನು ತಂದುಕೊಟ್ಟ ಕೀರ್ತಿ ಅವರದು.

೧೮೯೭ ಮೇ ೨೭ರಂದು ಬೆಂಗಳೂರಿನಲ್ಲಿ ಜನಿಸಿದ ಬಿ. ಪುಟ್ಟಸ್ವಾಮಯ್ಯರವರು ಬಾಲ್ಯದಲ್ಲಿ ತಂದೆಯನ್ನು ಕಳೆದುಕೊಂಡದ್ದರಿಂದ ಅವರ ವಿದ್ಯಾಭ್ಯಾಸ ಪ್ರೌಢಶಾಲಾ ಹಂತದಲ್ಲೇ ಸ್ಥಗಿತಗೊಂಡಿತ್ತು. ಆದರೆ ಇದು ಅವರ ಸೃಜನಶೀಲ ಪ್ರಕ್ರಿಯೆಗೆ ಹಾಗೂ ಅಧ್ಯಯನಕ್ಕೆ ಯಾವುದೇ ರೀತಿಯ ತೊಡಕುಂಟು ಮಾಡಲಿಲ್ಲ. ಶಾಸ್ತ್ರೀಯವಾಗಿ ಶಾಲೆ ಕಲಿಯದಿದ್ದರೂ ಅವರ ಅಧ್ಯಯನದ ಜ್ಞಾನ ಅಪಾರವಾಗಿತ್ತು. ಪತ್ರಕರ್ತರಾಗಿ ವೃತ್ತಿಜೀವನವನ್ನು ಆರಂಭಿಸಿದ ಪುಟ್ಟಸ್ವಾಮಯ್ಯನವರು ನ್ಯೂ ಮೈಸೂರ್, ಒಕ್ಕಲಿಗರ ಪತ್ರಿಕೆ, ಜನವಾಣಿ, ಪ್ರಜಾವಾಣಿ, ಜನ್ಮಭೂಮಿ ಪತ್ರಿಕೆಗಳಲ್ಲಿ ಸುದ್ದಿ ಸಂಗ್ರಾಹಕರಾಗಿ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಸ್ವತಃ 'ಪ್ರತಿಭಾ' ಎಂಬ ಪತ್ರಿಕೆಯನ್ನು ಆರಂಭಿಸಿ ನಷ್ಟಹೊಂದಿದ ನಂತರ ಪತ್ರಿಕೋದ್ಯಮ ಬರವಣಿಗೆಯಿಂದ ಸಂಶೋಧನಾಧಾರಿತ ಸೃಜನಶೀಲ ಬರವಣಿಗೆಯ ಕಡೆಗೆ ತೊಡಗಿಕೊಂಡರು. ಕಾದಂಬರಿ ಮತ್ತು ನಾಟಕಗಳನ್ನು ರಚಿಸಿ ಯಶಸ್ವಿಯಾದ ನಂತರ ಚಲನಚಿತ್ರ ಸಾಹಿತಿಯಾಗಿ, ಚಿತ್ರ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದರು. ಪತ್ರಿಕೋದ್ಯಮ, ಸಾಹಿತ್ಯ, ಚಿತ್ರರಂಗ ಹಾಗೂ ರಂಗಭೂಮಿಗೆ ಗಣನೀಯ ಕೊಡುಗೆ ಸಲ್ಲಿಸಿದ ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

ನವೋದಯ ಕಾಲಘಟ್ಟದಲ್ಲಿ ನಾಟಕ ರಚನೆಯಲ್ಲಿ ತೊಡಗಿಕೊಂಡಿದ್ದ ಬಿ. ಪುಟ್ಟಸ್ವಾಮಯ್ಯನವರು ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳನ್ನು, ಘಟನೆಗಳನ್ನು ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡು, ಆ ಮೂಲಕ ಪರಂಪರಾಗತ ಆದರ್ಶ ಮತ್ತು ಮೌಲ್ಯಗಳನ್ನು ಕಲಾತ್ಮಕ ಅಭಿವ್ಯಕ್ತಿಯಿಂದ ಸಮಾಜದ ಮುಂದಿಟ್ಟರು. ಇವರು ರಚಿಸಿದ ಹಲವು ಐತಿಹಾಸಿಕ ನಾಟಕಗಳಲ್ಲಿ 'ಗೌತಮಬುದ್ಧ' ನಾಟಕವೂ ಒಂದಾಗಿದ್ದು, ಗೌತಮಬುದ್ಧನ ಸಮಗ್ರ ಜೀವನವನ್ನು ಚಿತ್ರಿಸುತ್ತದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್:

ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ನವೋದಯ ಸಾಹಿತಿಗಳಲ್ಲಿ ಅಗ್ರಪಂಕ್ತಿಯ ಹೆಸರು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರದು. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬಲ್ಲಿ ೧೮೯೧ ರ ಜೂನ್ ೦೮ ರಂದು ಜನಿಸಿದ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು 'ಶ್ರೀನಿವಾಸ' ಕಾವ್ಯನಾಮದಿಂದ ಪ್ರಸಿದ್ಧರಾದವರು. ಜೀವನಾನುಭವದಿಂದ ಸಮೃದ್ಧವಾದ, ಆತ್ಮಸಂಯಮದಿಂದ ಕೂಡಿದ ಬರವಣಿಗೆಯಿಂದ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟ ಧೀಮಂತ ಸಾಹಿತಿ.

ಬಾಲ್ಯದುದ್ದಕ್ಕೂ ಬಡತನದಲ್ಲಿಯೇ ಬೆಳೆದುಬಂದರೂ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳಿಂದ ಉನ್ನತ ಸ್ಥಾನಗಳನ್ನು ಅಲಂಕರಿಸಿದ ಮಾಸ್ತಿಯವರು ಸೇವೆಯ ಜೊತೆ ಜೊತೆಯಲ್ಲಿಯೇ ಸಾಹಿತ್ಯ ಸೇವೆಯನ್ನೂ ಮಾಡಿದವರು. ಕಥೆ, ಕಾದಂಬರಿ, ಕವಿತೆ, ನಾಟಕವಿಮರ್ಶೆ, ಜೀವನಚರಿತ್ರೆ, ಆತ್ಮಕಥೆ, ಚಿಂತನೆ, ಅನುವಾದ ಮೊದಲಾದ ಕ್ಷೇತ್ರಗಳಲ್ಲಿ ಮಹತ್ವದ ಕಾಣಿಕೆಯನ್ನು ನೀಡಿದವರು. ಕನ್ನಡವಲ್ಲದೆ ಇಂಗ್ಲಿಷ್, ಸಂಸ್ಕೃತ, ತಮಿಳು ಭಾಷೆಗಳಲ್ಲೂ ಪರಿಣಿತರಾಗಿದ್ದ ಮಾಸ್ತಿಯವರು ಅನುವಾದ ಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. ಮಾಸ್ತಿಯವರ ಸಾಹಿತ್ಯ ಸೇವೆಗಾಗಿ ಅತ್ಯುನ್ನತ ಗೌರವವಾದ ಜ್ಞಾನಪೀಠ ಪ್ರಶಸ್ತಿಯೂ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

ಬದುಕಿನಲ್ಲಿ ಆದರ್ಶ ಮತ್ತು ಮೌಲ್ಯಗಳನ್ನು ಗೌರವಿಸಿದ ಮಾಸ್ತಿಯವರ ಬರವಣಿಗೆಯಲ್ಲೂ ಅದನ್ನು ಗುರುತಿಸಬಹುದು. ಮಾಸ್ತಿಯವರ ಕೃತಿಗಳಲ್ಲಿನ ಸರಳತೆ ಅಲ್ಲಿನ

ಪಾತ್ರಗಳ ಆದರ್ಶ ಬದುಕಿನ ಬಗೆಗಿನ ಅವರ ದೃಷ್ಟಿಕೋನವನ್ನು ಬಿಂಬಿಸುವಂಥವೇ ಆಗಿವೆ. ಒಳಿತನ್ನು ಚಿತ್ರಿಸುವ, ಆ ಮೂಲಕ ಸಮಾಜಕ್ಕೆ ಸಂದೇಶ ನೀಡುವ ಅವರ ವಿಶಾಲ ದೃಷ್ಟಿಕೋನ, ನ್ಯಾಯವಾದುದನ್ನು ಗೌರವಿಸುತ್ತಲೇ ಅನ್ಯಾಯವನ್ನು ಪ್ರತಿಭಟಿಸುವ ಅವರ ಸೂಕ್ಷ್ಮ ಮನೋಭಾವವನ್ನು ಅವರ ಕೃತಿಗಳಲ್ಲಿ ಕಾಣಬಹುದು. ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಕೈಯಾಡಿಸಿರುವ ಮಾಸ್ತಿಯವರು ೧೬ ನಾಟಕಗಳನ್ನು ರಚಿಸಿದ್ದು, ಇವುಗಳು ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳಾಗಿವೆ. ಅವುಗಳಲ್ಲಿ ಪ್ರಸ್ತುತ 'ಯಶೋಧರಾ' ಸರಳ ರಗಳೆಯ ಗೀತನಾಟಕವಾಗಿದ್ದು, ಬುದ್ಧನ ಪೂರ್ವಾಶ್ರಮದ ಸತಿ ಯಶೋಧರೆಯನ್ನು ಮತ್ತು ಅವಳ ದೃಷ್ಟಿಕೋನದಲ್ಲಿ ಗೌತಮಬುದ್ಧನನ್ನು ಚಿತ್ರಿಸಲಾಗಿದೆ.

ಶಿವರಾಮ ಕಾರಂತ :

ಬಾಳ್ವೆ ಸ್ವೀಕಾರಕ್ಕಿದೆ ನಿರಾಕರಣೆಗಲ್ಲ ಎಂಬ ಧೋರಣೆಯ ಕಾರಂತರದು ಬಹುಮುಖ ಪ್ರತಿಭೆ. ಸಾಹಿತ್ಯ, ರಂಗಭೂಮಿ, ಚಿತ್ರರಂಗ, ವಿಜ್ಞಾನ, ಚಿತ್ರಕಲೆ, ಸಂಗೀತ, ಶಿಕ್ಷಣ, ರಾಜಕೀಯ, ಪತ್ರಿಕೋದ್ಯಮ, ಭಾಷೆ, ಸಂಸ್ಕೃತಿ ಹೀಗೆ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ವ್ಯಕ್ತಿತ್ವದ ಛಾಪನ್ನು ಮೂಡಿಸಿದವರು. ಅವರಿಗಿದ್ದ ಸಾಮಾಜಿಕ ಕಳಕಳಿಯೇ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತೊಡಗಿಕೊಳ್ಳಲು ಕಾರಣವಾಯಿತು.

೧೯೦೨ರ ಅಕ್ಟೋಬರ್ ೧೦ರಂದು ಉಡುಪಿ ಜಿಲ್ಲೆಯ ಕೋಟ ಎಂಬಲ್ಲಿ ಜನಿಸಿದ ಕಾರಂತರು ಕಾಲೇಜು ಓದುತ್ತಿದ್ದಾಗಲೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದವರು. ಬದುಕಿನಲ್ಲಿ ಎಲ್ಲವನ್ನು ಅನುಭವಿಸಬೇಕು, ಅನುಭವಿಸಿದ್ದನ್ನು ಅಭಿವ್ಯಕ್ತಿಸಬೇಕು ಎಂಬುದು ಕಾರಂತರ ಬದುಕಿನ ಸೂತ್ರ. ಈ ಕಾರಣಕ್ಕಾಗಿಯೇ ಕಾರಂತರ ಬದುಕು ಮತ್ತು ಬರವಣಿಗೆ ಬೇರೆಯಾಗಿರಲಿಲ್ಲ.

ಕಾದಂಬರಿ ಅವರ ಸಾಹಿತ್ಯದ ಮುಖ್ಯ ಪ್ರಕಾರವಾಗಿದ್ದು 'ಮೂಕಜ್ಜಿಯ ಕನಸುಗಳು' ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದರೂ ಕಾವ್ಯ, ನಾಟಕ, ಸಣ್ಣಕಥೆ, ಹರಟೆ, ವಿಡಂಬನೆ, ಬಾಲಸಾಹಿತ್ಯ, ವಿಚಾರಸಾಹಿತ್ಯ, ಯಕ್ಷಗಾನ, ಪ್ರವಾಸಕಥನ, ಜೀವನಚರಿತ್ರೆ, ಆತ್ಮಕತೆ, ನಿಘಂಟು

ಮೊದಲಾದ ಪ್ರಕಾರಗಳಲ್ಲೂ ಸಾಹಿತ್ಯ ಕೃಷಿ ನಡೆಸಿದ್ದಾರೆ. ಅವರ ಸಾಹಿತ್ಯ ಕೃಷಿಗಾಗಿ ಅವರಿಗೆ ದೊರೆತಿರುವ ಪ್ರಶಸ್ತಿಗಳು ಅಸಂಖ್ಯಾತ.

ಖಚಿತ ಮತ್ತು ವಿಶ್ಲೇಷಣಾತ್ಮಕ ಬರವಣಿಗೆಯ ಕಾರಂತರ ಕೃತಿಗಳಲ್ಲಿ ಭಾವುಕ ತನ್ಮಯತೆಯಲ್ಲದೆ ವಾಸ್ತವದ ಚಿತ್ರಣವಿರುತ್ತದೆ. ಈ ವಾಸ್ತವ ಚಿತ್ರಣದಿಂದಲೇ ಅವರು ಜನಜಾಗೃತಿಗಾಗಿ ನಾಟಕಗಳನ್ನು ರಚಿಸಿ, ಅದನ್ನು ರಂಗಭೂಮಿಗೆ ಅಳವಡಿಸುವ ಪ್ರಯತ್ನವನ್ನೂ ಮಾಡಿದರು. ಕಾರಂತರು ಎಲ್ಲ ವಿಧದ ನಾಟಕಗಳನ್ನು ರಚಿಸಿದ್ದು, ಅವುಗಳಲ್ಲಿ ಸಿದ್ಧಾರ್ಥ ವೈರಾಗ್ಯ ಪರವಶನಾಗುವುದು ಮತ್ತು ಆತನಿಗೆ ಜ್ಞಾನೋದಯವಾಗುವ ವಸ್ತುವನ್ನೊಳಗೊಂಡ 'ಬುದ್ಧೋದಯ' ಹಾಗೂ ಸಾವಿನ ಅನಿವಾರ್ಯತೆಯನ್ನು ತಾಯಿಯೊಬ್ಬಳಿಗೆ ತಿಳಿಸಿಕೊಡುವ ಬುದ್ಧನ ಜೀವನ ಸಂದರ್ಭವನ್ನು ವಿವರಿಸುವ 'ಕಿಸಾಗೋತಮಿ' ಎಂಬೆರಡು ನಾಟಕಗಳು ಬುದ್ಧ ಜೀವನಕ್ಕೆ ಸಂಬಂಧಿಸಿದ್ದಾಗಿವೆ.

ಪ್ರಭುಶಂಕರ :

೧೯೨೮ ರಲ್ಲಿ ಮೈಸೂರಿನಲ್ಲಿ ಜನಿಸಿದ ಪ್ರಭುಶಂಕರ ಅವರು ಕನ್ನಡ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದರು. ವೃತ್ತಿಗೆ ಸಹಜವಾದ ಸಾಹಿತ್ಯದ ಒಲವು ಅವರಿಗಿದ್ದು, ಅದು ಅವರ ಸೃಜನಶೀಲ ಪ್ರಕ್ರಿಯೆಗೆ ನೆರವು ನೀಡಿದೆ. ಇವರ ಸಾಹಿತ್ಯಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೊರೂರು ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿದ್ದು, ಕುವೆಂಪು ಅವರ ಮಾರ್ಗದರ್ಶನದಲ್ಲಿ 'ಕನ್ನಡದಲ್ಲಿ ಭಾವಗೀತೆ' ಎಂಬ ಮಹಾಪ್ರಬಂಧವನ್ನು ಸಲ್ಲಿಸಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಪ್ರಥಮ ಪಿ.ಹೆಚ್.ಡಿ ಪದವಿ ಪಡೆದ ಹಿರಿಮೆ ಇವರದು.

ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದ, ಕುವೆಂಪು ಅವರುಗಳ ಪ್ರಭಾವಕ್ಕೊಳಗಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡ ಪ್ರಭುಶಂಕರ ಅವರು 'ಬುದ್ಧ ನಾಟಕ ಚಕ್ರ' ಎಂಬ ಹೆಸರಿನಲ್ಲಿ ಬುದ್ಧನ ಜೀವನವನ್ನು ಮತ್ತು ಅವನ ಜೀವನಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಕುರಿತು ನಾಲ್ಕು ನಾಟಕಗಳನ್ನು ರಚಿಸಿದ್ದಾರೆ.

ಮ.ನ. ಜವರಯ್ಯ :

ಮನಜ ಎಂದೇ ಖ್ಯಾತರಾದ ಮ.ನ.ಜವರಯ್ಯ ದಲಿತ ಬಂಡಾಯ ಸಾಹಿತ್ಯ ಪರಂಪರೆಯಲ್ಲಿ ಕೇಳಿಬರುವ ಪ್ರಮುಖ ಹೆಸರು. ಕಾವ್ಯ, ಕತೆ, ಕಾದಂಬರಿ, ನಾಟಕ, ವಿಚಾರ, ಅನುವಾದ, ಸಂಶೋಧನೆ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು ಸುಮಾರು ೨೫ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಕೇಳು ಜಗಮಾದಿಗ ಹೊಲೆಯ' ಇವರ ಮೊದಲ ಪ್ರಕಟಿತ ಕೃತಿಯಾಗಿದ್ದು, 'ಮಾಗಿ' ಇವರ ಕಾದಂಬರಿಯಾಗಿದೆ. 'ದಲಿತ ವರ್ಗದ ಶರಣರು ಒಂದು ಅಧ್ಯಯನ' ಕೃತಿಗೆ ಪಿ.ಹೆಚ್.ಡಿ ಪದವಿಯನ್ನು ಶ್ರೀಯುತರು ಪಡೆದಿದ್ದಾರೆ.

ಎಡಪಂಥೀಯ ಆಲೋಚನೆ ಹಾಗೂ ವಿಚಾರಶಕ್ತಿಯುಳ್ಳ ಶ್ರೀಯುತರ ಕೃತಿಗಳಲ್ಲಿ ಸಾಮಾಜಿಕ ಪ್ರತಿಭಟನೆಯನ್ನು, ವಿನೂತನ ದೃಷ್ಟಿಕೋನವನ್ನು ಗುರುತಿಸಬಹುದು. ಹಾಗೆಯೇ ಗಾಂಧಿ, ಬುದ್ಧ, ಅಂಬೇಡ್ಕರ್‌ರವರನ್ನು ಕುರಿತು ಅಧ್ಯಯನ ಮಾಡಿರುವುದರಿಂದ, ಅವರ ಕೃತಿಗಳಲ್ಲಿ ಈ ಮಹಾನ್ ಚೇತನಗಳ ತತ್ವ ಬೋಧನೆಗಳ ಪ್ರಭಾವವಿರುವುದನ್ನು ಕಾಣಬಹುದು. ಮನಜ 'ಮಾಗಿ' ಕಾದಂಬರಿಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು, ಅಂಬೇಡ್ಕರ್ ಸಮಗ್ರ ಸಾಹಿತ್ಯ ಅಧ್ಯಯನ ಸಂಪುಟಗಳ ಕೃತಿಗೆ 'ವಿಶ್ವಮಾನವ' ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಮನಜ ಅವರ 'ಜಲ' ನಾಟಕ ಹಿಂದಿನವರು ಚಿತ್ರಿಸಿದ ಸಾಂಪ್ರದಾಯಿಕ ಬುದ್ಧನನ್ನು ಚಿತ್ರಿಸದೆ ಶಾಕ್ಯರ ನೀತಿಸಂಹಿತೆಯನ್ನು, ಸಿದ್ಧಾರ್ಥನ ವೈರಾಗ್ಯ ಮತ್ತು ವಿರೋಧಿಗಳ ಕುತಂತ್ರಕ್ಕೆ ಆತ ಬಲಿಯಾದುದನ್ನು, ಶಾಕ್ಯಗಣ ಮತ್ತು ನೆರೆರಾಜ್ಯದವರಿಗಿದ್ದ ಜಲ ವಿವಾದದಂತಹ ಮಹತ್ವದ ವಿಚಾರವನ್ನು ಕುರಿತದ್ದಾಗಿದೆ.

~*~*~*~*~

ಅಧ್ಯಾಯ–೩

ಬುದ್ಧನ ಜೀವನ ಚರಿತ್ರೆ

ಭಾರತದ ಮಂಗಳಮಯ ಸಂಸ್ಕೃತಿಯ ದಿವ್ಯಸಾಗರದಲ್ಲಿ ಉದಯವಾದ ಬೌದ್ಧಧರ್ಮದ ಸಂಸ್ಥಾಪಕ ಗೌತಮಬುದ್ಧ. ಈತ ಕೇವಲ ಕಾಲ್ಪನಿಕ ವ್ಯಕ್ತಿಯಲ್ಲ. ಈ ಪ್ರಪಂಚದಲ್ಲಿ ವಾಸ್ತವವಾಗಿ ಜೀವಿಸಿದ ಮಹಾಬೋಧಕ. ಚರಿತ್ರಕಾರರಿಂದ 'ಏಷ್ಯಾದ ಜ್ಯೋತಿ' ಎಂದು ಬಣ್ಣಿಸಿಕೊಂಡ ಮಹಾನ್ ಚೇತನ. ವೇದಗಳ ಕರ್ಮಕಾಂಡವನ್ನು ವಿರೋಧಿಸಿ ಉದಯಿಸಿದ ಹೊಸಧರ್ಮದ ಪ್ರೇರಕಶಕ್ತಿ. ಮತಧರ್ಮಗಳ ಅಜ್ಞಾನವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಜ್ಞಾನಸಿದ್ಧಿಯನ್ನು ಪಡೆದುಕೊಂಡ ಪುಣ್ಯಪುರುಷ. ಕ್ಷತ್ರಿಯನಾಗಿ ಜನಿಸಿ, ಚಕ್ರವರ್ತಿಯಾಗುವ ಯೋಗವಿದ್ದರೂ ರಾಜ್ಯಕೋಶ ತ್ಯಜಿಸಿ, ಜಗತ್ತಿನ ಎಲ್ಲ ಕಷ್ಟಕೋಟಲೆಗಳಿಗೆ ಪರಿಹಾರವನ್ನು ಅರಸುತ್ತ ಹೊರಟವನು. ತನ್ನ ಜ್ಞಾನಪ್ರಭೆಯಿಂದ, ಸೌಮ್ಯ ಸಂದೇಶದಿಂದ ಸಾಮಾನ್ಯರ ಬದುಕಿಗೆ ಬೆಳಕು ತಂದವನು. ಸ್ವಂತದ ಮೋಕ್ಷಲಾಭಕ್ಕಲ್ಲದೆ ಜನಸಾಮಾನ್ಯರ ಜೀವನದ ಜಂಜಾಟಗಳಿಗೆ ಪರಿಹಾರ ಕಂಡುಹಿಡಿಯಲು ಹೊರಟು, ಸಾಮಾನ್ಯರಿಗೂ ತನ್ನ ತತ್ವ ಜಿಜ್ಞಾಸೆಯಲ್ಲಿ ಅವಕಾಶ ಕಲ್ಪಿಸಿಕೊಟ್ಟಂತಹವನು. ತನ್ನ ತತ್ವ ಬೋಧನೆಗಳಿಂದ ಇತಿಹಾಸದಲ್ಲಿ ಸ್ಥಾನ ಪಡೆದ ಇಂತಹ ಅವತಾರ ಪುರುಷನ ಜೀವನ ಚಿತ್ರವನ್ನು ಇಲ್ಲಿ ಅವಲೋಕಿಸಬಹುದು.

ವೈಶಾಖ ಶುದ್ದ ಪೌರ್ಣಮಿಯು ಬುದ್ಧನ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಏಕೆಂದರೆ ಬುದ್ಧನ ಜನನ, ಜ್ಞಾನೋದಯ ಮತ್ತು ಮಹಾ ಪರಿನಿರ್ವಾಣ ಈ ಮೂರು ಮಹತ್ವದ ಘಟನೆಗಳು ಸಂಭವಿಸಿದ್ದು ವೈಶಾಖ ಶುದ್ದ ಪೌರ್ಣಮಿಯಂದು. ಆದ್ದರಿಂದಲೇ ಬೌದ್ಧಧರ್ಮದ ಪಂಚಾಂಗದಲ್ಲಿ ಅದನ್ನು ಅತ್ಯಂತ ಮಹತ್ವದ ದಿನವೆಂದು ಪರಿಗಣಿಸಲಾಗಿದೆ. ಕಪಿಲವಸ್ತುವನ್ನಾಳುತ್ತಿದ್ದ ಶಾಕ್ಯವಂಶದ ದೊರೆ ಶುದ್ಧೋದನ ಮತ್ತು ಆತನ ಪತ್ನಿ ಮಾಯಾದೇವಿಗೆ ಕ್ರಿ.ಪೂ ೫೬೩ ರ ವೈಶಾಖ ಶುದ್ದ ಪೌರ್ಣಮಿಯಂದು ಜನಿಸಿದನು ಸಿದ್ಧಾರ್ಥ. ಶಾಕ್ಯಗಣವು ರಾಜಪುತ್ರನ ಜನನದ ಸಂಭ್ರಮದ ಆಚರಣೆಯಲ್ಲಿದ್ದಾಗಲೇ, ಲೋಕಕ್ಕೆ ಜ್ಞಾನದ ಬೆಳಕು ನೀಡುವ ಲೋಕೋದ್ಧಾರಿ ಮಗನನ್ನು ಜಗತ್ತಿಗೆ ಅರ್ಪಿಸಿದ ಮಾಯಾದೇವಿ ಸಿದ್ಧಾರ್ಥ ಹುಟ್ಟಿದ ಕೆಲವೇ ದಿನಗಳಲ್ಲಿ ಇಹಲೋಕ ತ್ಯಜಿಸಿದಳು. ತಾಯಿಯನ್ನು ಕಳೆದುಕೊಂಡ ಸಿದ್ಧಾರ್ಥ

ಚಿಕ್ಕಮ್ಮ ಪ್ರಜಾಪತಿ ಗೌತಮಿಯ ಮಡಿಲಲ್ಲಿ ಬೆಳೆದು ಪ್ರೌಢನಾದನು. ಸಿದ್ಧಾರ್ಥನ ಜನ್ಮನಕ್ಷತ್ರವನ್ನು ನೋಡಿದ ಮುನಿಗಳು 'ಈತ ಮಹಾ ಚಕ್ರವರ್ತಿಯಾಗುತ್ತಾನೆ, ಇಲ್ಲವೇ ಮಹಾಧರ್ಮ ಸಂಸ್ಥಾಪಕನಾಗುತ್ತಾನೆ' ಎಂದು ಭವಿಷ್ಯ ನುಡಿಯುತ್ತಾರೆ. ಮಗನು ಸನ್ಯಾಸಿಯಾಗಬಹುದೆಂದು ಬಗೆದ ಶುದ್ಧೋದನನು ಅವನಿಗೆ ಕಷ್ಟಕೋಟಲೆಗಳು ಅನುಭವಕ್ಕೆ ಬಾರದ ಹಾಗೆ ಶ್ರೀಮಂತ, ಶೃಂಗಾರಮಯ ವಾತಾವರಣವನ್ನು ಅರಮನೆಯಲ್ಲಿ ಸೃಷ್ಟಿಸುತ್ತಾನೆ. ಲೋಕೋದ್ಧಾರದ ಕಡೆಗೆ ಮಗನ ಮನಸ್ಸು ಒಲಿದು ಆತ ವಿರಾಗಿಯಾಗದಿರಲೆಂದು ಶುದ್ಧೋದನ ಸಿದ್ಧಾರ್ಥ ೧೬ನೇ ವಯಸ್ಸಿನಲ್ಲಿ ಸುಪ್ರಬುದ್ಧನ ಮಗಳು ಅತ್ಯಂತ ಸುಂದರಿಯೂ, ಸುಗುಣೆಯೂ ಆದ ಯಶೋಧರೆಯೊಡನೆ ಆತನ ವಿವಾಹವನ್ನು ನೆರವೇರಿಸುತ್ತಾನೆ. ಸುಂದರವಾದ ಸಾಂಸಾರಿಕ ಬದುಕು, ಸಂಪದ್ಭರಿತವಾದ ರಾಜ್ಯ ವೈಭೋಗ ಇದಾವುದೂ ಸಿದ್ಧಾರ್ಥನ ಆಧ್ಯಾತ್ಮಿಕ ಸೆಳೆತವನ್ನು ಹತ್ತಿಕ್ಕುವಲ್ಲಿ ಸಫಲವಾಗುವುದಿಲ್ಲ.

ಹೀಗಿರುವಾಗ ಒಂದು ದಿನ ಸಿದ್ಧಾರ್ಥ ಹೊರ ಜಗತ್ತನ್ನು ನೋಡುವ ತನ್ನ ಹಂಬಲವನ್ನು ತಂದೆಯ ಮುಂದಿಡುತ್ತಾನೆ. ತಂದೆ ನಾಲ್ಕು ದಿನ ತಡೆದು ಮಗನಿಗೆ ಹೊರ ಹೋಗಲು ಅನುವು ಮಾಡಿಕೊಡುತ್ತಾನೆ. ಬಾಹ್ಯ ಜಗತ್ತಿನ ಯಾವುದೇ ಕಷ್ಟ ಕೋಟಲೆಗಳು ಸಿದ್ಧಾರ್ಥನ ಕಣ್ಣಿಗೆ ಬೀಳದಂತೆ ಎಚ್ಚರವಹಿಸಲಾಗುತ್ತದೆ. ತಾನೊಂದು ಬಗೆದರೆ ದೈವವೊಂದು ಬಗೆದಂತೆ ಶುದ್ಧೋದನ ಎಷ್ಟೇ ಎಚ್ಚರವಹಿಸಿದರೂ ಮುಪ್ಪಿನಿಂದ ಜರ್ಜರಿತನಾಗಿದ್ದ ಮುದುಕನೊಬ್ಬ ಗೌತಮನ ಕಣ್ಣಿಗೆ ಬೀಳುತ್ತಾನೆ. ತನ್ನ ಸಾರಥಿಯಿಂದ ಮುದುಕನ ಅವಸ್ಥೆಯನ್ನು ತಿಳಿದು ವೈರಾಗ್ಯಪರನಾದ ಗೌತಮ ಚಿತ್ತಕ್ಷೋಭೆಗೊಳಗಾಗುತ್ತಾನೆ. ಮತ್ತೊಂದು ದಿನ ರೋಗಿಯೊಬ್ಬನನ್ನು, ಮಗದೊಂದು ದಿನ ಹೆಣವನ್ನು ಹೊತ್ತುಕೊಂಡು ಹೋಗುತ್ತಿದ್ದ ಬಂಧು-ಬಾಂಧವರ ಗೋಳಾಟದ ದೃಶ್ಯವನ್ನು ನೋಡುತ್ತಾನೆ. ಕೆಲದಿನಗಳ ನಂತರ ಸಂಸಾರದ ಸುಖದಿಂದ ದೂರವಾಗಿ ದೈವಚಿಂತನೆಯಲ್ಲಿ ಕಾಲಕಳೆಯುವ, ಆಧ್ಯಾತ್ಮಿಕ ಕಳೆಯಿಂದ ರಾರಾಜಿಸುತ್ತಿರುವ ಸನ್ಯಾಸಿಯನ್ನು ಕಾಣುತ್ತಾನೆ. ಆಗ ಸಿದ್ಧಾರ್ಥನಿಗೆ ಸಂಸಾರದ ನಶ್ವರತೆ ಹಾಗೂ ದೇಹಕ್ಕೆ ಅನಿವಾರ್ಯವಾಗಿ ಒದಗಿಬರುವ ರೋಗರುಜಿನ, ಮುಪ್ಪುಗಳ ಅರಿವಾಗಿ ಅವುಗಳಿಂದ ಬಿಡುಗಡೆ ಪಡೆಯಲು ಇರುವ ದಾರಿಯನ್ನು ಹುಡುಕಿಕೊಂಡು ಹೋಗುವ ನಿರ್ಧಾರವು ಧೃಢವಾಗುತ್ತದೆ. ಆ ವೇಳೆಗಾಗಲೇ ಯಶೋಧರೆಯು ಗಂಡುಮಗುವಿಗೆ ಜನ್ಮವಿತ್ತಿರುತ್ತಾಳೆ.

ಪುತ್ರೋತ್ಸವ ಸಂಭ್ರಮದ ಬದಲು ಅವ್ಯಕ್ತ ಅಧ್ಯಾತ್ಮದ ಸೆಳೆತ ಸಿದ್ಧಾರ್ಥನ ಮನಸ್ಸಿನಲ್ಲಿ ತಲ್ಲಣವನ್ನುಂಟು ಮಾಡುತ್ತದೆ.

ಸನ್ಯಾಸವು ಮಾತ್ರ ಮಾನವನ ಐಹಿಕ ಸುಖಭೋಗಗಳಿಂದ ಉಂಟಾಗುವ ಕ್ಲೇಶಗಳಿಂದ ಬಿಡುಗಡೆ ದೊರಕಿಸಿಕೊಟ್ಟು ಮಾನವನಿಗೆ ಮುಕ್ತಿಯನ್ನು ದೊರಕಿಸಿಕೊಡಬಲ್ಲದು ಎಂಬುದನ್ನರಿತ ಗೌತಮನು ಎಲ್ಲ ರಾಜವೈಭವವನ್ನು ತ್ಯಜಿಸಿ ಗೃಹತ್ಯಾಗ ಮಾಡಲು ನಿರ್ಧರಿಸುತ್ತಾನೆ. ಸಾಂಸಾರಿಕ ಬಂಧನಗಳಿಂದ ವಿಮುಕ್ತನಾಗುವ ಮೊದಲು ಪತ್ನಿ, ಪುತ್ರನನ್ನು ಕಣ್ತುಂಬ ನೋಡಿ ಹೊರಡುತ್ತಾನೆ. ತನ್ನ ನೆಚ್ಚಿನ ಕುದುರೆ ಕಂಥಕವನ್ನೇರಿ ಸೇವಕನ ನೆರವಿನಿಂದ ಅನುಮಾ ನದಿ ತೀರವನ್ನು ತಲುಪುತ್ತಾನೆ. ಅಲ್ಲಿ ಕಾಷಾಯ ವಸ್ತ್ರಧರಿಸಿದ ಬೇಡನೊಬ್ಬನಿಗೆ ತನ್ನ ವಸ್ತ್ರಾಭರಣಗಳನ್ನು ನೀಡಿ, ಅವನಿಂದ ಕಾಷಾಯ ವಸ್ತ್ರಗಳನ್ನು ಪಡೆದು ಧರಿಸಿಕೊಳ್ಳುತ್ತಾನೆ. ತನ್ನ ಸೇವಕನನ್ನು ಬೀಳ್ಕೊಟ್ಟು ಕಾಡಿನಲ್ಲಿ ಪ್ರವೇಶಿಸುತ್ತಾನೆ.

ಗೌತಮನು ಈ ರೀತಿಯಾಗಿ ಆರುವರ್ಷಗಳಷ್ಟು ಸುದೀರ್ಘಕಾಲ ಅತ್ಯಂತ ಕ್ಲಿಷ್ಟ ಹಾಗೂ ಗಹನವಾದ ಧಾರ್ಮಿಕವಾಗಿ ಸಿದ್ಧಾಂತಗಳನ್ನು ಅಭ್ಯಸಿಸುತ್ತ ಉಗ್ರಸಂಯಮ, ಆತ್ಮನಿಗ್ರಹ, ಉಪವಾಸ, ತಪಶ್ಚೈರ್ಯ, ಅನುಷ್ಠಾನಗಳಿಂದ ಸಮ್ಯಕ್ ಜ್ಞಾನವನ್ನು ಪಡೆಯಲು ಶ್ರಮಿಸತೊಡಗಿದನು. ಆದರೆ ತಾನು ಅರಸುತ್ತಿದ್ದ, ಅಮೃತತತ್ವದ ಸುಳಿವೂ ಸಿಗದೆ ದೇಹವು ಸಾವಿನಂಚಿಗೆ ತಲುಪಿದಾಗ ದೇಹದಂಡನೆಯಿಂದ ಯಾವುದೇ ಪ್ರಯೋಜನವಿಲ್ಲವೆಂದು ಅರಿತು ಗೌತಮನು ಭಿಕ್ಷುಗಳಿಂದ ಆಹಾರ ಸ್ವೀಕರಿಸಿ, ಗಯೆ ಎಂಬಲ್ಲಿಗೆ ತೆರಳುತ್ತಾನೆ. ಅಲ್ಲಿ ಸುಜಾತೆ ಎಂಬ ಕುಲೀನ ಹೆಣ್ಣುಮಗಳಿಂದ ಪಾಯಸವನ್ನು ಸ್ವೀಕರಿಸಿ, ಹಸಿವನ್ನು ನೀಗಿಸಿಕೊಳ್ಳುತ್ತಾನೆ. ಅಲ್ಲಿ ಪಿಪ್ಪಲಮರದ ಕೆಳಗೆ ಕುಳಿತು ಸುದೀರ್ಘ ಧ್ಯಾನದಲ್ಲಿ ತೊಡಗಿಕೊಳ್ಳುತ್ತಾನೆ. ಆತನ ಸತ್ಯ ಸಾಕ್ಷಾತ್ಕಾರದ ಈ ಹಾದಿಯಲ್ಲಿ ಹಲವು ಪ್ರಲೋಭನೆಗಳು ಎದುರಾದರೂ ಅವುಗಳೆಲ್ಲವನ್ನು ದೃಢಚಿತ್ತದಿಂದ ಎದುರಿಸಿ ತಪಸ್ಸಿನಲ್ಲಿ ನಿರತನಾಗಿ ವೈಶಾಖ ಶುಕ್ಲ ಪೌರ್ಣಮಿಯಂದು ಜ್ಞಾನೋದಯವನ್ನು ಸಂಪಾದಿಸುತ್ತಾನೆ. ಅಂದಿನಿಂದ ಸಿದ್ಧಾರ್ಥನು ಬುದ್ಧನಾಗುತ್ತಾನೆ.

ಸಿದ್ಧಾರ್ಥನು ಬುದ್ಧನಾದ ತರುವಾಯ ತಾನು ಕಂಡುಕೊಂಡ ಸತ್ಯವನ್ನು ಜಗತ್ತಿನ ಮುಂದಿಡಲು ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತಾನೆ. ತನ್ಮೂಲಕ ಬೌದ್ಧಧರ್ಮದ ಸಂಸ್ಥಾಪಕನಾಗುತ್ತಾನೆ. ಆಸೆಯೇ ದುಃಖಕ್ಕೆ ಮೂಲವೆಂಬ ತತ್ವದೊಂದಿಗೆ ಕರುಣೆ,

ಮಾನವೀಯತೆ, ಸಮಾನತೆಗಳನ್ನು ಆಧರಿಸಿದ ಬೌದ್ಧಧರ್ಮ ಸಮಾಜದ ಎಲ್ಲಾ ವರ್ಗದ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಾನೆ. ಬುದ್ಧನು ಊರಿಂದ ಊರಿಗೆ ಸಂಚರಿಸುತ್ತ ಧರ್ಮಬೋಧನೆ ಮಾಡುವ ಸಂದರ್ಭದಲ್ಲಿ ಪೂರ್ವಾಶ್ರಮದ ತನ್ನವರನ್ನು ಕಂಡು ಅವರಿಗೂ ಧರ್ಮ ಬೋಧಿಸುತ್ತಾನೆ. ತನ್ನ ಪೂರ್ವಾಶ್ರಮದ ಮಗ ರಾಹುಲನಿಗೆ ಐಹಿಕ ಸಂಪತ್ತಿನ ಉತ್ತರಾಧಿಕಾರವನ್ನು ನೀಡದೆ ಅದಕ್ಕೆ ಮಿಗಿಲಾದ ಆಧ್ಯಾತ್ಮಿಕ ಸಂಪತ್ತಿನ ಉತ್ತರಾಧಿಕಾರವನ್ನು ನೀಡಿ, ಸನ್ಯಾಸವನ್ನು ಅನುಗ್ರಹಿಸಿ ಧರ್ಮಪ್ರಚಾರದಲ್ಲಿ ಆತನನ್ನೂ ಭಾಗಿಯಾಗಿಸಿಕೊಳ್ಳುತ್ತಾನೆ. ಬುದ್ಧವಾಣಿಯನ್ನು ಕೇಳಿದ ಅನೇಕರು ಆತನ ಶಿಷ್ಯತ್ವವನ್ನು ಸ್ವೀಕರಿಸುತ್ತಾರೆ. ಹೀಗೆ ಬೌದ್ಧಧರ್ಮಕ್ಕೆ ತಳಹದಿಯನ್ನು ನಿರ್ಮಿಸಿದ ಗೌತಮಬುದ್ಧ ಕ್ರಿ.ಪೂ.೪೮೭ರಲ್ಲಿ ಕುಶೀನಗರದಲ್ಲಿ ಮಹಾಪರಿನಿರ್ವಾಣ ಹೊಂದುತ್ತಾನೆ. ಗೌತಮಬುದ್ಧನ ದೇಹ ಪಂಚಭೂತಗಳಲ್ಲಿ ಲೀನವಾದರೂ ಆತ ಬೋಧಿಸಿದ ತತ್ವಾದರ್ಶಗಳು ಚಿರಸ್ಥಾಯಿಯಾಗಿ ಇಂದಿಗೂ ಜನಮನದಲ್ಲಿ ಬೇರೂರಿದೆ.

ಇದು ಬುದ್ಧನ ಜೀವನವನ್ನು ಕುರಿತು ಇತಿಹಾಸದಲ್ಲಿ ದೊರಕುವ ಮಾಹಿತಿಗಳು. ಇಂತಹ ಮಹಾನ್ ವ್ಯಕ್ತಿ ಕೇವಲ ಇತಿಹಾಸದ ಪುಟಗಳಲ್ಲಿ ಹುದುಗಿಹೋಗದೆ ತನ್ನ ವಿಶಿಷ್ಟ ವ್ಯಕ್ತಿತ್ವದಿಂದ, ಅಪೂರ್ವತ್ಯಾಗದಿಂದ ಸಾಹಿತ್ಯದಲ್ಲಿಯೂ ಎಡೆಪಡೆದಿರುವುದನ್ನು, ಆ ಮೂಲಕ ತನ್ನ ಪ್ರಭಾವಲಯವನ್ನು ವಿಸ್ತರಿಸಿರುವುದನ್ನು ಕಾಣಬಹುದು. ಮಹಾತ್ಮರ ಸಂಸರ್ಗದಿಂದ ಯಾವುದೇ ವಸ್ತು ವಿಷಯಗಳು ವಿನೂತನ ಮೌಲ್ಯವನ್ನು ಪಡೆದುಕೊಳ್ಳುತ್ತವೆ. ಸಾಹಿತಿಗಳು ಇಂತಹ ಮಹಾತ್ಮನ ಜೀವನ, ವ್ಯಕ್ತಿತ್ವ, ಸಂದೇಶಗಳನ್ನು ತಮ್ಮ ಸೃಜನಶೀಲ ಪ್ರತಿಭೆಯ ಚೌಕಟ್ಟಿನಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ಕನ್ನಡದಲ್ಲಿ ಅಲ್ಲದೆ ಇತರ ಭಾರತೀಯ ಭಾಷೆಗಳಲ್ಲಿಯೂ ಬುದ್ಧನನ್ನು ಕುರಿತು ನಾಟಕ, ಕವಿತೆ, ಕಥೆ, ಕಾವ್ಯ ಕಾದಂಬರಿಗಳು ಪ್ರಕಟವಾಗಿರುವುದು ಆ ವಸ್ತುವಿನ ಮಹತ್ವವನ್ನು ತಿಳಿಸುತ್ತದೆ.

ಭಾರತೀಯ ಭಾಷೆಗಳಲ್ಲಿ ಮುಖ್ಯವಾಗಿ ಸಂಸ್ಕೃತದ ಅಶ್ವಘೋಷನೆಂಬ ಬೌದ್ಧಕವಿ ಬುದ್ಧನ ಕಥಾವಸ್ತುವನ್ನೊಳಗೊಂಡ 'ಬುದ್ಧಚರಿತ', 'ಸೌಂದರಾನಂದ' ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿದ್ದಾರೆ. ಬುದ್ಧ ಚರಿತದಲ್ಲಿ ಗೌತಮಬುದ್ಧನ ಸಾತ್ವಿಕ ಜೀವನದ ಚಿತ್ರಣವನ್ನು, 'ಸೌಂದರಾನಂದ' ದಲ್ಲಿ ಬುದ್ಧನ ಸಂಬಂಧಿ ಮತ್ತು ಶಿಷ್ಯನಾದ ಆನಂದನು ರಾಗಲಾಲಸೆಯಿಂದ ಮುಕ್ತನಾಗಿ ವಿರಾಗದ ಕಡೆಗೆ ಸಾಗುವ ರಾಗ ವಿರಾಗದ ಸಂಘರ್ಷದ

ಚಿತ್ರಣವನ್ನು ಕಾಣಬಹುದು. ಬೌದ್ಧಸಾಹಿತ್ಯಕ್ಕೆ ಮಹತ್ತರ ಕೊಡುಗೆಯಾದ ಈ ಎರಡು ಕೃತಿಗಳು ನಂತರ ರಚನೆಯಾದ ಹಲವಾರು ಕೃತಿಗಳಿಗೆ ಪ್ರೇರಣೆಯನ್ನು ಒದಗಿಸಿವೆ.

ಸಂಸ್ಕೃತವನ್ನು ಬಿಟ್ಟರೆ ಪಾಳಿ ಭಾಷೆಯಲ್ಲಿಯೂ ಬುದ್ಧನ ಜೀವನದ ವಿವರಗಳು ದೊರೆಯುತ್ತವೆ. ಬುದ್ಧನ ಪರಿನಿರ್ವಾಣದ ನಂತರ ರಚನೆಯಾದ ಪಾಳಿ ಭಾಷೆಯ ತ್ರಿಪಿಟಕಗಳಲ್ಲಿ ಬುದ್ಧನ ಪೂರ್ವ ಜನ್ಮದ ವಿವರಗಳು ದೊರಕುತ್ತವೆ. ಪಾಳಿಭಾಷೆಯಲ್ಲಿ ಜಾತಕ ಕಥೆಗಳೆಂದೇ ಪ್ರಸಿದ್ಧಿ ಪಡೆದಿರುವ ಇಂತಹ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಕಥೆಗಳು ಸಿಗುತ್ತವೆ. ಡಾ॥ ಬಿ.ನಂ. ಚಂದ್ರಯ್ಯನವರು ಪಾಳಿ ಭಾಷೆಯಲ್ಲಿದ್ದ ಬುದ್ಧನ ಜಾತಕ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಅವುಗಳು ನಾಲ್ಕು ಸಂಪುಟಗಳಲ್ಲಿ ಹೊರಬಂದಿವೆ.

ಮಲೆಯಾಳಂ ಸಾಹಿತ್ಯದಲ್ಲಿ ಕೆ.ಎಂ. ಫಣಿಕ್ಕರ್ ರವರ 'ಅಂಬಾಪಾಲಿ' ಎನ್ನುವ ಕೃತಿ, ತೆಲುಗಿನಲ್ಲಿ ಅಶ್ವಘೋಷನ ಮಹಾಕಾವ್ಯಗಳನ್ನಾಧರಿಸಿದ 'ಬುದ್ಧಚರಿತೆ' ಮತ್ತು 'ಸೌಂದರಾನಂದ' ಎಂಬ ಕೃತಿಗಳು ರಚನೆಯಾಗಿವೆ. ಬಂಗಾಳಿಯಲ್ಲಿ ರವೀಂದ್ರನಾಥ ಠಾಕೂರರು ಬುದ್ಧನನ್ನು ಕುರಿತ ಕವನವನ್ನು ರಚಿಸಿದ್ದಾರೆ.

ಕನ್ನಡದ ಮಟ್ಟಿಗೆ ಹೇಳುವುದಾದರೆ ಹಳಗನ್ನಡ, ನಡುಗನ್ನಡ ಕಾಲದಲ್ಲಿ ಜೈನ ಸಾಹಿತ್ಯಕ್ಕೆ ಸಿಕ್ಕ ಮಾನ್ಯತೆ ಬೌದ್ದಸಾಹಿತ್ಯಕ್ಕೆ ಸಿಗಲಿಲ್ಲವೆನ್ನುವುದು ದುರ್ದೈವದ ಸಂಗತಿ. ಪ್ರಾಚೀನ ಸಾಹಿತ್ಯದಲ್ಲಿ ತೀರ್ಥಂಕರರ ಜೀವನ ಚಿತ್ರಣಕ್ಕೆ ಸಿಕ್ಕ ಪ್ರಾಶಸ್ತ್ಯ ಬುದ್ಧನಿಗೆ ಸಿಗಲಿಲ್ಲವಾದ್ದರಿಂದ, ಬುದ್ಧನ ಬಗೆಗಿನ ರಚನೆಗಳು ಕಾಣಿಸಿಕೊಂಡಿದ್ದು ಆಧುನಿಕ ಕಾಲದಲ್ಲಿಯೆ.

ಆಧುನಿಕ ಕಾವ್ಯ ಪ್ರಕಾರದಲ್ಲಿ ಬುದ್ಧನನ್ನು ಕುರಿತು ಡಾ॥ ಲತಾ ರಾಜಶೇಖರರವರು 'ಬುದ್ಧ ಮಹಾದರ್ಶನ' ವೆಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಬುದ್ಧನ ಸಮಗ್ರ ಜೀವನ ಚಿತ್ರಣವನ್ನು ಈ ಕೃತಿಯಲ್ಲಿ ಕಾಣಬಹುದು. ಹಾಗೆಯೇ ಡಾ॥ ಎಲ್. ಬಸವರಾಜು ಅವರು 'ಬುದ್ಧಚರಿತ' ಎಂಬ ಬುದ್ಧನನ್ನು ಕುರಿತ ಕಾವ್ಯವನ್ನು ರಚಿಸಿದ್ದಾರೆ.

ನಾಟಕ ಪ್ರಕಾರದಲ್ಲಿ ಹಲವು ಸ್ವತಂತ್ರ ಹಾಗೂ ಅನುವಾದಿತ ರಚನೆಗಳು ಕಾಣಿಸಿಕೊಂಡಿದ್ದು, ಅದರಲ್ಲಿ ಈ ಸಂಶೋಧನ ನಿಬಂಧದ ಎಲ್ಲ ಹತ್ತು ನಾಟಕಗಳು ಸ್ವತಂತ್ರ ನಾಟಕಗಳಾಗಿವೆ. ನಾಟಕದ ಅನುವಾದ ಕೃತಿಗಳಲ್ಲಿ ಪಿ.ಎಸ್ ರಾಮಪ್ಪನವರ 'ಅಂಬಾಪಾಲಿ' ಹಿಂದಿ ನಾಟಕದ ಅನುವಾದವಾಗಿದೆ. ಭಾಷಾಂತರ ಕೃತಿಯಾಗಿ ಎಸ್.ವಿ ಪರಮೇಶ್ವರ ಭಟ್ಟರ

‘ಬುದ್ಧಚರಿತೆ’ ಯನ್ನು ಹೆಸರಿಸಬಹುದು. ಮಾಸ್ತಿಯವರು ‘ಸಾರಿಪುತ್ರನ ಕಡೆಯ ದಿನಗಳು’ ಎಂಬ ಸ್ವತಂತ್ರ ಕಥೆಯನ್ನು ರಚಿಸಿದ್ದಾರೆ.

ಕವನ ಪ್ರಕಾರದಲ್ಲಿ ದ.ರಾ ಬೇಂದ್ರೆಯವರ ‘ಬುದ್ಧ’ ಮತ್ತು ‘ಅಮೃತಸ್ಮಿತ’, ಕುವೆಂಪು ಅವರ ‘ಬುದ್ಧದೇವ’. ಪು.ತಿ.ನ.ರವರ ‘ಬುದ್ಧ’, ವಿ. ಸೀತಾರಾಮಯ್ಯ ಅವರ ‘ಸಿದ್ಧಾರ್ಥ’, ಜಿ.ಎಸ್ ಶಿವರುದ್ರಪ್ಪನವರ ‘ವೈಶಾಖ ಶುಕ್ಲ ಪೂರ್ಣಿಮ’ ಕವನಗಳು ಗಮನಾರ್ಹವಾಗಿದೆ.

ಖಂಡಕಾವ್ಯದಲ್ಲಿ ಎಂ. ಗೋವಿಂದಪೈ ಅವರ ‘ವೈಶಾಖ’ ಬುದ್ಧನ ಸಮಗ್ರ ಜೀವನದೊಂದಿಗೆ, ಆತನ ಅಂತಿಮ ದಿನದ ಚಿತ್ರಣವನ್ನೊಳಗೊಂಡಿರುತ್ತದೆ.

ಹೀಗೆ ಇತಿಹಾಸ ಮತ್ತು ಸಾಹಿತ್ಯ ಎರಡರಲ್ಲಿಯೂ ಬುದ್ಧ ಜೀವನದ ವಿವರಗಳನ್ನು ತಿಳಿಯಬಹುದಾಗಿದೆ. ಆದರೆ ಇತಿಹಾಸದ ವಾಸ್ತವ ಅಂಶಗಳು ನೂತನ ದೃಷ್ಟಿಕೋನದಿಂದ ಸೃಜನಾತ್ಮಕವಾಗಿ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುತ್ತದೆ. ಈ ನಿಬಂಧದಲ್ಲಿ ನಾಟಕ ಪ್ರಕಾರದಲ್ಲಿ ಒಡಮೂಡಿರುವ ಬುದ್ಧ ಜೀವನವನ್ನು ಕುರಿತು ಅಧ್ಯಯನ ಮಾಡಲಾಗಿದೆ.

~*~*~*~*~

ಅಧ್ಯಾಯ–೪

ನಾಟಕಗಳಲ್ಲಿ ಬುದ್ಧನ ಕಥಾವಸ್ತು

ಸಾಹಿತ್ಯ ರಚನೆಯ ಮೊದಲ ಹಂತವೇ ವಸ್ತುವಿನ ಆಯ್ಕೆ. ಇತಿಹಾಸ, ಪುರಾಣ, ಜಾನಪದ, ಸಮಕಾಲೀನ ಹೀಗೆ ಯಾವುದನ್ನಾದರೂ ಸಾಹಿತ್ಯಕ್ಕೆ ವಸ್ತುವಾಗಿಸಿಕೊಳ್ಳಬಹುದು. ಕೆಲವೊಮ್ಮೆ ಕೃತಿಯ ಯಶಸ್ಸಿಗೆ ವಸ್ತುವೂ ಕಾರಣವಾಗಿದ್ದರೆ ಮತ್ತೆ ಕೆಲವೊಮ್ಮೆ ವಸ್ತು ಜನಪ್ರಿಯವಾದುದೆ ಆಗಿದ್ದರೂ ಸಾಹಿತಿ ಅದನ್ನು ನಿರ್ವಹಿಸುವಲ್ಲಿ ಸೋಲಬಹುದು. ಹಲವರು ಒಂದೇ ವಸ್ತುವನ್ನು ಆಯ್ಕೆ ಮಾಡಿಕೊಂಡರೂ ಸ್ವೋಪಜ್ಞತೆಯನ್ನು ಮೆರೆಯಬಹುದು. ಇತಿಹಾಸ ಅಥವಾ ಪುರಾಣದಿಂದ ವಸ್ತುವನ್ನು ತೆಗೆದುಕೊಂಡು ಅದನ್ನು ಹೊಸ ದೃಷ್ಟಿಕೋನದಿಂದ ನಿರೂಪಿಸ ಬಹುದು. ಆದರೆ ಅದು ಮೂಲಕ್ಕೆ ಧಕ್ಕೆ ತರುವಂತಿರಬಾರದು. ಅದರಲ್ಲಿಯೂ ಐತಿಹಾಸಿಕ, ಪೌರಾಣಿಕ ವ್ಯಕ್ತಿಗಳ ಜೀವನ ಈಗಾಗಲೇ ಜನರಲ್ಲಿ ಬೇರೂರಿರುವುದರಿಂದ ಅವರ ಪರಂಪರಾಗತ ನಂಬಿಕೆಗಳಿಗೆ ಅಪಚಾರವಾಗದಂತೆ ಎಚ್ಚರವಹಿಸಬೇಕಾಗುತ್ತದೆ. ಅದರೊಂದಿಗೆ ಸಾಹಿತ್ಯ ಕೃತಿಯೊಂದು ಕೇವಲ ಇತಿಹಾಸ, ಪುರಾಣದ ನಿರೂಪಣೆಯಾಗದೆ ವಸ್ತು ನಿರ್ವಹಣೆಯಲ್ಲಿ ಕಲಾತ್ಮಕತೆ ತೋರಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಬುದ್ಧನ ಕುರಿತ ಕನ್ನಡ ನಾಟಕಗಳ ವಸ್ತುವನ್ನು ವಿವೇಚಿಸಲಾಗಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವ ಕುವೆಂಪು ಅವರ ಸೃಜನಶೀಲ ಪ್ರತಿಭೆ ನಾಟಕ ಪ್ರಕಾರದಲ್ಲಿಯೂ ಗಂಭೀರವಾಗಿ ಕಾಣಿಸಿಕೊಂಡಿದೆ. ಕುವೆಂಪು ಅವರು ರಚಿಸಿರುವ ಹದಿಮೂರು ನಾಟಕಗಳಲ್ಲಿ 'ಮಹಾರಾತ್ರಿ' ಯೂ ಒಂದಾಗಿದೆ. 'ಮಹಾರಾತ್ರಿ' ಕುವೆಂಪು ತಮ್ಮ ಸಾಹಿತ್ಯ ಕೃಷಿಯ ಆರಂಭದ ಕಾಲದಲ್ಲಿ ರಚಿಸಿದ ನಾಟಕವಾಗಿದ್ದು ಒಂದು ರಾತ್ರಿಯ ಅವಧಿಯಲ್ಲಿ ನಡೆಯುವ ನಾಟಕ ಸುಪ್ರಸಿದ್ಧ ಐತಿಹಾಸಿಕ ಸಂಗತಿಯನ್ನು ಒಳಗೊಂಡಿದೆ. ಪುರೋಹಿತಶಾಹಿ ವ್ಯವಸ್ಥೆಯ ವಿರೋಧಿಯಾದ ಜನರಿಗೆ ಅದರಿಂದ ಬಿಡುಗಡೆ ಸಿಗಬೇಕೆಂದು ಬಯಸಿದ ಲೇಖಕರು ಭವಬಂಧನದ ಬಿಡುಗಡೆಗಾಗಿ ಶ್ರಮಿಸಿದ ಬುದ್ಧನಂತಹ ಮಹಾನ್ ಚೇತನವನ್ನು ತಮ್ಮ ನಾಟಕಕ್ಕೆ ವಸ್ತುವಾಗಿ ಆಯ್ಕೆ ಮಾಡಿಕೊಂಡದ್ದು ಸಹಜವೇ ಆಗಿದೆ.

ಕುವೆಂಪು ಅವರ 'ಮಹಾರಾತ್ರಿ' ಶೀರ್ಷಿಕೆಯೇ ಸೂಚಿಸುವ ಹಾಗೆ ಸಿದ್ಧಾರ್ಥ ಬುದ್ಧನಾಗುವ ಚಿತ್ರಣವನ್ನೊಳಗೊಂಡ ನಾಟಕ. ಹಾಗಾಗಿ ಇಲ್ಲಿ ಬುದ್ಧ ಜೀವನವನ್ನು ಕುರಿತ ಸಮಗ್ರ ಚಿತ್ರಣ ದೊರೆಯುವುದಿಲ್ಲ. ಸಿದ್ಧಾರ್ಥ ಬುದ್ಧನಾಗುವ ಆ ಮಹಾರಾತ್ರಿಯ ಸುತ್ತ ಹೆಣೆದುಕೊಳ್ಳುವ ಕಥಾಹಂದರ ಆ ಚಿರಸ್ಮರಣೆಯ ಘಳಿಗೆಯನ್ನು ಸಾಹಿತ್ಯದಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡುತ್ತದೆ. ೧೦ ದೃಶ್ಯಗಳೊಂದಿಗೆ ಪೀಠಿಕಾ ಮತ್ತು ಉಪಸಂಹಾರ ದೃಶ್ಯವನ್ನೊಳಗೊಂಡ ನಾಟಕ ಸಿದ್ಧಾರ್ಥ ಬುದ್ಧನಾಗುವ ಮುನ್ನ ಸಂಸಾರ ಬಂಧನದಿಂದ ಮುಕ್ತನಾಗಿ ವೈರಾಗ್ಯಪರವಶನಾಗುವ ಸಂದರ್ಭದ ಚಿತ್ರಣವನ್ನೊಳಗೊಂಡಿದೆ. ಇಡೀ ನಾಟಕ ಜಗತ್ತಿಗೆ ಕವಿದಿರುವ ಕತ್ತಲೆಯ ಕರ್ಮಕಾಂಡವನ್ನು ತೊಳೆದು ಬೆಳಗಲು ಬುದ್ಧ ರೂಪದ ನೂತನ ರವಿಯ ಉದಯಕ್ಕೆ ಸಾಕ್ಷಿಯಾಗಿ ನಿಲ್ಲುವ ಕ್ಷಣವನ್ನು ಕಟ್ಟಿಕೊಡುತ್ತದೆ.

ರಾಜಪುತ್ರನಾಗಿದ್ದು ರಾಜ ವೈಭವದಲ್ಲಿ ದುಃಖದ ಲವಲೇಶವೂ ಇಲ್ಲದೆ ಸುಖದ ಆಗರದಲ್ಲಿದ್ದ ಸಿದ್ಧಾರ್ಥ ಅದನ್ನು ಬಂಧನವೆಂದು ಭಾವಿಸಿ, ಲೋಕದ ಜನರ ಸಂಕಷ್ಟವನ್ನು ಕಣ್ಣಾರೆ ಕಂಡು ಅವುಗಳಿಗೆ ಪರಿಹಾರ ಹುಡುಕಲು ಸರ್ವಸಂಗ ಪರಿತ್ಯಾಗಿಯಾಗಿ ಸತ್ಯ ಸಾಕ್ಷಾತ್ಕಾರಕ್ಕಾಗಿ ಬುದ್ಧನಾಗಲು ಹೊರಟ ಆ ರಾತ್ರಿ ಎಂದಿನಂಥಲ್ಲದೆ ಮಹತ್ವಪೂರ್ಣವಾದ ರಾತ್ರಿ. ಇತಿಹಾಸದ ಪುಟಗಳಲ್ಲಿರುವ ಈ ರಾತ್ರಿಯನ್ನೇ ಕುವೆಂಪು ಸಾಹಿತ್ಯದಲ್ಲಿ 'ಮಹಾರಾತ್ರಿ' ಯಾಗಿಸಿದ್ದಾರೆ.

> ಇಂದು ಮಹಾರಾತ್ರಿ : ಸಿದ್ಧಾರ್ಥ ಬುದ್ಧನಾಗುವ ರಾತ್ರಿ,
> ಸಗ್ಗದೊಲವಿಳೆಗಿಳಿವ ರಾತ್ರಿ (ಪೀಠಿಕಾ ದೃಶ್ಯ)

ಎಂಬ ಧ್ವನಿಪೂರ್ಣ ವಾಕ್ಯದೊಂದಿಗೆ ನಾಟಕ ಆರಂಭವಾಗುತ್ತದೆ. ಅಂದಿನಿರುಳು ಸಿದ್ಧಾರ್ಥ ಲೌಕಿಕ ಬಂಧನದಿಂದ ಮುಕ್ತನಾಗುವ ದೃಢ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಈ ದೃಢನಿರ್ಧಾರವನ್ನು ಪರೀಕ್ಷಿಸಲೋಸುಗವೆಂಬಂತೆ ಅರಮನೆಯಲ್ಲಿ ಮಂಗಳ ವಾದ್ಯಗಳನಿನಾದ, ಪುತ್ರೋತ್ಸವದ ಸಂಭ್ರಮ ಕೇಳಿಬರುತ್ತದೆ. ಭವಬಂಧನದಿಂದ ಮುಕ್ತನಾಗಲು ಹೊರಟವನಿಗೆ ಮತ್ತೊಂದು ಬಂಧನ ತೊಡರಿಕೊಳ್ಳುತ್ತದೆ. ವೈರಾಗ್ಯಪರನಾದ ಸಿದ್ಧಾರ್ಥನ ಸಂಕಲ್ಪ ಇದರಿಂದ ವಿಚಲಿತವಾಗುವುದಿಲ್ಲ. ಬದಲಿಗೆ ಮತ್ತಷ್ಟು ಗಟ್ಟಿಗೊಳ್ಳುತ್ತದೆ.

ಅರಮನೆಯನ್ನು ತೊರೆದು ಹೋಗುವ ನಿರ್ಧಾರ ಕೈಗೊಂಡ ಸಿದ್ಧಾರ್ಥನ ಆಪ್ತ ಸೇವಕ ಚೆನ್ನನ ನೆರವನ್ನು ಬಯಸುತ್ತಾನೆ. ರಾಜಕುಮಾರನ ಅಭೀಪ್ಸೆಯನ್ನು ತಿಳಿದ ಚೆನ್ನ

'ಏಕೆ ನನ್ನೊಡೆಯ, ಇಲ್ಲಿ ಸೊಗಮಿಲ್ಲವೇ ನಿನಗೆ?,'

'ಇಂದು ಹೋದವನೆಂದು ಹಿಂದಕೈತರುವೆ?'

(ದೃಶ್ಯ-೧) ಎಂದು ಮುಗ್ಧವಾಗಿ ಪ್ರಶ್ನಿಸುತ್ತಾನೆ. ಲೋಕದ ಜನ ಬಡತನದಲ್ಲಿ, ಮೌಢ್ಯಾಂಧಕಾರದಲ್ಲಿ ಸಿಕ್ಕಿ ಬೊಬ್ಬಿರಿಯುತ್ತಿದ್ದಾಗ ತಾನೊಬ್ಬ ಸುಖಿಯಾಗಿದ್ದರೆ ಸಾಕೆ ಎಂದು ಚೆನ್ನನನ್ನು ಪ್ರಶ್ನಿಸಿದ ಸಿದ್ಧಾರ್ಥ, ತನ್ನ ಇಂದಿನ ನಿರ್ಧಾರ ಆಕಸ್ಮಿಕವಾದುದಲ್ಲ ಬಹುದಿನಗಳ ಹಂಬಲವೆಂದು, ಈ ಹಂಬಲಕ್ಕೆ ಸತಿಯಾಗಮನ ಅಡ್ಡಿ ಬಂದಿದ್ದನ್ನು, ಆದರಿಂದು ಜವ ಬಂದರೂ ಇದನ್ನು ತಡೆಯಲಾರನೆಂದು ಸ್ಪಷ್ಟಪಡಿಸುತ್ತಾನೆ. ತನ್ನೊಡೆಯನ ಲೋಕೋದ್ಧಾರದ ಮಾತುಗಳು ಸ್ಪಷ್ಟವಾಗದಿದ್ದರೂ 'ಅವನು ತೊಳಗುವುದನೆಂಬುದನ್ನು ಬಲ್ಲೆ, ಏತಕೆಂಬುದನರಿಯೆ... ಏನನೋ ಬೆಳಗಲೆಂದೇ ಅವನು ತೊಳಗುವನು.' (ದೃಶ್ಯ-೨) ಎಂದು ನೆರವು ನೀಡಲು ಒಪ್ಪಿಗೆ ಸೂಚಿಸುತ್ತಾನೆ.

ಸತ್ಯಾನ್ವೇಷಿಯಾಗಿ ಹೊರಟ ಗೌತಮ ಕಡೆಯಬಾರಿಗೆ ಸತಿ ಸುತರನ್ನು ನೋಡುವ ಮನಸು ಮಾಡುತ್ತಾನೆ. ಅರಮನೆಯ ತನ್ನ ಕೋಣೆಗೆ ಬಂದು, ಹಲವು ಮಧುರ ನೆನಪುಗಳ ಆಗರವಾದ ಆ ಸೆಜ್ಜೆ ಮನೆಯನ್ನು ಕಡೆಯದಾಗಿ ವಂದಿಸಿ ಅಂತರಂಗದ ಬೆಳಕಿನ ಅನ್ವೇಷಣೆಗಾಗಿ ಹೊರಡುತ್ತಾನೆ. ಆ ಸಂದರ್ಭದ ಗೌತಮನ ಮನಸ್ಸಿನ ಹೊಯ್ದಾಟ, ತಳಮಳವನ್ನು ಒಂದು ಕಡೆ ಸುಖದ ಆಗರವಾಗಿರುವ ಪತ್ನಿ ಪುತ್ರನ ವ್ಯಾಮೋಹ, ಮತ್ತೊಂದೆಡೆ ಲೋಕದ ದುಃಖ ಸಾಗರಕ್ಕೆ ಪರಿಹಾರ ಹುಡುಕುವ ಆಕಾಂಕ್ಷೆ ಈ ದ್ವಂದ್ವ ಸ್ಥಿತಿಯ ಹೋರಾಟದಲ್ಲಿ ಆತ ಜಯಶಾಲಿಯಾಗುವುದನ್ನು ನಾಟಕಕಾರರು ಮನೋಜ್ಞವಾಗಿ ಚಿತ್ರಿಸುತ್ತಾರೆ.

ಕುವೆಂಪು ಅವರಿಗೆ ಸಂಕಷ್ಟಕ್ಕೆ ಸಿಲುಕಿ ನರಳುತ್ತಿರುವ ಲೋಕಕ್ಕೆ ಪರಿಹಾರದ ಸಮಾಧಾನ ತರುವ ಬುದ್ಧನ ಕತೆ ಹೇಳುವ ಉದ್ದೇಶವಿರುವುದು

ಯಜ್ಞಯಾಗಾದಿಗಳ ಹಿಂಸೆಯಲಿ ಬೆಂದು ಕೃತ್ರಿಮದ ವೈದಿಕರ
ದಾಷ್ಟ್ಯದೊಳು ನೊಂದು, ಒಣವೇದ ಪಂಡಿತರ
ವಾದದೊಳು ಮುಳುಮುಳುಗಿ ಗೋಳಿಡುವ..,

ಎಂಬ ಯಕ್ಷನ ಮಾತಿನಲ್ಲಿ ಆರಂಭದಲ್ಲಿಯೇ ಸ್ಪಷ್ಟವಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಾಟಕ 'ಸಿದ್ಧಾರ್ಥ'ನ ಕಥೆಯನ್ನು ಹೇಳುತ್ತದೆ. ಸಿದ್ಧಾರ್ಥ ಬುದ್ಧನಾಗುವ ಹಂತದಲ್ಲಿ ಆತ ಎದುರಿಸುವ ಮಾನಸಿಕ ಒಳತೋಟಿ, ಅದನ್ನು ಮೀರಿ ತಳೆಯುವ ನಿರ್ಧಾರ ನಾಟಕದಲ್ಲಿ ಮುಖ್ಯವಾಗುತ್ತದೆ. ನಾಟಕ ವ್ಯಷ್ಟಿ ಮತ್ತು ಸಮಷ್ಟಿ ಎರಡೂ ನೆಲೆಯಲ್ಲಿ ಆ ಸಂದರ್ಭವನ್ನು ನಿರೂಪಿಸುತ್ತದೆ. ಒಂದು ವೈಯಕ್ತಿಕ ನೆಲೆಯಲ್ಲಿ ಆತ ಎದುರಿಸುವ ಭಾವನಾತ್ಮಕ ಹೋರಾಟವಾದರೆ ಮತ್ತೊಂದು ಸಾಮಾಜಿಕ ನೆಲೆಯಲ್ಲಿ ಆತ ಎದುರಿಸುವ ಸಮಸ್ಯೆ. ಹಾಗೆಯೇ ತನ್ನ ನೆಚ್ಚಿನ ಒಡೆಯ ಸಮಸ್ತವನ್ನು ತ್ಯಜಿಸಿಹೋಗುವ ನಿರ್ಧಾರವನ್ನು ಕೇಳಿ ದಿಗ್ಭ್ರಮೆಗೊಳಗಾಗುವ ಚನ್ನ ವೈಯಕ್ತಿಕ ಸ್ವಾರ್ಥದ ನೆಲೆಯಲ್ಲಿ ಆಲೋಚಿಸಿದರೆ, ಯಕ್ಷ, ಕಿನ್ನರ, ಗಂಧರ್ವರು ಸಾಮಾಜಿಕ ಉದ್ಧಾರದ ನೆಲೆಯಲ್ಲಿ ಚಿಂತಿಸುತ್ತಾರೆ.

ಅಸಾಧಾರಣ ಸ್ಥೈರ್ಯ, ನಿರ್ಭಾವುಕತನದಿಂದ ಪತ್ನಿ, ಪುತ್ರ ವ್ಯಾಮೋಹದಿಂದ ಬಿಡಿಸಿಕೊಂಡು ಹೋಗುವ ಗೌತಮನಿಗೆ ಮನ್ಮಥ ಎದುರಾಗಿ ಸಕಲ ಸಾಮ್ರಾಜ್ಯಕ್ಕೆ ಒಡೆಯನನ್ನಾಗಿಸುವ ಆಮಿಷ ಒಡ್ಡಿದಾಗ ಸಿದ್ಧಾರ್ಥ ತಾನು ಮುಕ್ತಿ ಸಾಮ್ರಾಜ್ಯದ ಪರಮತಮ ಪದವಿಗೆ ಅಪೇಕ್ಷಿಸುತ್ತಿರುವುದಾಗಿ ತಿಳಿಸುತ್ತಾನೆ. ಮನ್ಮಥ ಸಿದ್ಧಾರ್ಥನನ್ನು ಎಚ್ಚರಿಸಿ ಹೇಡಿಯೆಂದು ಮೂದಲಿಸುತ್ತಾನೆ. ಸತಿ–ಸುತರನ್ನು ತೊರೆದು ಬರುವಾಗ ಇದ್ದಂತಹ ಸಿದ್ಧಾರ್ಥನ ಸ್ಥೈರ್ಯ ಮತ್ತಷ್ಟು ಧೃಢವಾಗುತ್ತದೆ. ಮನ್ಮಥನ ಪಾತ್ರಸೃಷ್ಟಿಯ ಮೂಲಕ ನಾಟಕಕಾರರು ಸಿದ್ಧಾರ್ಥನ ಮನಸ್ಥಿತಿಯನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಚಿತ್ರಿಸುತ್ತಾರೆ. ಸಿದ್ಧಾರ್ಥ ಬುದ್ಧನಾಗುವ ಹಾದಿಯಲ್ಲಿ ಆತನಿಗೆ ಎದುರಾಗುವ ತೊಡರುಗಳನ್ನು ಹಂತ ಹಂತವಾಗಿ ಜಯಿಸಿ ಎಲ್ಲವನ್ನು ಮೀರಿ ಮುಂದಡಿಯಿಡುವುದು ಸಿದ್ಧಾರ್ಥ ಏರಿದ್ದ ಎತ್ತರವನ್ನು ಸೂಚಿಸುತ್ತದೆ.

ಭವ ಬಂಧನದ ಎಲ್ಲ ತಂತುಗಳನ್ನು ಕಡಿದುಕೊಂಡು ಹೊರಟ ಸಿದ್ಧಾರ್ಥ ಮನುಷ್ಯ ಸಂಬಂಧದ ಕಡೆಯ ಕೊಂಡಿಯಾದ ಚನ್ನನನ್ನು ಬೀಳ್ಕೊಳ್ಳುತ್ತಾನೆ. ಸತಿಸುತರಿಗಿಂತ ಮುನ್ನ ತನ್ನ ಜೀವನ ಪಯಣದ ಜತೆಗಾರನಾಗಿದ್ದ ಆಪ್ತ ಸೇವಕ ಚನ್ನನನ್ನು ಅಗಲುವಾಗ ಸಿದ್ಧಾರ್ಥ ಅನುಭವಿಸುವ ತಳಮಳ

'ಸೂತಿಕಾಗೃಹದಿಂದ ನಾನಿನಿತು ಶೋಕದಿಂ ಪೊರಮಟ್ಟು ಬರಲಿಲ್ಲ'

ಎಂಬ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಲೋಕದ ಮಹಾಂಬುಧಿಗೆ ಬೀಳಲು ಹೊರಟವನನ್ನು ಚೆನ್ನನೆಂಬ ಹನಿ ತಡೆಯುವುದೆಂತು. ಸಿದ್ಧಾರ್ಥ ಚೆನ್ನನನ್ನಗಲುವ ಈ ದೃಶ್ಯದಲ್ಲಿ ಚೆನ್ನನ ಮನೋವೇದನೆ ತಾಯನಗಲಿದ ಕರುವಿನ ವೇದನೆಯಂತೆ ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿದೆ. ಹಾಗೆಯೇ ಕಂಥಕನಿಂದ ದೂರಾಗುವಾಗ

'ಕಂಥಕನ ಸಂಗವಿದು ಕಠಿಣತಮ'

ಎಂಬ ಸಿದ್ಧಾರ್ಥನ ನುಡಿ ಸಿದ್ಧಾರ್ಥನಲ್ಲಿ ಒಡಮೂಡಿರುವ ಕರುಣೆಯ ಸಂದೇಶವನ್ನು ಬಿತ್ತರಿಸುತ್ತದೆ. ಇಲ್ಲಿಂದ ಮುಂದೆ ಮಾನಸಿಕವಾಗಿ ಈಗಾಗಲೇ ವಿರಾಗಿಯಾಗಿರುವ ಸಿದ್ಧಾರ್ಥ ಬಾಹ್ಯವಾಗಿಯೂ ವಿರಾಗಿಯ ವೇಷಧರಿಸಿಕೊಳ್ಳುತ್ತಾನೆ. ಸಿದ್ಧಾರ್ಥನಿಗೆ ಆ ವಸ್ತ್ರವನ್ನು ನೀಡುವ ಭಿಕ್ಷುಕ ಹೇಳುವ ಮಾತುಗಳು ಸಿದ್ಧಾರ್ಥ ಬುದ್ಧನಾಗುವ ಭವಿಷ್ಯವನ್ನು ಸೂಚನಾ ರೂಪದಲ್ಲಿ ತಿಳಿಸುತ್ತದೆ. ಇಲ್ಲಿಗೆ ನಾಟಕ ಮುಕ್ತಾಯವಾಗುತ್ತದೆ. ಕೊನೆಯ ಭಾಗವು ಮೊದಲಿನ ದೃಶ್ಯಕ್ಕೆ ಸಂಬಂಧಿಸಿದ್ದೆಂಬಂತೆ ಯಕ್ಷ, ಕಿನ್ನರ, ಗಂಧರ್ವರು ಪ್ರವೇಶಿಸಿ ಸಿದ್ಧಾರ್ಥನ ಮಹಾತ್ಯಾಗವನ್ನು

ಬುದ್ಧದೇವನ ಪರಮತ್ಯಾಗವೇ ಮಹಾ ತ್ಯಾಗ !
ಧನ್ಯಂ ಮಹಾರಾತ್ರಿ !
ಲೋಕಕಾಗಲಿ ಮೈತ್ರಿ !

ಎಂದು ವರ್ಣಿಸುತ್ತಾರೆ. ಒಟ್ಟಿನಲ್ಲಿ 'ಮಹಾರಾತ್ರಿ' ನಾಟಕವು ಸಿದ್ಧಾರ್ಥನ ಮಹಾತ್ಯಾಗವನ್ನು, ಆತನ ಒಳತೋಟಿಗಳನ್ನು, ಆತನಲ್ಲಿರುವ ಸಾಮಾಜಿಕ ಕಾಳಜಿಯನ್ನು ಚಿತ್ರಿಸಹೊರಟಿದೆ. ಹಾಗೆಯೇ ಈ ನಾಟಕ ರಚನೆಯ ಹಿನ್ನೆಲೆಯಲ್ಲಿ ಸಮಕಾಲೀನ ಭಾರತೀಯ ಸಮಾಜವನ್ನು ಬಿಂಬಿಸುವ ಧ್ವನಿಯಿದೆ. ನಾಟಕದ ಆರಂಭದಲ್ಲಿ ಸಿದ್ಧಾರ್ಥ 'ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯು ತಪ್ಪಿ, ಕಾಡುಪಾಲಾಗಿಹಳು ಭಾರತಾಂಬೆ' ಎಂದು ಹೇಳುವ ಮಾತುಗಳು ನಿಸ್ಸಂದೇಹವಾಗಿ ಸಮಕಾಲೀನ ಭಾರತೀಯರ ನೋವು ನಲಿವುಗಳನ್ನು ಚಿತ್ರಿಸುತ್ತದೆ. ಹಾಗೆಯೇ ಸಿದ್ಧಾರ್ಥ ಅಂತಃಪುರದಲ್ಲಿ ನಿದ್ರಿಸುತ್ತಿರುವ ಯಶೋಧರೆಯನ್ನು ನೋಡಿ ಹೇಳುವ ಮಾತುಗಳ ರಾಮಕೃಷ್ಣಪರಮಹಂಸರು ಮತ್ತು ಶಾರದಾದೇವಿಯವರ ದಿವ್ಯ ದಾಂಪತ್ಯವನ್ನು ನೆನಪಿಸುತ್ತದೆ. ಸಮಕಾಲೀನ ಭಾರತದಲ್ಲಿರುವ ಮೌಢ್ಯದ ವಿರುದ್ಧ ದನಿಯೆತ್ತುವ ಆಕಾಂಕ್ಷೆಯ ಜೊತೆಜೊತೆಗೆ ಕೌಟುಂಬಿಕ ಬಂಧನಕ್ಕೆ ಒಳಗಾಗದೆ ಮಹಾತ್ವಾಕಾಂಕ್ಷೆಗೆ ತನ್ನನ್ನು ಒಪ್ಪಿಸಿಕೊಳ್ಳುವ ಅಪೇಕ್ಷೆಯೂ

ಆಗ ಕುವೆಂಪು ಅವರಲ್ಲಿ ಇದ್ದಂತೆ ತೋರುತ್ತದೆ. ಸಿದ್ಧಾರ್ಥನ ಒಳತೋಟಿಯ ಮೂಲಕ ಕುವೆಂಪು ತಮ್ಮ ಮನಸ್ಥಿತಿಯನ್ನು ದೃಢಪಡಿಸಿಕೊಳ್ಳುವ ರೀತಿಯಾಗಿಯೂ ಈ ಚಿತ್ರಣವಿದೆ. ಹೀಗೆ 'ಮಹಾರಾತ್ರಿ' ನಾಟಕ ಐತಿಹಾಸಿಕ ಮತ್ತು ಸಮಕಾಲೀನ ದೃಷ್ಟಿಕೋನಗಳೆರಡನ್ನೂ ಒಳಗೊಂಡ ವಿಶಿಷ್ಟ ಕೃತಿಯಾಗಿದೆ.

ಗೌತಮ ಬುದ್ಧ :

ವೃತ್ತಿರಂಗಭೂಮಿಯ ಪ್ರತಿಭಾವಂತ, ನಾಟಕಕಾರರಲ್ಲಿ ಒಬ್ಬರಾದ ಬಿ. ಪುಟ್ಟಸ್ವಾಮಯ್ಯನವರು ಹಲವು ಐತಿಹಾಸಿಕ ನಾಟಕಗಳನ್ನು ರಚಿಸಿದ್ದು, ಅದರಲ್ಲಿ 'ಗೌತಮಬುದ್ಧ' ನಾಟಕವೂ ಒಂದಾಗಿದೆ. ಬುದ್ಧ ನನ್ನು ಕುರಿತ ಈ ನಾಟಕ ಮೂರು ಅಂಕಗಳನ್ನು ಒಳಗೊಂಡಿದೆ. ನಾಟಕ ಬುದ್ಧನನ್ನು ಕುರಿತದ್ದಾಗಿದ್ದು, 'ಅಹಿಂಸೋ ಪರಮೋಧರ್ಮ' ಎಂಬ ತತ್ವವನ್ನು ಒಳಗೊಂಡಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಪುಟ್ಟಸ್ವಾಮಯ್ಯನವರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿರುವುದರಿಂದ ನಾಟಕದಲ್ಲಿ ಹಿಂಸೆ-ಅಹಿಂಸೆಗಳ ಸಂಘರ್ಷದ ಚಿತ್ರವಿದೆ. "ಈ ನಾಟಕ ಪ್ರಾರಂಭವಾಗುವುದೇ ಹಿಂಸೆ ಮತ್ತು ಅಹಿಂಸೆಯ ನಡುವಣ ವ್ಯತ್ಯಾಸಗಳನ್ನು ಕುರಿತ ಹೇಳಿಕೆಗಳಿಂದ"[೧] ನಾಟಕದ ಮೊದಲ ದೃಶ್ಯದಲ್ಲಿ ದೇವದತ್ತ ನಂದ ಮತ್ತು ಸಿದ್ಧಾರ್ಥನ ಸಂಭಾಷಣೆಯ ಮೂಲಕ 'ಹಿಂಸೆಕೂಡದು' ಎಂಬ ಧ್ವನಿಯೊಂದು ವ್ಯಕ್ತವಾಗುತ್ತದೆ. ದೇವದತ್ತನಿಂದ ಬಾಣಾಘಾತಕ್ಕೊಳಗಾದ ಪಾರಿವಾಳಕ್ಕೆ ಜೀವ ತುಂಬುವ ಸಿದ್ಧಾರ್ಥನ ಮಾತುಗಳನ್ನು ಇಲ್ಲಿ ಗಮನಿಸಬಹುದು. 'ಹಿಂಸಾತ್ಮಕ ಪ್ರಕೃತಿಯನ್ನು ನೋಡಿದಾಗ ನನ್ನ ಹೃದಯ ಮಧ್ಯದಲ್ಲಿ ಪ್ರತಿನಿಧಿತವಾದ ಚಿಂತೆಯ ರಹಸ್ಯವನ್ನು, ದಯಾ, ಕರುಣೆ, ಅನುಕಂಪ, ಇವುಗಳ ಹೊರತು, ಹಿಂಸೆಯ ತೀವ್ರ ವೇದನೆಯನ್ನು ಶಾಂತಗೊಳಿಸುವ ದಿವ್ಯೌಷಧವು ಮತ್ತಾವುದೂ ಇಲ್ಲ. ನಾನೀ ತತ್ವವನ್ನು ಜನರಿಗೆ ಬೋಧಿಸಿ ಜಗತ್ತಿನ ದುಃಖವನ್ನು ಪರಿಹರಿಸುವೆನು. ಮಾನವರ ದುಃಖವನ್ನು ಮಾತ್ರವಲ್ಲ. ಜೀವಸಹಿತವಾದ ಪ್ರತಿಯೊಂದು ಪ್ರಾಣಿಯ ದುಃಖವನ್ನೂ...' ಹೀಗೆ ನಾಟಕದ ಆರಂಭದಲ್ಲಿಯೇ ಬರುವ ಈ ಮಾತುಗಳು ಅಹಿಂಸೆಯ ಕರುಣೆಯ ಸಂದೇಶವನ್ನು

---

೧. ಬಿ.ಪುಟ್ಟಸ್ವಾಮಯ್ಯ, ಡಾ|| ಕೃಷ್ಣಮೂರ್ತಿ ಹನೂರು ಸಂ, ಡಾ|| ಹಾ.ಮಾ.ನಾ, ಡಾ|| ಪ್ರಧಾನಗುರುದತ್ತ, ನವಕರ್ನಾಟಕ ಪ್ರಕಾಶನ.

ಸಾರುತ್ತವೆ. ಇದೇ ದೃಶ್ಯದಲ್ಲಿ ಬರುವ 'ಒಂದು ಜಿಂಕೆಯ ಮರಿಯನ್ನು ಕೊಲ್ಲಲಾರದವನು ನಾಳೆ ಶಾಕ್ಯರನ್ನಾಳುವುದು ಹೇಗೆ?' ಎಂಬ ದೇವದತ್ತನ ಪ್ರಶ್ನೆ ಕ್ಷತ್ರಿಯನಾದವನಿಗೆ ಹಿಂಸೆಯ ಅನಿವಾರ್ಯತೆಯನ್ನು ಎತ್ತಿ ಹಿಡಿಯುತ್ತದೆ. ಹೀಗೆ ನಾಟಕ ಆರಂಭದಲ್ಲಿಯೇ ಹಿಂಸೆ ಮತ್ತು ಅಹಿಂಸೆಯ ದ್ವಂದ್ವವನ್ನು ಕಟ್ಟಿಕೊಡುತ್ತದೆ.

ನಾಟಕದ ೨ನೇ ದೃಶ್ಯದಲ್ಲಿ ಅಪರಾಜಿತೆ ಸಿದ್ಧಾರ್ಥನ ಸಾಕುತಾಯಿಯೆಂಬ ವಿಚಾರ ಮತ್ತು ಸಿದ್ಧಾರ್ಥನ ಭವಿಷ್ಯವನ್ನು ಕುರಿತು ಅವನ ಹೆತ್ತವರಿಗಿರುವ ಆತಂಕದ ವಿಚಾರದ ಪ್ರಸ್ತಾಪವಿದೆ. ಇದೇ ದೃಶ್ಯದಲ್ಲಿ ಶೃಂಗಾರ ಪೋಷಕವಾದ, ಭೋಗದ ಸಂಕೇತವಾದ 'ರತಿ' ಎಂಬ ಪಾತ್ರ ಸೃಷ್ಟಿಯ ಮೂಲಕ ನಾಟಕಕಾರರು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಈಗಾಗಲೇ ವೈರಾಗ್ಯವನ್ನು ಆಶ್ರಯಿಸಿರುವ ಸಿದ್ಧಾರ್ಥನ ಹೃದಯದಲ್ಲಿ ರಾಗಕ್ಕೆ ಸ್ಥಾನ ಕಲ್ಪಿಸಿಕೊಡಲೋ ಎಂಬಂತೆ ರತಿಯ ಪಾತ್ರ ಚಿತ್ರಣವಾಗಿದೆ. ಮುಂದೆ ಸಿದ್ಧಾರ್ಥ ಸುಪ್ರಬುದ್ಧನ ಮಗಳು ಯಶೋಧರೆಗೆ ಮನಸೋಲುವುದು ರತಿಯ ಪ್ರಭಾವದಿಂದಲೆ ಮತ್ತು ಆಕೆಯ ಪ್ರವೇಶ ಮಾತ್ರದಿಂದಲೇ.

ಮುಂದಿನ ದೃಶ್ಯದಲ್ಲಿ ದೇವೇಂದ್ರನ ಆಜ್ಞಾಧಾರಕಿಯರಾದ ಗಂಗಾ-ಗೌತಮಿಯರು ಸಿದ್ಧಾರ್ಥ ಬುದ್ಧ ನಾಗುವ ಸೂಚನೆಯನ್ನು ನೀಡುತ್ತಾರೆ. ಅದರ ಪರಿಣಾಮವೊ ಎನ್ನುವಂತೆ ಸಿದ್ಧಾರ್ಥನ ಮನಸ್ಸು ಸಂಸಾರ ಮತ್ತು ಸನ್ಯಾಸದ ದ್ವಂದ್ವದಲ್ಲಿ ಹೊಯ್ದಾಡುತ್ತದೆ. ಅದಕ್ಕೆ ಸರಿಯಾಗಿ ಯಶೋಧರೆಯು ಹೇಳುವ ದುಃಸ್ವಪ್ನದ ವಿಚಾರವೂ ಮುಂದಾಗಲಿರುವುದನ್ನು ಸಾಂಕೇತಿಕವಾಗಿ ಬಿಂಬಿಸುವಂತಿದೆ. ಈ ಸನ್ನಿವೇಶದಲ್ಲಿ ಕನಸಿನ ತಂತ್ರದ ಮೂಲಕ ಮುಂದೆ ನಡೆಯುವ ಕಾರ್ಯಗಳಿಗೆ ಪ್ರಚೋದನೆ ದೊರಕಿದಂತಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿಯೇ ಸಿದ್ಧಾರ್ಥನು ಹೊರ ಪ್ರಪಂಚವನ್ನು ಅವಲೋಕಿಸಲು ತಂದೆಯ ಅನುಮತಿ ಬೇಡುತ್ತಾನೆ.

ಎರಡನೆಯ ಅಂಕದ ಮೊದಲ ದೃಶ್ಯದಲ್ಲಿ ನಗರ ದರ್ಶನ ಮಾಡಿದ ಸಿದ್ಧಾರ್ಥ ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ಲೋಕಕ್ಕೆ ಜ್ಞಾನದ ಬೆಳಕು ನೀಡಬೇಕೆಂಬ ತನ್ನ ಹಂಬಲವನ್ನು ಸಾರಥಿ ಚನ್ನನಿಗೆ ತಿಳಿಸುತ್ತಾನೆ. 'ಪರಾಧೀನನಾದವನು ಸ್ವಾಧೀನತೆಯ ತತ್ವವನ್ನು ತಿಳಿಯಬಲ್ಲನೇ?' ಎಂದು ಸಂಸಾರ ತನ್ನ ಸಾಧನೆಗೆ ತೊಡಕಾಗುವುದನ್ನು ವಿವರಿಸುತ್ತಾನೆ. ಈ

ಸಂದರ್ಭ ಕುವೆಂಪು ಅವರ 'ಮಹಾರಾತ್ರಿ' ಯಲ್ಲಿನ ಸಿದ್ಧಾರ್ಥನ ಗೃಹತ್ಯಾಗದ ವಿಚಾರವನ್ನು ಹೋಲುತ್ತದೆ. ಸಿದ್ಧಾರ್ಥನ ಮನಸ್ಸು ವೈರಾಗ್ಯಪರವಶವಾದ ಸಮಯದಲ್ಲಿಯೇ ಪುತ್ರೋತ್ಸವದ ಸುದ್ದಿ ಕೇಳಿಬರುತ್ತದೆ. ಅದಕ್ಕೆ ಸಿದ್ಧಾರ್ಥ ನೀಡುವ ಪ್ರತಿಕ್ರಿಯೆ 'ನನ್ನ ಜೀವನ ಸೂರ್ಯನನ್ನು ಹಿಡಿದ ರಾಹುಗ್ರಹವು ಶಿಶುರೂಪದಿಂದ ಜನಿಸಿರುವುದೆ!' ಎಂಬ ವಿಷಾದದ ಉತ್ತರ.

ಈಗಾಗಲೇ ಗೃಹತ್ಯಾಗದ ನಿರ್ಧಾರ ಕೈಗೊಂಡಿರುವ ಸಿದ್ಧಾರ್ಥನಿಗೆ ವೃದ್ಧ, ರೋಗಿ, ಮೃತವ್ಯಕ್ತಿ, ಭಿಕ್ಷುಕ ಕಾಣಿಸಿಕೊಳ್ಳುತ್ತಾರೆ. ಬುದ್ಧನನ್ನು ಕುರಿತ ಬಹುತೇಕ ಎಲ್ಲ ಕೃತಿಗಳಲ್ಲೂ ಈ ವಿಚಾರದ ಪ್ರಸ್ತಾಪವಿದ್ದು, ಇದೊಂದು ಸಾಂಕೇತಿಕವಾದ ಚಿತ್ರಣವಾಗಿದೆ. ವಾಸ್ತವವಾಗಿ ಸಿದ್ಧಾರ್ಥ ಈ ದೃಶ್ಯಗಳನ್ನು ಈ ಮೊದಲು ನೋಡಿರಲಿಲ್ಲವೆಂಬುದು ಉತ್ಪ್ರೇಕ್ಷೆಯಾಗುತ್ತದೆ. ಸಿದ್ಧಾರ್ಥ ಕಾಣುವ ಈ ದೃಶ್ಯಗಳು ಆತನ ಅಂತರಂಗವನ್ನು ಎಚ್ಚರಗೊಳಿಸುವ, ಆತನ ಲೋಕೋದ್ಧಾರದ ಕಾಯಕವನ್ನು ಜಾಗೃತಗೊಳಿಸುವ ಸಂಕೇತಗಳಾಗಿವೆ. ಈ ದೃಶ್ಯಗಳಿಂದ ಜಾಗೃತನಾದ ಸಿದ್ಧಾರ್ಥ ತನ್ನ ಗೃಹತ್ಯಾಗದ ವಿಚಾರವನ್ನು ತಂದೆ ಶುದ್ಧೋದನನಿಗೆ ತಿಳಿಸಿ, ಅವನ ಅನುಮತಿಯನ್ನು ಪಡೆಯುವನು.

ದೃಶ್ಯ ೨ ರಲ್ಲಿ ತನ್ನ ಗೃಹತ್ಯಾಗಕ್ಕೆ ಚನ್ನನ ನೆರವನ್ನು ಯಾಚಿಸುವ ಸಂದರ್ಭ, ಇಲ್ಲಿ ಚನ್ನನ ಪಾತ್ರದ ಹಿರಿತನ, ಆತ ಸಿದ್ಧಾರ್ಥನ ಮನವೊಲಿಸಲು ಪ್ರಯತ್ನಿಸುವುದು ಮನೋಜ್ಞವಾಗಿ ಮೂಡಿಬಂದಿದೆ. ಮುಂದೆ ಸಿದ್ಧಾರ್ಥ ತನ್ನ ಒಲುಮೆಯ ಪತ್ನಿ ಪುತ್ರರನ್ನು ಕೊನೆಯ ಸಾರಿ ನೋಡಿ ಹೊರಡಲನುವಾಗುತ್ತಾನೆ. ಆಗ ರತಿಯ ಪ್ರವೇಶವಾಗುತ್ತದೆ. ಹೀಗೆ ನಡುನಡುವೆ ಕಾಣಿಸಿಕೊಳ್ಳುವ ರತಿಯ ಪಾತ್ರ ಸಿದ್ಧಾರ್ಥನಲ್ಲಿ ಪ್ರಲೋಭನೆಯನ್ನು ಉಂಟುಮಾಡುವ ತಂತ್ರವಾಗಿದೆ. ದೃಶ್ಯ ೨ ರಲ್ಲಿ ಸಿದ್ಧಾರ್ಥನಳಿದು ಬುದ್ಧನುದಿಸುವ ಸಂದರ್ಭವನ್ನು, ದೃಶ್ಯ ೪ ರಲ್ಲಿ ಸಿದ್ಧಾರ್ಥನ ಅಗಲುವಿಕೆಯಿಂದ ಯಶೋಧರ, ಅಪರಾಜಿತೆ ಮತ್ತು ಶುದ್ಧೋದನ ದುಃಖಿತರಾಗಿರುವುದನ್ನು ಚಿತ್ರಿಸಲಾಗಿದೆ. ನಾಟಕಕಾರರ ಕನಸಿನ ತಂತ್ರ ಇಲ್ಲಿ ಮತ್ತೊಮ್ಮೆ ಕಾಣಿಸಿಕೊಳ್ಳುತ್ತದೆ.

ಮೂರನೆಯ ಅಂಕದಲ್ಲಿ ಸನ್ಯಾಸಿಗಳ ಚಂಚಲ ಸ್ವಭಾವವನ್ನು ಧರ್ಮದ ಹೆಸರಿನಲ್ಲಿ ನಡೆಯುವ ವಂಚನೆಯನ್ನು ವಿಡಂಬಿಸಲಾಗಿದೆ. ಇದು ಸಮಕಾಲೀನ ಸಮಾಜದ ಚಿತ್ರಣವೂ ಆಗಿದೆ. ಮುಂದಿನ ದೃಶ್ಯದಲ್ಲಿ ವೇದಗಳ ಕರ್ಮಕಾಂಡವನ್ನು. ಪ್ರಾಣಿವಧೆಯಂತಹ ಹಿಂಸೆಯನ್ನು,

ಉಳ್ಳವರ ದರ್ಪವನ್ನು ಇಲ್ಲದವರ ಅಸಹಾಯಕತೆಯನ್ನು ಬಿಂಬಿಸಲಾಗಿದೆ. ನಾಟಕದ ಆರಂಭದಲ್ಲಿ ಕಾಣಿಸಿಕೊಂಡ ಅಹಿಂಸಾ ತತ್ವದ ಪ್ರತಿಪಾದನೆ ಇಲ್ಲಿಯೂ ಮುಂದುವರೆಯುತ್ತದೆ. ದೃಶ್ಯ ೨ ರಲ್ಲಿ ಮಗುವನ್ನು ಕಳೆದುಕೊಂಡ ತಾಯಿಯೊಬ್ಬಳಿಗೆ ಸಾವಿನ ಅನಿವಾರ್ಯತೆಯನ್ನು ತಿಳಿಸಿಕೊಡುವ ಪ್ರಸಿದ್ಧ ಸಂದರ್ಭದ ನಿರೂಪಣೆಯಿದೆ. ಯಾವ ಸಾವಿನ ದೃಶ್ಯವನ್ನು ನೋಡಿ ಸಿದ್ಧಾರ್ಥ ವಿಚಲಿತನಾಗಿದ್ದನೊ ಆ ಸಾವಿನ ಅನಿವಾರ್ಯತೆಯನ್ನು ಬೋಧಿಸುವುದು ಆತನ ಮನಸ್ಥಿತಿಯ ಔನ್ನತ್ಯವನ್ನು ತಿಳಿಸುತ್ತದೆ.

ಈ ದೃಶ್ಯದಲ್ಲಿ ಮತ್ತೆ ರತಿ ಮನ್ಮಥರ ಪ್ರವೇಶವಾಗುತ್ತದೆ. ಸಿದ್ಧಾರ್ಥ ಬೋಧಿಯನ್ನು ಹೊಂದುವ ಮುನ್ನ ಮತ್ತೊಮ್ಮೆ ಪ್ರಲೋಭನೆಗಳು ಆತನ ಚಿತ್ತವೃತ್ತಿಯನ್ನು ಕಲಕುವ ಪ್ರಯತ್ನ ಮಾಡುತ್ತದೆ. ಈ ಹೋರಾಟದಲ್ಲಿ ಜಯಶಾಲಿಯಾದ ಸಿದ್ಧಾರ್ಥ ಸ್ಥಿತಪ್ರಜ್ಞನಾಗಿ ಬುದ್ಧನಾಗುತ್ತಾನೆ. ದೃಶ್ಯ ೪ ರಲ್ಲಿ ಬುದ್ಧ ತನ್ನ ಪೂರ್ವಾಶ್ರಮದ ಬಂಧುಗಳನ್ನು ನೋಡಲು ಆಗಮಿಸುವುದನ್ನು, ಅದರಿಂದ ಪ್ರಭಾವಿತರಾದ ಯಶೋಧರಾ, ರಾಹುಲರು ಸನ್ಯಾಸದತ್ತ ಆಕರ್ಷಿತರಾಗುವ ಚಿತ್ರವಿದೆ. ಹಾಗೆಯೇ ಈ ದೃಶ್ಯದಲ್ಲಿ ಯಶೋಧರೆ ಬುದ್ಧನನ್ನು ನನ್ನನ್ನು ಈ ಶೋಕ ಸಾಗರದಲ್ಲಿ ಮುಳುಗಿಸಿದುದು ಯಾವ ನ್ಯಾಯ ಎಂದು ಪ್ರಶ್ನಿಸುತ್ತಾಳೆ. ಯಶೋಧರೆಯ ಈ ಪ್ರಶ್ನೆ ಪ್ರತಿಭಟನಾತ್ಮಕವಾಗಿದ್ದರೂ ಅದು ಬುದ್ಧನನ್ನು ಪ್ರತಿಬಂಧಿಸುವುದಿಲ್ಲ. ತನ್ನ ಪತಿಯಾದವನನ್ನು ಲೋಕವ್ಯಕ್ತಿಯಾಗಿ ಬಿಟ್ಟು ಕೊಡುವ ಔದಾರ್ಯ ಆಕೆಯದು. ಯಶೋಧರೆಯ ತ್ಯಾಗ ಬುದ್ಧನ ತ್ಯಾಗಕ್ಕೆ ಸರಿಸಮನಾಗಿ ನಿಲ್ಲುತ್ತದೆ. ಪತಿಯ ಸಾಧನೆಗಾಗಿ ತನ್ನ ಸುಖವನ್ನು ಬಿಟ್ಟುಕೊಡುವ, ಆ ಸಂದರ್ಭದಲ್ಲಿ ಆಕೆ ತಳೆಯುವ ನಿರ್ಧಾರ ಆಕೆಯನ್ನು ವಿಶಿಷ್ಟ ವ್ಯಕ್ತಿಯಾಗಿಸುತ್ತದೆ. 'ಪ್ರಪಂಚವು ಮಾಯೆ, ಕರ್ಮವು ಬಂಧನ, ನಿರ್ವಾಣವೇ ಮೋಕ್ಷ, ಇದೇ ಬುದ್ಧದೇವನ ಮೂರು ರತ್ನಗಳು, ನಾನು ಅವುಗಳನ್ನು ಆಶ್ರಯಿಸಿ ಮುಕ್ತಳಾಗುವೆನು.' ಎಂಬ ಮಾತಿನೊಂದಿಗೆ ನಾಟಕ ಅಂತ್ಯವಾಗುತ್ತದೆ.

'ಗೌತಮಬುದ್ಧ' ನಾಟಕ ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿರುವುದರಿಂದ ಕೆಲವು ಸೀಮಿತತೆಗಳಿದ್ದರೂ ಅದನ್ನೂ ಮೀರಿ ನಾಟಕಕಾರರ ಆಶಯ ಈಡೇರಿದೆ. ಸ್ವಾತಂತ್ರ್ಯ ಪೂರ್ವದಲ್ಲಿನ ಹಿಂಸಾಪ್ರವೃತ್ತಿಯನ್ನು ಒಡೆಯುವ ಆಶಯ ಪಾರಿವಾಳಕ್ಕೆ

ಜೀವದಾನ ಮಾಡುವ ಮತ್ತು ಬಿಂಬಸಾರನ ಯಜ್ಞದಲ್ಲಿ ಪ್ರಾಣಿಬಲಿ ನಿಷೇಧ ಮಾಡುವ ಸಂದರ್ಭದಲ್ಲಿ ಈಡೇರಿದೆ ಎನ್ನಬಹುದು.

ಇಡೀ ನಾಟಕ ಸಿದ್ಧಾರ್ಥ ಬಾಲ್ಯಜೀವನದಿಂದ ಹಿಡಿದು, ಆತ ಬುದ್ಧನಾದುದು, ಬುದ್ಧನಾದ ನಂತರ ಮತ್ತೆ ಕಪಿಲವಸ್ತುವಿಗೆ ಹಿಂತಿರುಗಿ ಬೋಧಿಸಿದ್ದು, ರಾಹುಲನನ್ನು ಧರ್ಮಬೋಧನೆಗಾಗಿ ತನ್ನ ಜೊತೆ ಕರೆದುಕೊಂಡು ಹೋಗಿದ್ದು, ಈ ಎಲ್ಲ ವಿಚಾರಗಳನ್ನು ಚಿತ್ರಿಸುತ್ತದೆ.

ಯಶೋಧರಾ :

ಮಾಸ್ತಿಯವರ ಐತಿಹಾಸಿಕ ನಾಟಕಗಳಲ್ಲಿ 'ಯಶೋಧರಾ' ಮಹತ್ವದ ಸ್ಥಾನದಲ್ಲಿ ನಿಲ್ಲುವಂಥದ್ದು. ವಸ್ತು ಯಾವುದೇ ಇರಲಿ ಅದನ್ನು ನಿರೂಪಿಸುವ ಮಾಸ್ತಿಯವರ ಪ್ರತಿಭೆ ಅನನ್ಯವಾದುದು. ಮಾಸ್ತಿಯವರ ವಿನೂತನ ದೃಷ್ಟಿಕೋನಕ್ಕೆ ನಿರ್ದಶನವಾಗಿ ನಿಲ್ಲುತ್ತದೆ. ಯಶೋಧರೆಯ ಪಾತ್ರಚಿತ್ರಣ ರಾಮಾಯಣದಲ್ಲಿ ಅನಾದರಕ್ಕೊಳಗಾದ ಊರ್ಮಿಳೆಯ ಪಾತ್ರಕ್ಕೆ ಕುವೆಂಪು ಅವರು ಹೊಸರೂಪ ನೀಡಿದಂತೆ ಬುದ್ಧನ ಪೂರ್ವಾಶ್ರಮದ ಸತಿ ಯಶೋಧರೆಗೆ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಕಲ್ಪಿಸಿದ ಶ್ರೇಯಸ್ಸು ಮಾಸ್ತಿಯವರದು.

'ಯಶೋಧರಾ' ಶೀರ್ಷಿಕೆಯೇ ಹೇಳುವಂತೆ ಯಶೋಧರೆಯ ದೃಷ್ಟಿಯಿಂದ ಇಡೀ ಪ್ರಕರಣವನ್ನು ಶೋಧಿಸುವಂಥದ್ದು. ಯಶೋಧರೆಯ ಯಶೋಗಾಥೆಯಿದು. ಯಶೋಧರೆಯ ಮಾನಸಿಕ ಒಳತೋಟಿ, ಆಕೆಯ ಬದುಕಿನ ಏರಿಳಿತ, ಅವಳ ಮಾಗಿದ ವ್ಯಕ್ತಿತ್ವ, ಬುದ್ಧ ಯಶೋಧರೆಯ ಜೀವನದಲ್ಲಿ ಕಾಣಿಸಿಕೊಳ್ಳುವ ರಾಗ–ವಿರಾಗದ ಸಂಘರ್ಷ ಹೀಗೆ ಇಡೀ ನಾಟಕ ಒಂದು ದೃಶ್ಯರೂಪಕವಾಗಿ ಬೆಳೆಯುತ್ತದೆ. ನಾಟಕ ಲೌಕಿಕ ಅಧ್ಯಾತ್ಮದ ಸಂಘರ್ಷದಲ್ಲಿ ಅಧ್ಯಾತ್ಮ ಜಯಿಸುವುದನ್ನು ಇವೆರಡರಲ್ಲೂ ಸ್ತ್ರೀಯ ಸಹಭಾಗಿತ್ವವನ್ನು ಪ್ರತಿಪಾದಿಸುತ್ತದೆ.

ದೀಪದ ಕೆಳಗೆ ಕತ್ತಲು ಎಂಬಂತೆ ಲೋಕಕ್ಕೆ ಬೆಳಕು ಕೊಟ್ಟವನ ಕೈ ಹಿಡಿದವಳ ಬದುಕು ಕತ್ತಲಿನಲ್ಲಿ ಮುಳುಗಿ ಹೋಗಿದ್ದನ್ನು, ತನ್ನ ವಿಶಿಷ್ಟ ವ್ಯಕ್ತಿತ್ವದಿಂದ ಆ ಬೆಳಕು ತನ್ನ ಮನೆ ಮನ ಬೆಳಗುವ ಹಾಗೆ ಮಾಡಿದ ಹೆಣ್ಣೊಬ್ಬಳ ಜೀವನ ಚಿತ್ರವಿದು.

ಲೋಕಕ್ಕೆ ಶಾಂತಿಯನ್ನು ತರುವ ಚಂದ್ರನ ಕಾಂತಿ

ನನ್ನೊಳಗೆ ಬೆಳಗದವೊಲೆನ್ನ ಹೃದಯದೆ ಮಧ್ಯೆ

ಎಂಬುದು ಯಶೋಧರೆಯ ಕೊರಗು, ಮುಂದೆ ಅವಳ ಕೊರಗು ಕರಗಿ ಅವಳು ಬೆಳಕನ್ನು ಕಾಣುತ್ತಾಳೆ.

ಎಲ್ಲ ಸುಖದಿ ಜೊತೆಗೆ ಕರೆದವರು

ಮುಕ್ತಿಯ ಸುಖಕೆ ಒಬ್ಬರೇ ನಡೆದರಮ್ಮಾ

ಎಂದು ದುಃಖಿಸುತ್ತಿದ್ದ ಯಶೋಧರೆ ತನ್ನ ಮಾಗಿದ ವ್ಯಕ್ತಿತ್ವದ ಪರಿಣಾಮದಿಂದ ಮುಕ್ತಿಯ ಸುಖದಲ್ಲಿಯೂ ಹೆಣ್ಣನ್ನು ಪಾಲುದಾರಳಾಗಿಸುವ ಅವಕಾಶ ನೀಡಬೇಕೆಂದು ಬುದ್ಧನಿಗೆ ಸಂದೇಶ ನೀಡುತ್ತಾಳೆ. ತನ್ನ ಪತಿ ಲೋಕಕ್ಕೆ ಬೆಳಕು ನೀಡುವ ಜ್ಯೋತಿಯಾಗಿದ್ದರೂ, ಅದಕ್ಕಾಗಿ ಯಶೋಧರೆಗೆ ಅಭಿಮಾನವಿದ್ದರೂ ಬುದ್ಧನ ಎಲ್ಲ ಕೃತ್ಯಗಳನ್ನು ಸಮಂಜಸವೆಂದು ಆಕೆ ಒಪ್ಪಲಾರಳು. 'ಇರುವ ಮನೆಯನ್ನು ಸುಟ್ಟು ಊರ ಬೆಳಗುವಂತೆ' ಎಂಬುದು ಆಕೆಯ ನಿಲುವು. 'ಎರಡನೆಯ ಜೀವ ಒಪ್ಪುವ ಮುನ್ನ ದಾಂಪತ್ಯ ಮುಗಿಯಬಹುದೆಂತು' ಎಂಬ ಧರ್ಮಸೂಕ್ಷ್ಮದ ಪ್ರಶ್ನೆ ಆಕೆಯದು. ಅವಳ ಈ ಪ್ರಶ್ನೆ ಇಂದಿಗೂ ಮುಖ್ಯವಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಸ್ಥಾನ-ಮಾನ, ಅದಕ್ಕಾಗಿ ಅವಳ ಹೋರಾಟ ಬುದ್ಧನ ಕಾಲದಿಂದಲೂ ಇದ್ದು ಅಂದಿನಿಂದಲೂ ಇದು ಪ್ರಶ್ನೆಯಾಗಿಯೇ ಉಳಿದಿರುವುದು ಕಂಡುಬರುತ್ತದೆ.

ತನ್ನ ಪತಿ ಸಾಧನೆಯ ಶಿಖರಕ್ಕೇರಿರುವ ಅಭಿಮಾನ ಒಂದು ಕಡೆಯಾದರೆ ತನ್ನ ಬಗೆಗೆ ಚಿಂತಿಸದೆ ಆ ನಿರ್ಧಾರಕ್ಕೆ ಬಂದರೆಂಬ ನೋವು ಮತ್ತೊಂದು ಕಡೆ ಯಶೋಧರೆಯನ್ನು ಕಾಡುತ್ತದೆ. ಕಪಿಲ ವಸ್ತುವಿಗೆ ಬಂದ ಬುದ್ಧನೊಂದಿಗೆ ಆಕೆ ನಡೆದುಕೊಳ್ಳುವ ರೀತಿಯಿಂದ ಇದು ಸ್ಪಷ್ಟವಾಗುತ್ತದೆ. ಹತ್ತು ವರ್ಷಗಳ ನಂತರ ಕಪಿಲ ವಸ್ತುವಿಗೆ ಬಂದ ಬುದ್ಧನನ್ನು ಎಲ್ಲರೂ ಹೋಗಿ ನೋಡುತ್ತಾರೆ ಯಶೋಧರೆಯನ್ನು ಹೊರತುಪಡಿಸಿ. ಯಶೋಧರೆಯ ಈ ವರ್ತನೆ ಅಹಂಕಾರದ್ದಲ್ಲ, ಆತ್ಮಾಭಿಮಾನದ್ದು. 'ಎಲ್ಲರಂತಲ್ಲ ಪೂರ್ವಾಶ್ರಮದ ಸತಿಯೆಂದು ಕೃಪೆಯ ತೋರುವುದಾಗೆ ಇಲ್ಲಿಗೆ ಬಿಜಗೆಯ್ದು ನನ್ನ ಸೇವೆಯ ಕೊಳಲಿ' ಎಂಬ ಮಾತು ಅವಳ ಆತ್ಮಾಭಿಮಾನದ ಪ್ರತೀಕವೇ ಆಗಿದೆ. ಅದರ ಮುಂದುವರಿಕೆಯೇ ದಾಂಪತ್ಯವನ್ನು ಕುರಿತು ಆಕೆ ಎತ್ತುವ ಧರ್ಮ ಸೂಕ್ಷ್ಮದ ಪ್ರಶ್ನೆ.

ಸಿದ್ಧಾರ್ಥ ಲೌಕಿಕವನ್ನು ತ್ಯಜಿಸಿ ಯಾವ ಸಂಕೋಲೆಗೆ ಒಳಗಾಗದ ಜ್ಞಾನವನ್ನು ಪಡೆದು ಆ ಮೂಲಕ ಹೊಸ ಧರ್ಮದ ಉದಯಕ್ಕೆ ಕಾರಣನಾಗಿರಬಹುದು. ಆದರೆ ಯಶೋಧರೆಗೆ ಅದು ಧರ್ಮವೇ ಅಲ್ಲ.

ಬಾಳುಗಳ ಸೀಳಿ ಮನೆಗಳ ಮುರಿದು ಹೃದಯಗಳ
ಪುಡಿಮಾಡಿ ಕಣ್ಣೀರ ಕಾಲ್ವೆಯಲ್ಲಿ ಕದಡಿಸುವ
ಈ ಧರ್ಮ ಮತಗಳೇತರ ಧರ್ಮ ಮತಗಳು?

ಎನ್ನುವ ಪ್ರಶ್ನೆ ಅವಳದು. ಜನರ ಹಿತವನ್ನು ಸಾಧಿಸುವುದಕ್ಕಾಗಿ ಗುರುಗಳು ತನ್ನ ಸೌಖ್ಯವನ್ನು ಕಡೆಗಣಿಸಿದರೆಂಬ ಆನಂದನ ಸಮರ್ಥನೆಗೆ 'ಇರುವ ಮನೆಯನ್ನು ಸುಟ್ಟು ಊರ ಬೆಳಗುವಂತೆ' ಎಂದು ತೀವ್ರವಾಗಿ ಪ್ರತಿಕ್ರಿಯಿಸುತ್ತಾಳೆ. ಯಶೋಧರೆಯ ಈ ನಿಷ್ಠುರತೆ ಬುದ್ಧನ ಆಗಮನದಿಂದ ಶಾಂತವಾಗುತ್ತದೆ. ಯಶೋಧರೆಯು ಅಂದು ತನಗೆ ತೋರಿದ ಪ್ರೇಮದ ನಂದಾದೀಪ ಇಂದಿಗೂ ತನ್ನ ಆಂತರ್ಯವನ್ನು ತೃಪ್ತಿಯಲ್ಲಿ ಬೆಳಗುತ್ತಿದೆ. 'ಪತಿಗೆ ಬೇಡದೆ ಹೋದೆನೆಂದು ನೆನೆದುದು ಸಾಕು' ಎನ್ನುವ ಬುದ್ಧನ ನುಡಿಗೆ ಆಕೆ ಶಾಂತಿಯನ್ನು ಪಡೆಯುತ್ತಾಳೆ. ಆದರೂ ಅವಳಲ್ಲಿ ಸಂದೇಹವಿರುವುದನ್ನರಿತ ಬುದ್ಧ ಪ್ರಶ್ನಿಸುತ್ತಾನೆ. ಪತಿಯಾದವನು ಧರ್ಮಮಾರ್ಗದಲ್ಲಿ ನಡೆಯಲು ಸತಿ ಅದಕ್ಕೆ ತೊಡಕಾಗುವಳೆ? ಎನ್ನುವ ಯಶೋಧರೆ 'ಎರಡನೆಯ ಜೀವ ಒಪ್ಪುವ ಮುನ್ನ ದಾಂಪತ್ಯ ಮುಗಿಯಬಹುದೆಂತು?' ಎಂಬ ಧರ್ಮ ಸೂಕ್ಷ್ಮವನ್ನು ಮುಂದಿಡುತ್ತಾಳೆ. ಧರ್ಮದಲ್ಲಿ ದಾಂಪತ್ಯಕ್ಕಿಂತ ವಿರಾಗವೇ ಮುಖ್ಯ. ಸಾಧನೆಯ ನಂತರ ಸತಿ ಪತಿಗಳು ಸ್ವಾರ್ಥವಿಲ್ಲದೆ ನೆರವಾಗಬಹುದು ಎಂದ ಬುದ್ಧನ ಮಾತುಗಳಿಂದ ಪತಿವರ್ಜಿತಗಳು ತಾನೆಂಬ ಭಯವನ್ನು ಬಿಟ್ಟು ದೀಕ್ಷೆಯನ್ನು ಯಾಚಿಸುತ್ತಾಳೆ.

ಸ್ತ್ರೀ ಕೂಡ ಶೂದ್ರ ವರ್ಗಕ್ಕೆ ಸೇರಿದವಳೆಂಬ, ಧರ್ಮಾಚರಣೆಯಲ್ಲಿ ಆಕೆಯ ಸಹಭಾಗಿತ್ವ ಸಲ್ಲದೆಂಬ ವಿಚಾರವನ್ನು ಬುದ್ಧನು ಒಪ್ಪಿಕೊಂಡಂತೆ ತೋರುತ್ತದೆ. ಹಾಗಾಗಿ ಸ್ತ್ರೀಯರಿಗೆ ದೀಕ್ಷೆ ಎನ್ನುವುದಿಲ್ಲ ಎನ್ನುತ್ತಾನೆ. ಬುದ್ಧನ ಈ ಮಾತಿಗೆ

ಜಗದೊಳರ್ಧವ ಬಿಟ್ಟು ಉಳಿದರ್ಧ ಮಾತ್ರಕ್ಕೆ
ಅನ್ವಯಿಸುವುದು ಧರ್ಮವೇ? ಧರ್ಮಖಂಡವದು
ಹೋಳುಮಾಡಿದ ಧರ್ಮ

ಎಂದು ಸಮಾಜದಲ್ಲಿ ಹೆಣ್ಣಿಗಿರುವ ಸ್ಥಾನ ಇಷ್ಟು ಮಾತ್ರವೇ ಎಂದು ಪ್ರತಿಭಟನಾತ್ಮಕವಾದ ಧೋರಣೆಯನ್ನು ತೋರುತ್ತಾಳೆ. ಯಶೋಧರೆಯ ಮಾತಿಗೆ ಆಮ್ರಪಾಲಿಯು ದನಿಗೂಡಿಸುತ್ತಾಳೆ. ಸ್ತ್ರೀಯರಿಗೆ ದೀಕ್ಷೆ ನೀಡಿದರೆ ತನ್ನ ಧರ್ಮದ ಆಯುಷ್ಯ ಅರ್ಧವಾಗುತ್ತದೆ ಎಂದು ಬುದ್ಧ ಉತ್ತರಿಸಿದಾಗ 'ಸ್ತ್ರೀ ಎಂಬುದಿಷ್ಟಲ್ಲವಾಯಿತೆ'? ಎಂದು ಕಟಕಿಯಾಡುತ್ತಾಳೆ ಮುಂದುವರೆದು...

ಪುರುಷರನ್ನು ಮಾತ್ರ ಸಲುಹುದಾಗೆ ಒಂದು ಯುಗ
ಸ್ತ್ರೀಪುರುಷರನ್ನು ಸಲಹೆ ಅರ್ಧಯುಗ ಇರ್ವರೂ
ಮುಕ್ತರಾಗಲೀ, ಅರ್ಧಯುಗವೇ ಸಾಕೆಂಬೆನು

ಎಂಬ ಅವಳ ದಿಟ್ಟತನದ ನುಡಿಗೆ ತನ್ನ ನಿರ್ಧಾರವನ್ನು ಸಡಿಲಿಸಿದ ಬುದ್ಧ ತನ್ನ ಧರ್ಮದ ಆ ಒಂದು ಕೊರತೆಯನ್ನು ನೀಗುತ್ತಾನೆ. ಈ ಮೂಲಕ ಸ್ತ್ರೀಯರಿಗೆ ಅಧ್ಯಾತ್ಮ ಮಾರ್ಗದಲ್ಲಿ ಸಮಾನತೆಯ ಸ್ಥಾನವನ್ನು ಕಲ್ಪಿಸಿಕೊಡುತ್ತಾನೆ "ಯಶೋಧರೆಯ ಪ್ರಯತ್ನದಿಂದ ಸ್ತ್ರೀ ಜಾತಿಗೆ ಸಂದ ಯೋಗ್ಯತೆಯನ್ನು ಆಮ್ರಪಾಲಿ ಗುರುಪತ್ನಿಯ ಸಾಧನೆಯನ್ನು ಗುರುಗಳಲ್ಲಿ ಯಾವ ಕೃಪೆಯನ್ನು ಕಂಡೆನೋ ಗುರುಪತ್ನಿಯಲ್ಲಿ ಕಂಡು ಆನಂದಿಸುತಲಿಹೆನು. ಎಂದು ಧನ್ಯತೆಯ ಭಾವವನ್ನು ಅನುಭವಿಸುತ್ತಾಳೆ".[೨]

ಬುದ್ಧನ ಕಥಾವಸ್ತುವಿನಲ್ಲಿ ದೊರಕಿದ ಒಂದು ಎಳೆಯನ್ನು ತೆಗೆದುಕೊಂಡ ಮಾಸ್ತಿಯವರು ತಮ್ಮ ವಿನೂತನ ದೃಷ್ಟಿಕೋನದಿಂದ ಅದಕ್ಕೆ ಹೊಸ ರೂಪವನ್ನು ಕೊಟ್ಟಿಸಿದ್ದಾರೆ. ಸಿದ್ಧಾರ್ಥ ಬುದ್ಧನಾದುದು ಲೋಕಕೆಲ್ಲಾ ತಿಳಿದಿರುವ ಸಂಗತಿಯಾಗಿದೆ. ಆದರೆ ಆ ಸಾಧನೆಯ ಹಿಂದೆ ಯಶೋಧರೆಯದು ಪಾಲಿದೆ. ತನ್ನ ಪತಿಯಾದವವನ್ನು ಲೋಕದ ಒಳಿತಿಗಾಗಿ ಬಿಟ್ಟು ಕೊಡುವ ಔದಾರ್ಯ ಆಕೆಯದು. ಬುದ್ಧನ ಸಾಧನೆಯ ಹಿಂದಿನ ಪ್ರೇರಕ ಶಕ್ತಿಯನ್ನು ಗುರುತಿಸಿ ಬೆಳಕು ಚೆಲ್ಲುವ ಪ್ರಯತ್ನ ಲೇಖಕರದು. ಆ ಮೂಲಕ ಭಾರತೀಯ ಸಂಸ್ಕೃತಿಯ ಮೌಲ್ಯವನ್ನು ಪ್ರತಿಪಾದಿಸುತ್ತಲೇ ಆಧುನಿಕ ಕಾಲಕ್ಕೆ ಅವಶ್ಯವಾದ ಸಮಾನತೆಯ ತತ್ವವನ್ನು ಬಿಂಬಿಸುವುದು ಅವರ ವಿಶೇಷತೆ.

---

೨. ಮಾಸ್ತಿ ವೆಂಕಟೇಶ ಅಯ್ಯಂಗಾರ್. ಆರ್.ಎಸ್ ರಾಮರಾವ್. ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರು

ಧರ್ಮ, ಅರ್ಥ, ಕಾಮದಲ್ಲಿ ಜೊತೆನಡೆದವನು ಮೋಕ್ಷದಲ್ಲಿ ತನ್ನನ್ನು ತ್ಯಜಿಸಿದನೆಂಬ ಯಶೋಧರೆಯ ವ್ಯಥೆ ಪ್ರತಿಭಟನೆಯ ರೂಪ ಪಡೆದು ಅವಳ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಸ್ತ್ರೀ ಸ್ವಾತಂತ್ರ್ಯ ಸಮಾನತೆಯ ಪರವಾಗಿ ನಿಲ್ಲುವ ಅವಳು ಬುದ್ಧನು ಬೆಳಕು ನೀಡದೆ ಇದ್ದ ಸ್ತ್ರೀ ಕುಲಕ್ಕೂ ಅವನ ಜ್ಞಾನಜ್ಯೋತಿ ತಲುಪುವ ಹಾಗೆ ಮಾಡುತ್ತಾಳೆ. ಇಡೀ ನಾಟಕ ಯಶೋಧರೆಯ ಮನಸ್ಸಿನ ತಾಕಲಾಟವನ್ನು ಮನೋಜ್ಞವಾಗಿ ಚಿತ್ರಿಸುತ್ತಿರುವುದರಿಂದ ಆ ಮಾನಸಿಕ ಕ್ರಿಯೆಗೆ ತಕ್ಕ ಸಂಭಾಷಣಾ ಕುಶಲತೆಯನ್ನಿಲ್ಲಿ ಕಾಣಬಹುದು. ಮಾಸ್ತಿಯವರು ಸಂಪ್ರದಾಯ ನಿಷ್ಠ ಹೆಣ್ಣೊಬ್ಬಳು ಸಂದರ್ಭೋಚಿತವಾಗಿ ಪ್ರತಿಭಟನೆಯ ದನಿಯೆತ್ತುವುದನ್ನು ನಿರೂಪಿಸುತ್ತಿದ್ದರೂ ಇದರಿಂದ ಬುದ್ಧನ ವ್ಯಕ್ತಿತ್ವಕ್ಕೆ ಯಾವುದೇ ಕುಂದುಂಟಾಗದೆ ಎಚ್ಚರ ವಹಿಸಿದ್ದಾರೆ. ಪೂರ್ವಿಕರ ಮೌಲ್ಯಗಳ ಬೆಳಕಿನಲ್ಲಿ ಬದುಕಿನ ಸತ್ಯವನ್ನು ಕಂಡುಕೊಳ್ಳಬೇಕೆಂಬ ನಿಲುವಿನ ಮಾಸ್ತಿಯವರು ಆ ಮೌಲ್ಯಗಳೊಂದಿಗೆ ಬದಲಾವಣೆಯು ಅನಿವಾರ್ಯವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಡೀ ನಾಟಕದ ಕೇಂದ್ರಬಿಂದು ಯಶೋಧರೆಯಾಗಿರುವುದು ಅವಳ ವ್ಯಕ್ತಿತ್ವದ ದ್ಯೋತಕವಾಗಿದ್ದು ಮಾಸ್ತಿಯವರ ಸ್ತ್ರೀವಾದಿ ದೃಷ್ಟಿಕೋನಕ್ಕೆ ನಿದರ್ಶನವಾಗಿದೆ. ಹಾಗೆಯೇ ಯಶೋಧರೆಯ ನೋವಿನ ಚಿತ್ರಣವನ್ನು ಮಾತ್ರ ನೀಡದೆ ಪ್ರಾಸಂಗಿಕವಾಗಿ ಕೌಶಿಕ, ಕೌಂಡಿನ್ಯ, ಭಾರದ್ವಾಜ, ವಸಿಷ್ಠರ ಸಂಭಾಷಣೆಯಲ್ಲಿ ಧರ್ಮ ನಿರೂಪಣೆಯ ಪ್ರಸಂಗವನ್ನು ತರುತ್ತಾರೆ.

ಒಟ್ಟಾರೆಯಾಗಿ ಯಶೋಧರಾ ನಾಟಕ ನವೋದಯ ಕಾಲದಲ್ಲಿ ರಚನೆಯಾದ ಉದಾತ್ತ ಜೀವನ ದೃಷ್ಟಿಯ, ಮೌಲ್ಯಗಳ ನಿರೂಪಣೆಯಾಗಿದೆ. ಹಾಗಾಗಿ ಇಲ್ಲಿ ನವೋದಯದ ಅಂಶಗಳು ಪ್ರಭಾವ ಬೀರಿವೆ. "ಬುದ್ಧನಾದ ಮೇಲೂ ತನ್ನ ಬಾಲ್ಯ ಜೀವನವನ್ನು ಮಮತೆಯಿಂದ ನೆನಪಿಸಿಕೊಳ್ಳುವ ಮಾಸ್ತಿಯವರ ಗೌತಮ ಬುದ್ಧನ ಪಾತ್ರ ಕಲ್ಪನೆ ಮಹಾಪುರುಷನಿಗೆ ಉಚಿತವಾಗಿದೆ. ವೈರಾಗ್ಯದ ಹೆಸರಿನಲ್ಲಿ ಕಠೋರನಾಗದೆ ಬುದ್ಧನು ತನ್ನ ಪೂರ್ವಾಶ್ರಮ ಪತ್ನಿ ಯಶೋಧರೆಯನ್ನು ಕಾಣುವ ಸನ್ನಿವೇಶ ಹೃದಯ ವೇದಕವಾಗಿದ್ದು ಅಲ್ಲಿನ ಸಂಭಾಷಣೆಯಲ್ಲಿ ಮಾಸ್ತಿಯವರ ಪಕ್ವವಾದ ಜೀವನ ದೃಷ್ಟಿ ಪ್ರತಿಫಲಿಸಿದೆ. ಸತಿಯನ್ನು ತೊರೆದು ಕಾಡಿಗೆ ಹೋದ ತನ್ನ ವರ್ತನೆಯನ್ನು ಯಶೋಧರೆಗೆ ವಿವರಿಸುವ ಗೌತಮ ಬುದ್ಧನು ಹೇಳುವ ಮಾತಿನ ಹಿಂದೆ ಭಾರತೀಯ ನವೋದಯದ ಆಧ್ಯಾತ್ಮಿಕ ದೃಷ್ಟಿಯು ಅಡಗಿದೆ ಎಂಬುದು

ಗೋಚರವಾಗದಿರುವಂತಿಲ್ಲ" [೩]. ಹೀಗೆ ನಾಟಕಕಾರರು ಯಶೋಧರೆಯ ಮಾನಸಿಕ ಒಳತೋಟಿಯನ್ನು, ಗೌತಮನ ಹಿರಿಮೆಯನ್ನು ಏಕಕಾಲದಲ್ಲಿ ಕಟ್ಟಿಕೊಡುತ್ತಾರೆ.

ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ನಡೆಸಿ 'ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಕೈಯಾಡಿಸದ ಕ್ಷೇತ್ರವಿಲ್ಲ ಎಂಬ ಹೆಗ್ಗಳಿಕೆಗೆ ಶಿವರಾಮ ಕಾರಂತರು ಹಲವಾರು ನಾಟಕಗಳಲ್ಲಿ 'ಕಿಸಾಗೋತಮಿ' ಮತ್ತು 'ಬುದ್ಧೋದಯ' ಎಂಬೆರೆಡು ನಾಟಕಗಳು ಬುದ್ಧನನ್ನು ಕುರಿತವು. ವೈಚಾರಿಕ ನಿಲುವನ್ನುಳ್ಳ, ಎಲ್ಲವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಕಾರಂತರ ಬಹುತೇಕ ಪುರಾಣ ಕಥಾವಸ್ತುಗಳು ಸಾವು ಬದುಕಿನಂತಹ ಗಂಭೀರ ಸಮಸ್ಯೆಯನ್ನು ಒಳಗೊಂಡಿರುತ್ತವೆ. ಯಾವುದೇ ಕಟ್ಟುಪಾಡುಗಳ ಕುರುಡು ನಂಬಿಕೆಗಳಿಗೆ ಒಳಗಾಗದ ಕಾರಂತರು ವಾಸ್ತವದ ನೆಲೆಯಲ್ಲಿ ಈ ಸಮಸ್ಯೆಯನ್ನು ನಿರೂಪಿಸುತ್ತಾರೆ. ಹಾಗಾಗಿ ಇಲ್ಲಿನ ಪಾತ್ರಗಳು ಭಾವಾತಿರೇಕಕ್ಕೆ ಒಳಗಾಗುವುದಿಲ್ಲ.

'ಕಿಸಾಗೋತಮಿ' ೪ ದೃಶ್ಯಗಳುಳ್ಳ ಪುಟ್ಟ ನಾಟಕ. ಇಲ್ಲಿರುವುದು ನಾಲ್ಕೇ ಪಾತ್ರಗಳು. ಆದರೆ ಅದು ತನ್ನೊಳಗೆ ಅಡಗಿಸಿಕೊಂಡಿರುವ ಸತ್ಯ ಸಾರ್ವಕಾಲಿಕವಾದುದು. ಸಾವು ಎಂಬ ಶಬ್ದವೇ ಎಲ್ಲಾ ಕಾಲಕ್ಕೂ ಎಲ್ಲರನ್ನು ತಳಮಳಕ್ಕೀಡುಮಾಡುವಂತಹದ್ದು. ಸಾವಿನ ಭಯ ಯಾರನ್ನು ಬಿಟ್ಟದ್ದಿಲ್ಲ. ಅಂತಹ ಸಾವಿನ ಅನಿವಾರ್ಯತೆಯನ್ನು ಸ್ವಾನುಭವದಿಂದ ಸ್ವೀಕರಿಸುವ ಹೆಣ್ಣೊಬ್ಬಳ ಕಥೆಯಿದು. ಬುದ್ಧನ ಕೀರ್ತಿಯನ್ನು ಕೇಳಿದ ಕಿಸಾಗೋತಮಿ ಮೃತನಾದ ತನ್ನ ಕಂದನಿಗೆ ಆತ ಜೀವತುಂಬುವನೆಂಬ ಆಶಯದೊಂದಿಗೆ ಬುದ್ಧನಲ್ಲಿಗೆ ಬರುತ್ತಾಳೆ. ಮಗುವನ್ನು ಕಳೆದುಕೊಂಡು ರೋದಿಸುತ್ತ ಬಂದ ತಾಯಿಗೆ ಬುದ್ಧನು 'ಸಾವು ಕಾಣದ ಮನೆಯ ಸಾಸುವೆ'ಯ ಮದ್ದನ್ನು ತರಲು ಹೇಳುತ್ತಾನೆ. ಭಾವೋದ್ವೇಗಕ್ಕೆ ಒಳಗಾಗಿದ್ದ ಆ ತಾಯಿ ಬುದ್ಧ ಹೇಳಿದ ಮದ್ದು ಇಷ್ಟು ಸುಲಭದ್ದೆ, ತನ್ನ ಕಂದನ ಬದುಕು ಇಷ್ಟು ಸುಲಭದ್ದೆ ಎಂದು ಮದ್ದು ತರಲು ಹೊರಡುತ್ತಾಳೆ.

(೩.ಆಧುನಿಕ ಕನ್ನಡ ನಾಟಕ. ಕೆ. ಮರುಳಸಿದ್ದಪ್ಪ)

ಸಾಸುವೆ ತರಲು ಹೋದವಳಿಗೆ ಸತ್ಯದ ದರ್ಶನವಾಗುತ್ತದೆ. ಲೋಕದ ಜನರೆಲ್ಲ ಸಾವಿನ ಕ್ರೂರ ಹಿಡಿತಕ್ಕೆ ಸಿಲುಕಿ ದುಃಖಿತರಾಗಿರುವುದು ಆಕೆಗೆ ಅರಿವಾಗುತ್ತದೆ. ಸಾವಿಲ್ಲದ ಮನೆಯಿಲ್ಲ ಎಂಬ ಅರಿವು ಆಕೆಯಲ್ಲಿ ಮೂಡಿದ ನಂತರ ತನ್ನ ಮಗುವಿನ ಸಾವಿನ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಗೆ ಆಕೆ ತಲುಪುತ್ತಾಳೆ. ಆಸೆಯೇ ದುಃಖಕ್ಕೆ ಮೂಲವೆಂಬ ಸತ್ಯವನ್ನು ಕಂಡುಕೊಂಡಿದ್ದ ಬುದ್ಧ ಸಾಸುವೆ ಪ್ರಸಂಗದ ಮೂಲಕ ಆ ಸತ್ಯವನ್ನು ನೊಂದ ಹೆಣ್ಣುಮಗಳೊಬ್ಬಳು ತಿಳಿಯುವಂತೆ ಮಾಡುತ್ತಾನೆ. ಅಂತಿಮ ಜ್ಞಾನವನ್ನು ಪಡೆದು ದಿವ್ಯ ಜ್ಞಾನಿಯಾಗಿದ್ದ ಬುದ್ಧ ಸಾವಿನ ರಹಸ್ಯವನ್ನು, ಅನಿವಾರ್ಯತೆಯನ್ನು ಆಕೆಗೆ ಮನವರಿಕೆ ಮಾಡಿಕೊಡುವುದು ನಾಟಕದ ಉದ್ದೇಶವಾಗಿದೆ.

ಜಗತ್ತಿನ ಎಲ್ಲರ ಮೇಲೆ ಸಾವಿರ ಕರಾಳ ಛಾಯೆ ಇರುವುದನ್ನು ಅರಿತು ಹಿಂದಿರುಗಿದ ಆಕೆಗೆ

> 'ಸಾವಿಲ್ಲದೆಡೆಯಿಲ್ಲ, ನೋವಿಲ್ಲದೆಡೆಯಿಲ್ಲ
> ಸಾವು ಜೀವಕೆ ನಂಟು, ಅದನು ತಪ್ಪಿಸ ಸಲ್ಲ'

ಎಂಬ ಸತ್ಯವನ್ನು ದೃಷ್ಟಾಂತದ ಮೂಲಕ ತಿಳಿಯಪಡಿಸುತ್ತಾನೆ. ಮಗುವಿನ ಸಾವಿನಿಂದ ಎಲ್ಲವನ್ನು ಕಳೆದುಕೊಂಡು ಬರಿಗೈಯಲ್ಲಿ ಬಂದ ತಾಯಿ ಬುದ್ಧವಾಣಿಯ ಅರಿವನ್ನು ಮಡಿಲಿನಲ್ಲಿ ತುಂಬಿಕೊಂಡು ಹಿಂದಿರುಗುತ್ತಾಳೆ. ಬದುಕು ನಶ್ವರ, ಮಾಯಾ ಪ್ರಪಂಚ ಎಂಬ ತಿಳಿವಿನೊಂದಿಗೆ ಮರಳುತ್ತಾಳೆ. ಸಾವು ಬದುಕಿನ ಸಮಸ್ಯೆಯನ್ನು ಚಿತ್ರಿಸುವ ಈ ಪುಟ್ಟ ನಾಟಕ ತನ್ನ ಸರಳತೆ, ಸಂಕ್ಷಿಪ್ತತೆಗಳಿಂದ ಗಮನಸೆಳೆಯುತ್ತದೆ. ಸಿದ್ಧಾರ್ಥ ಬುದ್ಧನಾಗಲು ಕಾರಣವಾಗುವ ಸಂದರ್ಭವನ್ನು ಕುರಿತು ಈಗಾಗಲೇ ಇರುವ ವಿಚಾರಗಳನ್ನು ಆಧರಿಸಿ ರಚನೆಯಾದ ಮತ್ತೊಂದು ನಾಟಕ ಕಾರಂತರ 'ಬುದ್ಧೋದಯ'. ಸಿದ್ಧಾರ್ಥನ ವೈರಾಗ್ಯೋದಯಕ್ಕೆ ರೋಗ, ಮುಪ್ಪು, ಸಾವು ಈ ದೃಶ್ಯಗಳನ್ನು ಆತ ನೋಡಿದ್ದೆ ಕಾರಣ ಎಂಬುದು ಇತಿಹಾಸ ಮತ್ತು ಸಾಹಿತ್ಯ ಕೃತಿಗಳಿಂದ ತಿಳಿದುಬರುವ ಅಂಶಗಳಾಗಿವೆ. ಆದರೆ ಕಾರಂತರ ಪ್ರಕಾರ ಈ ದೃಶ್ಯಗಳು ಗೌತಮನಲ್ಲಿ ಈಗಾಗಲೇ ಮೊಳೆತಿದ್ದ ವೈರಾಗ್ಯವನ್ನು ಉದ್ದೀಪನಗೊಳಿಸುತ್ತವೆ. ಈ ದೃಶ್ಯಗಳನ್ನು ನೋಡುವ ಮುನ್ನ ಸುಖ ಸಂಸಾರದ ಸಕಲ ಭೋಗಗಳನ್ನು ಅನುಭವಿಸುತ್ತ ಪ್ರಾಪಂಚಿಕ ಮಾಯೆಯ ಬಂಧನದಲ್ಲಿದ್ದ ಸಿದ್ಧಾರ್ಥನಿಗೆ ರಾಹುಲನ 'ಬಯಲಾ ದಾಟುವ, ಜಗವಾ ಸುತ್ತುವ'

ಎಂಬ ಮಾತುಗಳು ವೈರಾಗ್ಯದ ಅಂಕುರಾರ್ಪಣೆಗೆ ಕಾರಣವಾಗುತ್ತದೆ. ಇದೊಂದು ವಿನೂತನ ಕಲ್ಪನೆಯಾಗಿದೆ. ರಾಹುಲನ ಮಾತಿನಿಂದ ಗೌತಮನಲ್ಲಿ ಹೊಸದೊಂದು ಸೆಳೆತ ಆರಂಭವಾಗುತ್ತದೆ. ಎಲ್ಲವೂ ಇದ್ದು ಏನೂ ಇಲ್ಲವೆಂಬ ಸ್ಥಿತಿಯಲ್ಲಿದ್ದ ಆತ ಆಪ್ತನಾದ ಚೆನ್ನನ ಬಳಿ ತನ್ನ ಮನದಾಳದ ನೋವನ್ನು ವ್ಯಕ್ತಪಡಿಸುತ್ತಾನೆ.

ಈ ಸೊಗದ ಸೌಧದ ಆಚೆ

ಜಗವ ತುಳಿವ ಬಯಕೆ

ಈ ಸೆರೆಯ ದಾಟಬಯಸುವೆನು

ಎಂಬ ಗೌತಮನ ಇಂಗಿತವನ್ನು ತಿಳಿದ ಚೆನ್ನ ಅದನ್ನು ಶುದ್ಧೋದನನಿಗೆ ತಿಳಿಸುತ್ತಾನೆ. 'ಹರಿವ ಅಬ್ಬಿಯ ತಡೆದು ನಿಲ್ಲಿಸಲುಂಟೆ?' ಎಂದು ಗೌತಮನ ನಗರ ಸಂಚಾರಕ್ಕೆ ದೊರೆಯ ಒಪ್ಪಿಗೆಯನ್ನು ಪಡೆಯುತ್ತಾನೆ.

ನಗರ ಸಂಚಾರದ ಸಮಯದಲ್ಲಿ ಗೌತಮ ಸಂದೇಹಗಳನ್ನು ನಿರ್ಲಿಪ್ತವಾಗಿ ನಿವಾರಿಸುವ ಚೆನ್ನ ಸಿದ್ಧಾರ್ಥನಲ್ಲಿ ಮೊಳೆತಿದ್ದ ವೈರಾಗ್ಯದ ಸಸಿಗೆ ನೀರೆರೆಯುತ್ತಾನೆ. ಚೆನ್ನನಾಡುವ ಮಾತುಗಳಿಂದ ವಸ್ತು ಸ್ಥಿತಿಯನ್ನು ಅರಿತುಕೊಂಡ ಸಿದ್ಧಾರ್ಥ ಪೂರ್ಣವಾಗಿ ವೈರಾಗ್ಯಪರವಶನಾಗುತ್ತಾನೆ. ಸಿದ್ಧಾರ್ಥ ಬುದ್ಧನಾಗುವ ಹಂತದಲ್ಲಿ ಚೆನ್ನನ ಪಾತ್ರದ ಮಹತ್ತನ್ನು ನಾಟಕದಲ್ಲಿ ವಿಶೇಷವಾಗಿ ಗ್ರಹಿಸಲಾಗಿದೆ. ಗೌತಮನ ಒಳಗಣ್ಣನ್ನು ತೆರೆಸಿ ಆತನ ಗೃಹ ತ್ಯಾಗಕ್ಕೆ ನೆರವಾಗುವ ಚೆನ್ನನ ಪಾತ್ರಕ್ಕೆ ನಾಟಕದಲ್ಲಿ ವಿಶೇಷ ಸ್ಥಾನವಿದೆ. ಮುಂದೆ ಗೃಹ ತ್ಯಾಗ ಮಾಡಿದ ಸಿದ್ಧಾರ್ಥನಿಗೆ ದಿವ್ಯ ಜ್ಞಾನ ಪ್ರಾಪ್ತವಾಗುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಕುವೆಂಪು, ಬಿ. ಪುಟ್ಟಸ್ವಾಮಯ್ಯ ಮತ್ತು ಮಾಸ್ತಿಯವರು ಬುದ್ಧನ ಜೀವನಕ್ಕೆ ನೇರವಾಗಿ ಸಂಬಂಧಿಸಿದ ವ್ಯಕ್ತಿ ಮತ್ತು ಘಟನೆಗಳನ್ನು ಕುರಿತು ಕೃತಿ ರಚಿಸಿದರೆ ಪ್ರಭುಶಂಕರ ಅವರು ಸಿದ್ಧಾರ್ಥ ಬುದ್ಧನಾದ ನಂತರ ಅವನ ಪ್ರಭಾವಲಯಕ್ಕೆ ಒಳಗಾದ ವ್ಯಕ್ತಿಗಳನ್ನು ಕುರಿತು ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ವಸ್ತುವಿನ ದೃಷ್ಟಿಯಿಂದ ಹಿಂದಿನ ನಾಟಕಗಳಿಗಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿರುವ ಈ ನಾಟಕಗಳು ಒಂದು ವಿಶಿಷ್ಟ ಪ್ರಯತ್ನವಾಗಿದೆ.

ಮೊದಲಿಗೆ ಬುದ್ಧ ನಾಟಕ ಚಕ್ರದಲ್ಲಿನ ನಾಲ್ಕು ನಾಟಕಗಳಲ್ಲಿ ಮೊದಲೆರಡು ನಾಟಕಗಳಾದ 'ಅಂಗುಲೀಮಾಲ', ಮತ್ತು 'ಆಮ್ರಪಾಲಿ' ನಾಟಕಗಳನ್ನು ಕುರಿತು

ವಿಶ್ಲೇಷಿಸಬಹುದು. ಅಂಗುಲೀಮಾಲ ಎಂಬ ಹೆಸರೇ ಕ್ರೂರತೆಗೆ ಸಂಕೇತದಂತಿದೆ. ಅಂಗುಲೀಮಾಲನಾಗಿದ್ದ ಈತ ಬುದ್ಧನ ಪ್ರಭಾವಲಯಕ್ಕೆ ಒಳಗಾಗಿ ಬುದ್ಧ ಕರುಣಾಮಾಲನಾದ ಹೃದಯಸ್ಪರ್ಶಿ ಕಥಾನಕವನ್ನೊಳಗೊಂಡದ್ದು 'ಅಂಗುಲೀಮಾಲ' ಕೃತಿ. ಹಿಂಸೆ ಮತ್ತು ಕ್ರೌರ್ಯದ ಪ್ರತಿರೂಪದಂತಿದ್ದ ಅಂಗುಲೀಮಾಲನ ಹೆಸರನ್ನು ಕೇಳಿಯೇ ಎದೆಯೊಡೆದು ಸಾಯುವಂತಹ ಜನರಿದ್ದರು. ಶಿಷ್ಯರಿಂದ ಅವನ ಮತ್ತು ಅವನ ಕ್ರೂರತೆಯ ಬಗೆಗೆ ತಿಳಿದುಕೊಂಡ ಬುದ್ಧ ತಾಯಿ ಹಸು ಕಾಡಿನಲ್ಲಿ ಹಸಿರು ಮೇಯಲು ಹೋಗಿ ಸಂಜೆಯಾದರೂ ಇನ್ನೂ ಹಿಂದಕ್ಕೆ ಬರದಿರುವ ಎಳೆಗರುವನರಸುತ್ತ ನಡೆವಂತೆ ಆತನ ಬಳಿಗೆ ನಿರಾಯುಧನಾಗಿ ಹೋಗಿ ಕರುಣೆಯ ಸಂದೇಶವನ್ನು ಅವನ ಮನದಲ್ಲಿ ಬಿತ್ತುತ್ತಾನೆ. ಹಿಂಸೆಯ ಸಾಮ್ರಾಜ್ಯದಲ್ಲಿ ಮೆರೆಯುತ್ತಿರುವ ಅಂಗುಲೀಮಾಲನಿಗೆ ಎಲ್ಲವನ್ನು ಮೀರಿದ ರಾಜ್ಯದ ಆಸೆ ತೋರುವ ಬುದ್ಧ ಅವನನ್ನು ಅಧ್ಯಾತ್ಮ ಲೋಕದಕಡೆಗೆ ಸೆಳೆಯುತ್ತಾನೆ. ಒಂದೆಡೆ ಲೋಕದ ಕಷ್ಟಕ್ಕೆ ಪರಿಹಾರ ನೀಡಲು ಹೊರಟ ಪ್ರೇಮಮೂರ್ತಿ ಬುದ್ಧ. ಮತ್ತೊಂದೆಡೆ ಲೋಕದ ಜನರ ಕಣ್ಣೀರಿಗೆ ಕಾರಣನಾದ ಕ್ರೂರ ಅಂಗುಲೀಮಾಲ ಪರಸ್ಪರ ವೈರುಧ್ಯದಿಂದ ಕೂಡಿದ ಈ ಎರಡು ಪಾತ್ರಗಳ ಚಿತ್ರಣದಲ್ಲಿ ಸನ್ನಿವೇಶ ನಿರೂಪಣೆಯಲ್ಲಿ ಪರಿಣತಿ ಸ್ಪಷ್ಟವಾಗುತ್ತದೆ.

'ನಿನ್ನ ಕರುಣಾಗಂಗೆ ಕಣ್ಣಿನಿಂ ಧುಮುಕುತ್ತಿರೆ ಮುಡಿಯೊಡ್ಡಿ ತಡೆವ ಬಲವನಿತಿಲ್ಲವೈ ತಂದೆ' ಎಂದು ಬುದ್ಧನ ಸರಳ ಕಾರುಣ್ಯಕ್ಕೆ ವಶವಾದ ಅಂಗುಲೀಮಾಲ ಪರಿವರ್ತನೆಯ ಕಡೆಗೆ ತುಡಿಯುವುದು ನಾಟಕದ ಬಹುಮುಖ್ಯ ಹಂತ. ಇದಕ್ಕೆ ಪೂರಕವಾಗಿ ಉಳಿದ ಘಟನೆಗಳನ್ನು ನಿರೂಪಿಸಲಾಗಿದೆ. ಅಂಗುಲೀಮಾಲನ ಸಾವಿನಿಂದ ನಾಟಕ ಅಂತ್ಯವಾಗುತ್ತದೆ, ಮಾನವತಾಮೂರ್ತಿಯ ಸ್ಪರ್ಶದಿಂದ, ಸಾಮೀಪ್ಯದಿಂದ ರೂಕ್ಷ ನಡವಳಿಕೆಯ ಅಂಗುಲೀಮಾಲ ಬದಲಾದುದು ಬುದ್ಧನ ವ್ಯಕ್ತಿತ್ವದ ಔನ್ನತ್ಯಕ್ಕೆ ನಿದರ್ಶನವಾಗಿದೆ. ಆದರೆ ಕರುಣಾಮೂರ್ತಿಯಾದ ಬುದ್ಧ ಅಂಗುಲೀಮಾಲನ ಸಾವಿನ ಸಂದರ್ಭದಲ್ಲಿ ನಡೆದುಕೊಳ್ಳುವ ರೀತಿ ಅಸಹಜ ಎನಿಸುತ್ತದೆ. ಬಹುಶಃ ಸಾವಿನ ಅನಿವಾರ್ಯತೆಯನ್ನು ತಿಳಿದಿದ್ದ ಸ್ಥಿತ ಪ್ರಜ್ಞನ ನಡವಳಿಗೆ ಇದಾಗಿರಬಹುದು.

'ಅಂಗುಲೀಮಾಲ' ನಾಟಕದಲ್ಲಿ ಅಂಗುಲೀಮಾಲ ಕ್ರೂರತೆಯಿಂದ ಮಾನವತೆಯ ಕಡೆಗೆ ಸಾಗುವ ಚಿತ್ರವಿದ್ದರೆ 'ಆಮ್ರಪಾಲಿ' ಯಲ್ಲಿ ಭೋಗಜೀವನದಿಂದ ವಿರಕ್ತಿಯ ಕಡೆಗೆ ಸಾಗುವ ವೇಶ್ಯಾ ಸ್ತ್ರೀಯೊಬ್ಬಳ ಚಿತ್ರಣವಿದೆ. ನಾಟಕ ಏಕ ಕಾಲದಲ್ಲಿ ಭೋಗದ ತುತ್ತತುದಿಯಲ್ಲಿದ್ದವರು

ಅದನ್ನು ನಿರಾಕರಿಸಿ, ವೈರಾಗ್ಯ ಪರವಶವಾಗುವ ಮತ್ತು ವಿರಕ್ತನಾಗಿದ್ದವನು ಭೋಗದ ಆಕಾಂಕ್ಷೆಗೆ ಒಳಗಾಗುವ ವಿಭಿನ್ನ ಪರಿಸ್ಥಿತಿಗಳೆರಡನ್ನು ಕಟ್ಟಿಕೊಡುತ್ತದೆ. ಹಾಗೆಯೇ ನಾಟಕ ಆಮ್ರಪಾಲಿಯ ಜೀವನ, ಆಕೆಯನ್ನು ವೇಶ್ಯೆಯಾಗಿಸಿದ ಸಾಮಾಜಿಕ ಪರಿಸರ, ಪತಿತೆಯಾದವಳಿಗೂ ಧರ್ಮ ಬೋಧಿಸಿ ಆಕೆಯನ್ನು ಉದ್ಧರಿಸುವ ಮಹಾವ್ಯಕ್ತಿಯನ್ನು ಕುರಿತದ್ದಾಗಿದೆ. ನಾಟಕದ ಆರಂಭದಲ್ಲಿಯೇ ಕಾಣಿಸಿಕೊಳ್ಳುವ ಸುವರ್ಣದತ್ತ (ಸುಭಿಕ್ಷು) ನ ಪಾತ್ರ ಸನ್ಯಾಸವೆಂಬುದು ತೋರಿಕೆಗಾಗಿ ಅಲ್ಲ. ಅದಕ್ಕಾಗಿ ಮನಸ್ಸು ಹದಗೊಳ್ಳಬೇಕೆಂದು ತಿಳಿಸಿದರೆ ಆಮ್ರಪಾಲಿಯ ಪಾತ್ರ ಸಮಾಜದಲ್ಲಿ ಜನರ ವೃತ್ತಿಗಳು ಅವರ ಆಯ್ಕೆಯದ್ದಾಗಿರುವುದಿಲ್ಲ, ಕೆಲವೊಮ್ಮೆ ಅದು ಅನಿವಾರ್ಯವಾಗಿರುತ್ತದೆ ಎಂಬ ವಿಷಾದದ ಸಂಗತಿಯನ್ನು ಪ್ರಕಟಪಡಿಸುತ್ತದೆ. ವೇಶ್ಯೆಯಾದ ಆಮ್ರಪಾಲಿ ಬುದ್ಧ ಬೋಧನೆಗಳಿಂದ ಪ್ರಭಾವಿತವಾಗಿ ಉಪದೇಶ ಪಡೆಯುತ್ತಾಳೆ. ಬುದ್ದನನ್ನು ತನ್ನ ಮನೆಗೆ ಭೋಜನಕ್ಕಾಗಿ ಆಹ್ವಾನಿಸುತ್ತಾಳೆ. ಆಮ್ರಪಾಲಿ ಮತ್ತು ಭಿಕ್ಷು ಸಂಘದ ನಡುವಿನ ಈ ಸಂಬಂಧವನ್ನು ಸಮಾಜ ಗ್ರಹಿಸುವ ರೀತಿಯ ಚಿತ್ರಣವೂ ಇಲ್ಲಿದೆ. ಬದಲಾವಣೆಯನ್ನು ಬಯಸದ ನಿಂತ ನೀರಿನಂತಿರುವ ಸಮಾಜದ ಜನರ ಚಿತ್ರವಿದು. ಆಮ್ರಪಾಲಿ ಮನೆಗೆ ಬಂದ ಬುದ್ಧ ನಿಂದ ಸನ್ಯಾಸ ದೀಕ್ಷೆಯನ್ನು ಬಯಸಿದಾಗ ಬುದ್ಧ ನಿರಾಕರಿಸುತ್ತಾನೆ. ಹೆಣ್ಣಿಗೆ ಸನ್ಯಾಸತ್ವ ಸಲ್ಲದು ಎಂಬ ಕಾರಣ ಮತ್ತು ಬಿಕ್ಷು ಸಂಘದ ಚಿತ್ರ ಸ್ಥೈರ್ಯದ ಕಾರಣವನ್ನು ನೀಡುತ್ತಾನೆ.

ಬುದ್ಧನ ಪ್ರಭಾವವಕ್ಕೊಳಗಾದ ಇಬ್ಬರು ವ್ಯಕ್ತಿಗಳನ್ನು ಕುರಿತ ಈ ನಾಟಕಗಳು ಬುದ್ಧನ ವ್ಯಕ್ತಿತ್ವ ಮತ್ತು ಉಪದೇಶಗಳನ್ನು ವಿಶ್ಲೇಷಿಸುತ್ತದೆ. "ಹಿಂಸೆ ಮತ್ತು ಕ್ರೌರ್ಯವೇ ರೂಪುಗೊಂಡಂತಿದ್ದ ಅಂಗುಲೀಮಾಲ ಸೌಂದರ್ಯವೇ ಸಾಕಾರಗೊಂಡಂತಿದ್ದ ಆಮ್ರಪಾಲಿಯರು ಮಾನವನ ಭೌತಿಕ ಶಕ್ತಿ ಮತ್ತು ಇಂದ್ರಿಯಾಕರ್ಷಣೆಗಳನ್ನು ಪ್ರತಿನಿಧಿಸಿದರೆ ಬುದ್ಧನು ಅವೆರಡನ್ನು ನಿಯಂತ್ರಿಸುವ ಆತ್ಮ ಶಕ್ತಿಯಾಗಿ ಅವರ ಬದುಕನ್ನು ಪ್ರವೇಶಿಸುತ್ತಾನೆ."[೪]

ಬುದ್ಧನ ಸತ್ಯ ಸಾಕ್ಷಾತ್ಕಾರದ ಹಾದಿಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೆರವು ನೀಡಿದವರಲ್ಲಿ ಸುಜಾತೆಯೂ ಒಬ್ಬಳು, ಬುದ್ಧೋದಯದ ಮುನ್ಸೂಚನೆಯನ್ನು ಪಡೆದ ಅಪರೂಪದ ವ್ಯಕ್ತಿ ಆಕೆ. ದೇಹದಂಡನೆಯಿಂದ ಅಮೃತತ್ವ ಪಡೆಯಲು ಹೊರಟ ಸಿದ್ಧಾರ್ಥ ಹಸಿವಿನಿಂದ ಕೃಶನಾಗಿದ್ದಾಗ ಆತನಿಗೆ ಪಾಯಸ ನೀಡಿ ಜೀವದಾನ ಮಾಡಿದವಳು ಸುಜಾತೆ.

೪.ಆಧುನಿಕ ಕನ್ನಡ ನಾಟಕ. ಕೆ. ಮರುಳ ಸಿದ್ದಪ್ಪ

ಐದು ದೃಶ್ಯಗಳ ಈ ನಾಟಕದಲ್ಲಿ ಸುಜಾತೆಯದು ಮುಖ್ಯ ಪಾತ್ರ. ಮಕ್ಕಳಿಲ್ಲದ ಆಕೆ ಸಂತಾನ ಪ್ರಾಪ್ತಿಗಾಗಿ ವೃಕ್ಷರಾಜನಿಗೆ ಹರಕೆ ಹೊತ್ತಿರುತ್ತಾಳೆ. ಆ ಹರಕೆಯಲ್ಲಿ ಸ್ವಾರ್ಥದೊಂದಿಗೆ ಲೋಕ ಕಲ್ಯಾಣದ ಆಕಾಂಕ್ಷೆಯೂ ಇರುವುದು ಅವಳ ಮಾತಿನಲ್ಲಿ ಸ್ಪಷ್ಟವಾಗುತ್ತದೆ. 'ಬೆಳದಿಂಗಳನ್ನು ಕರೆಯಲೆಂದೇ ಈ ವ್ರತ. ನಿಜ ಆದರೆ ಮನೆಗೆ ಮಾತ್ರ ಅಲ್ಲ, ಮನಸ್ಸಿಗೆ ಮಾತ್ರ ಅಲ್ಲ, ಇಡೀ ಜಗತ್ತಿಗೆ.' ಮಹಾಪುರುಷನ ಅವತಾರಕ್ಕಾಗಿ ತುಡಿಯುವ ಅವಳ ಚೇತನ, ಕನಸನ್ನು ವಿವರಿಸುವ ಅವಳ ಕಾತರ ಮನೋಜ್ಞವಾಗಿದೆ.

ಎರಡನೇ ದೃಶ್ಯದಲ್ಲಿ ತಪಸ್ಸು ಮಾಡುವವರ ಮನಸ್ಥಿತಿ, ಆಹಾರ ಕ್ರಮದ ವಿವರಣೆ ಇದೆ. ಹಾಗೆಯೇ ಗೌತಮನ ಕನಸಿನ ವ್ಯಾಖ್ಯಾನವೂ ಈ ದೃಶ್ಯದಲ್ಲಿದೆ. ಗೌತಮನ ಪ್ರಭಾವ ಇಡೀ ಜಗತ್ತಿಗೆ ವ್ಯಾಪಿಸಿ, ಆತನಿಗೆ ಬುದ್ಧತ್ವ ಪ್ರಾಪ್ತವಾಗಿ ಅಷ್ಟಾಂಗಮಾರ್ಗಗಳನ್ನು ಬೋಧಿಸುತ್ತಾನೆ. ಗೃಹಸ್ಥರು ಧರ್ಮ ಶ್ರವಣಕ್ಕೆ ಆಗಮಿಸುತ್ತಾರೆ. ಮುಂದೆ ವರ್ಣಾಶ್ರಮ ಪದ್ಧತಿ ನಶಿಸಿ ವರ್ಣಭೇದವಿಲ್ಲದ ಸ್ಥಿತಿ ನಿರ್ಮಾಣವಾಗುವುದನ್ನು ಕನಸಿನ ಮೂಲಕ ವಿವರಿಸಲಾಗಿದೆ. ನಾಟಕಕಾರರು ಕನಸಿನ ತಂತ್ರವನ್ನು ಸೂಕ್ತವಾಗಿ ಬಳಸಿಕೊಂಡಿಸಿದ್ದಾರೆ. ಒಟ್ಟಾರೆಯಾಗಿ ಸಿದ್ಧಾರ್ಥ ಬೋಧಿಲಾಭ ಹೊಂದುವಲ್ಲಿ ಸಾಮಾನ್ಯ ಹೆಣ್ಣಾದ ಸುಜಾತೆಯ ಪಾತ್ರವಿರುವುದನ್ನು ಮತ್ತು ಆಕೆಯ ಉದಾತ್ತ ಗುಣವನ್ನು ಚಿತ್ರಿಸುವುದು ನಾಟಕದ ಉದ್ದೇಶವಾಗಿದೆ.

ಪ್ರಭುಶಂಕರರ ಮತ್ತೊಂದು ನಾಟಕವಾದ 'ಗಾಳಿ ಎಂಬ ಕುದುರೆ ಏರಿ' ಗೃಹತ್ಯಾಗದ ವಿಚಾರವನ್ನು ಸಿದ್ಧಾರ್ಥ ಮತ್ತು ಅಗ್ನಿಮಿತ್ರ ಎರಡು ಪಾತ್ರಗಳ ಹಿನ್ನೆಲೆಯಲ್ಲಿ ನಿರೂಪಿಸುವುದಾಗಿದೆ. ಆಮ್ರಪಾಲಿ ನಾಟಕದಂತೆ ಇಲ್ಲಿಯೂ ವೈರಾಗ್ಯದಿಂದ ಭೋಗದಕಡೆಗೆ, ಭೋಗದಿಂದ ವೈರಾಗ್ಯದ ಕಡೆಗೆ ಸಾಗುವ ಎರಡು ಪಾತ್ರಗಳಿವೆ. ಅಗ್ನಿಮಿತ್ರನ ಪಾತ್ರ ಸೃಷ್ಟಿ ನಾಟಕಕಾರರ ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ. ಇಲ್ಲಿಯೂ ಗೌತಮನು ರೋಗ, ಮುಪ್ಪು, ಸಾವು ಭಿಕ್ಷುಕರನ್ನು ಕಂಡು ಹಸಿವಿನ ತೀವ್ರತೆಯನ್ನು, ಸಾವಿನಾಚೆಗಿನ ಸತ್ಯವನ್ನು ತಿಳಿಯುವ ಮನಸ್ಸು ಮಾಡುತ್ತಾನೆ.

ಸಿದ್ಧಾರ್ಥ ಹೊರಟು ಹೋದರೆ ತನ್ನ ಬಾಳು ಶೂನ್ಯವಾಗುವುದೆಂಬ ಅರಿವಿದ್ದರೂ ಆತನ ಗೃಹತ್ಯಾಗಕ್ಕೆ ಒಪ್ಪಿಗೆ ನೀಡುವ ಯಶೋಧರೆಯ ಪಾತ್ರ ಅವಳ ಏರಿರುವ ಎತ್ತರವನ್ನು, ಅವಳ ವಿಚಾರ ಪ್ರವೃತ್ತಿಯನ್ನು ಸೂಚಿಸುತ್ತದೆ. ಹಾಗೆಯೇ ಈಗಾಗಲೇ ಪತಿಯಿಂದ ದೂರವಿರುವ

ಅಗ್ನಿಮಿತ್ರನ ಪತ್ನಿ ರಮಾ ತನ್ನ ದಿಟ್ಟತನದಿಂದ ಮಕ್ಕಳಿಗೆ ಒಳ್ಳೆಯ ಭವಿಷ್ಯ ನೀಡಿರುವ ಚಿತ್ರಣವಿದೆ. ಸಿದ್ಧಾರ್ಥನನ್ನು 'ಹೋಗಿಬನ್ನಿ' ಎಂದು ಕಳುಹಿಸಿಕೊಡುವ ಯಶೋಧರೆ 'ಒಳಗೆ ಬನ್ನಿ' ಎಂದು ಕರೆದುಕೊಳ್ಳುವ ರಮಾ ಎರಡು ಪಾತ್ರಗಳು ಉದಾತ್ತ ಹೆಣ್ಣು ಮಕ್ಕಳ ಕ್ಷಮಾಗುಣವನ್ನು ತ್ಯಾಗವನ್ನು ಬಿಂಬಿಸುತ್ತದೆ. ಹೀಗೆ ನಾಟಕ ಸತ್ಯಾನ್ವೇಷಣೆಯಲ್ಲಿ ತೊಡಗಿದ ಇಬ್ಬರು ವ್ಯಕ್ತಿಗಳ ಮಾನಸಿಕ ಹೊಯ್ದಾಟವನ್ನು ಬಿಂಬಿಸುತ್ತದೆ.

ಬುದ್ಧನನ್ನು ಕುರಿತ ಈ ಒಂಬತ್ತು ನಾಟಕಗಳಿಗಿಂತ ತನ್ನ ಕಥಾವಸ್ತುವಿನಿಂದ ಸಂಪೂರ್ಣ ಭಿನ್ನವಾದದು ಮನಜ ಅವರ 'ಜಲ'. ಸಿದ್ಧಾರ್ಥನ ಗೃಹತ್ಯಾಗಕ್ಕೆ ಮುಪ್ಪು, ರೋಗ, ಸಾವು ಈ ಕಾರಣಗಳಲ್ಲದೆ ಶಾಕ್ಯರ ನೀತಿ ಸಂಹಿತೆಯ ದುರುಪಯೋಗವೇ ಕಾರಣ ಎಂಬ ವಿಚಾರದ ಮೇಲೆ ಬೆಳಕು ಚೆಲ್ಲುತ್ತದೆ. ಅಂಬೇಡ್ಕರ್‌ರವರು ಹೇಳುವ ಜಲವಿವಾದದ ಅಂಶವನ್ನು ಇಟ್ಟುಕೊಂಡು ಈ ನಾಟಕವನ್ನು ರಚಿಸಲಾಗಿದೆ.

ನಾಟಕದ ಆರಂಭದಲ್ಲಿ ಗೌತಮನಿಗೆ ಶಾಕ್ಯ ಸಂಘದ ಸದಸ್ಯತ್ವ ನೀಡುವ ವಿಚಾರದಲಿ ಅಪಸ್ವರವೇಳುವುದನ್ನು ಕಾಣಬಹುದು. ಹಾಗೆಯೇ ದೇಶ ರಕ್ಷಣೆಗೆ ಕ್ಷತ್ರಿಯನಿಗೆ ಅಗತ್ಯಬೇಕಾಗಿರುವ ತೋಳ್ಬಲವು ಗೌತಮನಿಗೆ ಇಲ್ಲ ಎಂಬ ವಿಚಾರವನ್ನು ದೇವದತ್ತ ಪ್ರಸ್ತಾಪಿಸುತ್ತಾನೆ. ಈ ಎಲ್ಲಾ ವಿರೋಧದ ನಡುವೆ ಶಾಕ್ಯರ ನೀತಿ ಸಂಹಿತೆ ಪ್ರಕಾರ ಜೀವ ರಕ್ಷಣೆ, ಜಲ ರಕ್ಷಣೆ ಹಾಗೂ ದೇಶರಕ್ಷಣೆಗಾಗಿ ಹೋರಾಡುವ ಪಣತೊಟ್ಟ ಗೌತಮ ಸದಸ್ಯತ್ವದ ಪ್ರತಿಜ್ಞಾ ವಿಧಿ ಸ್ವೀಕರಿಸುತ್ತಾನೆ.

ಎರಡನೇ ಹಂತದಲ್ಲಿ ಯಶೋಧರಾ ಮತ್ತು ಗೌತಮನ ಸರಸದಾಂಪತ್ಯವನ್ನು, ಸಿದ್ಧಾರ್ಥನ ಸಾಧನೆಯ ಹಿಂದಿನ ಪ್ರೇರಕಶಕ್ತಿಯಾಗಿರುವ ಅವಳ ವ್ಯಕ್ತಿತ್ವವನ್ನು ಕಾಣಬಹುದು. ಹಾಗೆಯೇ ಗೌತಮನ ಜನಾನುರಾಗವನ್ನು, ಪರಂಪರಾಗತ ವ್ಯವಸ್ಥೆಯ ಬಗೆಗೆ ಆತನಿಗಿರುವ ನಿಲುವನ್ನು ಕೂಡ ಇಲ್ಲಿಯೇ ತಿಳಿಯಬಹುದು. ಮುಂದೆ ಜೀವ ಪರವಾದ ಗೌತಮನ ಕಾಳಜಿಯನ್ನು ಗೌತಮನ ಮೇಲೆ ದೇವದತ್ತನ ದ್ವೇಷ ಹೆಚ್ಚಾಗುವ ಪಕ್ಷಿಯ ಜೀವದಾನದ ಸಂದರ್ಭವನ್ನು ಚಿತ್ರಿಸಲಾಗಿದೆ. 'ಜೀವರಕ್ಷಣೆ ಮಾನವನ ಪ್ರಥಮ ಕರ್ತವ್ಯ ಎಂಬ ದಯಾ ಮೂಲವಾದ ತತ್ವ ರೂಪುಗೊಂಡಿದ್ದು ಈ ಸಂದರ್ಭದಲ್ಲಿಯೇ'.

ಮುಂದೆ ಕೋಲಿಯಾ ದೇಶದವರು ರೋಹಿಣಿ ನದಿಯ ನೀರಿನ ಬಳಕೆಯ ವಿಚಾರದಲ್ಲಿ ಶಾಕ್ಯರ ಮೇಲೆ ಯುದ್ಧಸಾರುವ ತಂತ್ರ ರೂಪಿಸಿರುವ ವಿಚಾರವನ್ನು ಪರೋಕ್ಷವಾಗಿ ಇದಕ್ಕೆ ಶಾಕ್ಯರ (ದೇವದತ್ತನ) ಬೆಂಬಲವಿರುವುದನ್ನು ಕಾಣಬಹುದು. ನೆರೆಯ ಕೋಲಿಯಾ ದೇಶದವರೊಂದಿಗೆ ಯುದ್ಧಕ್ಕೆ ಬದಲು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಬೇಕೆಂಬ ಗೌತಮ ಸಲಹೆಯಿಂದ ಆತನಿಗೆ ರಾಜದ್ರೋಹದ ಆಪಾದನೆಯನ್ನು ಹೊರಿಸಿ, ಆತ ಯುವರಾಜ ಪದವಿಯನ್ನು ತ್ಯಜಿಸಿ ಸನ್ಯಾಸ ಸ್ವೀಕರಿಸುವಂತೆ ಮಾಡಲಾಗುತ್ತದೆ.

ಈ ಎಲ್ಲಾ ಕೃತ್ಯಗಳ ರಾಜಕೀಯ ಕುತಂತ್ರವನ್ನು ತನಗೆ ವಿರುದ್ಧವಾಗಿದ್ದ ಪರಿಸ್ಥಿತಿಯಲ್ಲಿ ಗೌತಮ ತೆಗೆದುಕೊಳ್ಳುವ ನಿರ್ಣಯ ಲೋಕಕ್ಕೆ ಬುದ್ಧ ನಂತಹ ಮಹಾನ್ ವ್ಯಕ್ತಿಯನ್ನು ನೀಡಿದುದು ಗಮನಾರ್ಹ. ಇಡೀ ನಾಟಕ ರಾಜಕೀಯ ತಂತ್ರ ನಿರೂಪಣೆಗೆ ಪ್ರಾಶಸ್ತ್ಯ ನೀಡಿದ್ದರೂ ಆ ಎಲ್ಲಕ್ಕೂ ನಾಟಕದ ಆರಂಭದಲ್ಲಿಯೇ ಪುರಾಣದ ಪರಿವೇಶವನ್ನು ನಿರ್ಮಿಸಲಾಗಿದೆ.

ಒಟ್ಟಾರೆಯಾಗಿ ಕಥಾವಸ್ತುವಿನ ವಿಭಿನ್ನತೆಯಲ್ಲಿ ಲೇಖಕರ ಸ್ವಂತಿಕೆಯನ್ನು, ವಿಭಿನ್ನ ದೃಷ್ಟಿಕೋನವನ್ನು, ಸಿದ್ಧಾರ್ಥನ ಗೃಹತ್ಯಾಗಕ್ಕೆ ಹೊಸದೊಂದು ಆಯಾಮವನ್ನು ಒದಗಿಸಿಕೊಡುವ ಅವರ ವೈಶಿಷ್ಟ್ಯವನ್ನು ಇಲ್ಲಿ ಗುರುತಿಸಬಹುದಾಗಿದೆ.

ಈ ಎಲ್ಲಾ ನಾಟಕಕಾರರು ಬುದ್ಧನನ್ನು ಕುರಿತ ವಸ್ತುವನ್ನು ಆಯ್ಕೆಮಾಡಿಕೊಂಡಿದ್ದರೂ. ನಿರೂಪಣೆಯಲ್ಲಿ, ಪಾತ್ರ ಸೃಷ್ಟಿಯಲ್ಲಿ, ಸನ್ನಿವೇಶ ನಿರ್ಮಾಣದಲ್ಲಿ ಎಲ್ಲರಲ್ಲಿಯೂ ಭಿನ್ನತೆಗಳಿರುದನ್ನು ಸಮಕಾಲೀನ ಸಂದರ್ಭಕ್ಕೆ ಹಳೆಯ ವಸ್ತುವನ್ನು ಒಗ್ಗಿಸಿಕೊಂಡಿರುವ ಈ ಕೃತಿಗಳಲ್ಲಿರುವ ವಿಶೇಷತೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

~*~*~*~*~

ಅಧ್ಯಾಯ–೫

ತೌಲನಿಕ ವಿವೇಚನೆ

ಯಾವುದೇ ಸಾಹಿತಿ ಸೃಜನಶೀಲ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಮೊದಲ ಹಂತ ಕಥಾ ವಸ್ತುವಿನ ಆಯ್ಕೆಯಾಗಿರುತ್ತದೆ. ಕೃತಿಯ ವಸ್ತು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಯಾವುದೇ ಇರಲಿ ಅದನ್ನು ಆಯ್ಕೆ ಮಾಡಿಕೊಳ್ಳಲು ಲೇಖಕನಿಗೆ ಒಂದು ಗುರಿ ಮತ್ತು ಉದ್ದೇಶವಿರುವ ಹಾಗೆ ಆಯ್ಕೆ ಮಾಡಿಕೊಂಡ ನಂತರ ಅದನ್ನು ಉತ್ತಮ ಕೃತಿಯಾಗಿಸುವ ಜವಾಬ್ದಾರಿಯೂ ಇರುತ್ತದೆ. ಅದರಲ್ಲಿಯೂ ತಾನು ಆಯ್ಕೆ ಮಾಡಿಕೊಂಡ ವಸ್ತುವನ್ನುಳ್ಳ ಕೃತಿಗಳು ಈಗಾಗಲೇ ಪ್ರಕಟವಾಗಿದ್ದರೆ ಅವನ ಜವಾಬ್ದಾರಿ ಇನ್ನೂ ಹೆಚ್ಚಿರುತ್ತದೆ. ತನ್ನ ಹಿಂದಿನ ಕೃತಿಗಳಿಗಿಂತ ತನ್ನ ಕೃತಿ ಭಿನ್ನವಾಗಿರಲು, ವಿಶೇಷವಾಗಿರಲು ಆತ ಪ್ರಯತ್ನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬುದ್ಧನನ್ನು ಕುರಿತ ೧೦ ಕನ್ನಡ ನಾಟಕಗಳನ್ನು ಇಲ್ಲಿ ತೌಲನಿಕವಾಗಿ ವಿವೇಚಿಸಲಾಗಿದೆ. ವಸ್ತು ವಿವೇಚನೆ, ಕಥಾ ವಿನ್ಯಾಸ, ಪಾತ್ರ ನಿರ್ಮಾಣ, ದೃಷ್ಟಿ ಧೋರಣೆಗಳು, ತಂತ್ರ, ರಂಗಭೂಮಿಯಲ್ಲಿ ಇವುಗಳ ಯಶಸ್ಸು ಈ ನೆಲೆಯಿಂದ ಪ್ರಸ್ತುತ ನಿಬಂಧದ ಕೃತಿಗಳನ್ನು ವಿವೇಚಿಸಬಹುದು.

ವಸ್ತು ವಿವೇಚನೆ:–

ಈ ನಿಬಂಧದ ವ್ಯಾಪ್ತಿಗೆ ಒಳಪಡುವ ಎಲ್ಲಾ ೧೦ ನಾಟಕಗಳು ಬುದ್ಧನನ್ನು ಕುರಿತದ್ದಾಗಿವೆ. ಆದರೂ ಈ ಎಲ್ಲಾ ನಾಟಕಗಳ ಲೇಖಕರು ವಸ್ತುವನ್ನು ವಿವೇಚಿಸಿರುವ ರೀತಿಯಲ್ಲಿ ಸ್ವೋಪಜ್ಞತೆಯನ್ನು ಮೆರೆದಿದ್ದಾರೆ. ಮೊದಲಿಗೆ ಕುವೆಂಪು ಅವರ 'ಮಹಾರಾತ್ರಿ'ಯ ವಸ್ತುವನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಅರ್ಧರಾತ್ರಿಯ ವ್ಯಾಪ್ತಿಯುಳ್ಳ ಮಹಾರಾತ್ರಿ ಬುದ್ಧನ ಬದುಕಿನ ನಿರ್ಣಾಯಕ ಘಟ್ಟವನ್ನು ವಿವೇಚಿಸುತ್ತದೆ. ಸಿದ್ಧಾರ್ಥ ಎಲ್ಲವನ್ನೂ ತ್ಯಜಿಸಿ ಹೋಗುವಾಗ ಆತನ ಮನಸ್ಸಿನ ಹೊಯ್ದಾಟ, ಆತನಿಗೆದುರಾಗುವ ಪ್ರಲೋಭನೆಗಳು, ಅದನ್ನು ಜಯಿಸಿ ಆತ ಬುದ್ಧನಾಗಲು ಹೊರಟದ್ದು ಇದು ಮಹಾರಾತ್ರಿಯ ವಸ್ತು. ಕುವೆಂಪು ಅವರು ವಿವೇಚಿಸಿರುವ ಈ ಮಹಾರಾತ್ರಿಯ ಘಟನೆ ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ಕಾರಂತರ

'ಬುದ್ಧೋದಯ' ಕೃತಿಗಳಲ್ಲಿ ಕಂಡುಬಂದರೂ ಕುವೆಂಪು ಅವರ ಮಹಾರಾತ್ರಿ ಇವೆರೆಡಕ್ಕಿಂತ ಭಿನ್ನವಾಗಿದೆ. ಗೃಹತ್ಯಾಗ ಮಾಡುವ ಸಿದ್ಧಾರ್ಥನ ಪಾತ್ರವನ್ನು ಅವರು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಚಿತ್ರಿಸುತ್ತಾರೆ. ಸಿದ್ಧಾರ್ಥ ಗೃಹತ್ಯಾಗ ಮಾಡುವ ಆ ರಾತ್ರಿಯಲ್ಲಿ ಮಡದಿ ಮಗುವಿನ ಮೋಹದಿಂದ ಬಿಡಿಸಿಕೊಳ್ಳಲು ಆತ ಪ್ರಯತ್ನಿಸುವುದು, ಮನ್ಮಥ ಆತನಿಗೆ ಒಡ್ಡುವ ಪ್ರಲೋಭನೆಗಳನ್ನು, ಹಂತ ಹಂತವಾಗಿ ಕಾಣಿಸಿಕೊಳ್ಳುವ ಅಗಲಿಕೆಯ ನೋವು, ಮನಕಲಕುವ ಸಂಭಾಷಣೆ, ಈ ಎಲ್ಲವೂ ಭೋಗದಿಂದ ತ್ಯಾಗದ ಕಡೆಗೆ ಸಾಗುತ್ತಿರುವ ಸಿದ್ಧಾರ್ಥನ ಮನಸ್ಥಿತಿಯನ್ನು ಸಮರ್ಥವಾಗಿ ಬಿಂಬಿಸುತ್ತವೆ.

'ಮಹಾರಾತ್ರಿ' ನಾಟಕ ಅರ್ಧರಾತ್ರಿಯ ಗಡುವುಳ್ಳದ್ದಾದರೆ 'ಗೌತಮಬುದ್ಧ' ಬುದ್ಧನ ಬಾಲ್ಯ, ಯೌವ್ವನ, ಪರಿನಿಷ್ಕ್ರಮಣ, ಮಹಾನಿರ್ವಾಣ ಇವುಗಳ ಸಮಗ್ರ ಚಿತ್ರಣವನ್ನು ನೀಡುತ್ತದೆ. ಅದಾಗಿಯೂ ಕುವೆಂಪು ಅವರ ಮಹಾರಾತ್ರಿಯ ಪ್ರಭಾವಕ್ಕೆ ಗೌತಮಬುದ್ಧ ಕೃತಿ ಒಳಗಾಗಿರುವುದು ಕಂಡುಬರುತ್ತದೆ. ಆ ರಾತ್ರಿಯ ದೃಶ್ಯ ನಿರೂಪಣೆಯಲ್ಲಿ ಮಹಾರಾತ್ರಿ ಮತ್ತು ಗೌತಮಬುದ್ಧ ಬಹಳಷ್ಟು ಹೋಲುತ್ತವೆ. ಈ ಎರಡೂ ಕೃತಿಗಳಲ್ಲಿ ಗೌತಮನ ಗೃಹತ್ಯಾಗಕ್ಕೆ ಕಾರಣ ಒಂದೆ. ಮುಪ್ಪು, ಸಾವು ಮತ್ತು ರೋಗ ಇದರಿಂದ ವೈರಾಗ್ಯ ಪರವಶನಾದ ಗೌತಮ ತನ್ನ ಗೃಹತ್ಯಾಗದ ನಿರ್ಧಾರವನ್ನು ಮೊದಲು ಚೆನ್ನನಿಗೆ ತಿಳಿಸುತ್ತಾನೆ. 'ಗೌತಮಬುದ್ಧ' ದಲ್ಲಿ ತಂದೆಯ ಒಪ್ಪಿಗೆಯನ್ನು ಪಡೆಯುತ್ತಾನೆ. ಗೃಹತ್ಯಾಗಕ್ಕೆ ಚೆನ್ನನ ನೆರವನ್ನು ಅಪೇಕ್ಷಿಸುತ್ತಾನೆ. ಯಶೋಧರೆ ಮತ್ತು ರಾಹುಲನನ್ನು ನೋಡಬೇಕೆಂಬ ಆಸೆಯನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಎರಡೂ ಕೃತಿಗಳಲ್ಲಿ ಸಮಾನ ಅಂಶಗಳಿವೆ.

> ಒಂದೆಯೊಂದು ಸಲ! ಹೋಗಿ
> ಕಣ್ಣಿನಾಸೆಯ ತಣಿಸಿ ದಣಿಸಿ ಬರುವೆ (ಮಹಾರಾತ್ರಿ)
> ಒಂದೇ ಸಾರಿ ಪ್ರಿಯ ಯಶೋಧರೆಯ ನೀಕ್ಷಿಸುತೆ
> ಆಶೆ ತಣಿಯಲಿ, ಊರ್ಜಿಸಲಿ ಕಣ್ಣಪುಣ್ಯಂ. (ಗೌತಮ ಬುದ್ಧ)

ಎಂದು ಪತ್ನಿ ಪುತ್ರನನ್ನು ನೋಡುವ ಹಂಬಲ ವ್ಯಕ್ತಪಡಿಸುವುದು, ಮಗುವಿಗೆ ಮುತ್ತನಿಡುವಾಗ

> ತಂದೆಯೊಲಿದೀಯುವಾ ಮುತ್ತಲ್ಲವಿದು ಕಂದ;

ಸನ್ಯಾಸಿಯೀಯುತಿಹ ನಿಷ್ಕಾಮ ಚುಂಬನ...
ಅಳಬೇಡ ರಾಹುಲಾ,
ನಿನ್ನಳುವಿನೊಳು ಮಹಾಶಕ್ತಿಯಿಹುದಿಂದು
ಲೋಕಕಿದು ಬುದ್ಧನಂ ಮನಬಂದರೀಯುವುದು (ಮಹಾರಾತ್ರಿ)

ಒಂದೇ ಮುತ್ತು! ತಂದೆ ಮಕ್ಕಳ ನಲ್ಮೆಯೆಲ್ಲವಂ
ಸಂಗಡಿಪಸವಿತುತ್ತು ! ಆರಿಸಿದ ತನಿಮುತ್ತು!...
ಅಳಬೇಡ ರಾಹುಲಾ ನಿನ್ನಳುವಿನೊಳಗಿಂದು
ದುರ್ಭೇದ್ಯಮಾದೊಂದು ಶಕ್ತಿ ನೆಲೆಸಿಹುದು
ಮನಬಂದರೀಯುವುದು ಮುಕ್ತಿಲಾಭವನೆನಗೆ (ಗೌತಮ ಬುದ್ಧ)

ಹೀಗೆ ಸಿದ್ಧಾರ್ಥನ ಗೃಹತ್ಯಾಗದ ಸಂದರ್ಭದ ಚಿತ್ರಣದಲ್ಲಿ ಬಹಳಷ್ಟು ಸಾಮ್ಯವಿದೆ. ಇಲ್ಲಿ ಸಿದ್ಧಾರ್ಥನಿಗೆ ಮನ್ಮಥ ಎದುರಾದರೆ, ಅಲ್ಲಿ ರತಿ ಎದುರಾಗುತ್ತಾಳೆ. ಇವರೆಡೂ ಸಹಜಭೋಗಾಕಾಂಕ್ಷೆ ಮತ್ತು ಸಮಾಜಮುಖಿ ಮಹತ್ವಾಕಾಂಕ್ಷೆಯ ಮುಖಾಮುಖಿಯ ಚಿತ್ರಣವೇ ಆಗಿದೆ. ಮಹಾರಾತ್ರಿಯ ಸಿದ್ಧಾರ್ಥ ತನ್ನ ಗೃಹತ್ಯಾಗದ ವಿಚಾರವನ್ನು ಪತ್ರ ಬರೆದಿಟ್ಟು ಹೋದರೆ ಅಲ್ಲಿ ಯಾರಿಗೂ ತಿಳಿಸದೆ ಹೊರಟುಹೋಗುತ್ತಾನೆ. ಮಹಾರಾತ್ರಿಯಲ್ಲಿ ಲೌಕಿಕ ಕಾಮನೆಗಳನ್ನು ಮೀರಿ ಅಧ್ಯಾತ್ಮದ ಸೆಳೆತಕ್ಕೊಳಗಾದವನಿಗೂ ಹೆಸರಾಸೆಯೆ ಎಂಬ ಸಂದೇಹ ಸಿದ್ಧಾರ್ಥ ಕಂಥಕನ ಮೇಲೇರಿ ಹೋಗುವ ಸಂದರ್ಭದಲ್ಲಿ ಮೂಡುತ್ತದೆ. ಇವೆರೆಡು ಕೃತಿಗಳಲ್ಲಿ ಸಿದ್ಧಾರ್ಥನ ಗೃಹತ್ಯಾಗಕ್ಕೆ ಕಾರಣವಾಗುವ ಅಂಶ ಒಂದೇ ಆಗಿದ್ದರೆ ಕಾರಂತರ 'ಬುದ್ಧೋದಯ' ದಲ್ಲಿ ಬಯಲಾ ದಾಟುವ ಜಗವಾ ಸುತ್ತುವ ಎಂಬ ರಾಹುಲನ ಮಾತು, 'ಜಲ' ದಲ್ಲಿ ರಾಜಕೀಯ ಕುತಂತ್ರ ಕಾರಣವಾಗುತ್ತದೆ.

ಇವೆರೆಡಕ್ಕಿಂತ ಭಿನ್ನವಾದ ಮಾಸ್ತಿಯವರ 'ಯಶೋಧರಾ' ಬುದ್ಧನ ಗೃಹತ್ಯಾಗದ ೧೦ ವರ್ಷಗಳ ನಂತರದ ಘಟನೆಯನ್ನು ಕುರಿತದ್ದಾಗಿದೆ. ಬುದ್ಧನ ಪೂರ್ವಾಶ್ರಮದ ಸತಿ ಯಶೋಧರೆಯ ದೃಷ್ಟಿಯಲ್ಲಿ ಸಿದ್ಧಾರ್ಥನ ಸನ್ಯಾಸ ಸ್ವೀಕಾರವನ್ನು ವಿವೇಚಿಸಲಾಗಿದೆ. ಹಿಂದಿನ

ಕೃತಿಗಳಲ್ಲಿ ಗೌಣವಾಗಿ ಕಾಣಿಸಿಕೊಂಡ ಯಶೋಧರೆಯ ಪಾತ್ರ ಇಲ್ಲಿ ನಾಟಕದ ಕೇಂದ್ರ ಬಿಂದುವಾಗಿದೆ. ಹೀಗಾಗಿ ಈ ಹಿಂದಿನ ನಾಟಕಕಾರರಲ್ಲಿ ಇಲ್ಲದ ಮಾಸ್ತಿಯವರ ಸ್ತ್ರೀವಾದಿ ನಿಲುವು ಗಮನಾರ್ಹವಾದುದು. 'ಮಹಾರಾತ್ರಿ' ಸಿದ್ಧಾರ್ಥನ ಮಾನಸಿಕ ಒಳತೋಟಿಯನ್ನು ಚಿತ್ರಿಸಿದರೆ, 'ಯಶೋಧರಾ' ಯಶೋಧರೆಯ ಮನಸ್ಸಿನ ಹೊಯ್ದಾಟವನ್ನು ಚಿತ್ರಿಸುತ್ತದೆ. 'ಗೌತಮಬುದ್ಧ'ದಲ್ಲಿ ಪ್ರಾಸಂಗಿಕವಾಗಿ ಕಾಣಿಸಿಕೊಳ್ಳುವ ಪ್ರತಿಭಟನೆಯ ಎಳೆ ಯಶೋಧರದಲ್ಲಿ ಇಡೀ ನಾಟಕದುದ್ದಕ್ಕೂ ವ್ಯಾಪಿಸುತ್ತದೆ. 'ಗೌತಮಬುದ್ಧ'ದಲ್ಲಿ ಯಶೋಧರೆಯ ಈ ಮಾತನ್ನು ಗಮನಿಸಬಹುದು.

'ದುಃಖ ಲೇಶವನ್ನೂ ಅರಿತವಳಲ್ಲ, ಅಂತಹ ನನ್ನನ್ನು ಶೋಕ ಸಾಗರದಲ್ಲಿ ಮುಳುಗಿಸಿದುದು ಯಾವ ನ್ಯಾಯ?' ಎಂಬ ಯಶೋಧರೆಯ ಪ್ರಶ್ನೆಗೆ ನಿನ್ನ ಮೇಲಿನ ವೈರಾಗ್ಯದಿಂದ ನಾನು ಗೃಹತ್ಯಾಗ ಮಾಡಲಿಲ್ಲ ಎಂದು ಉತ್ತರಿಸುತ್ತಾನೆ ಬುದ್ಧ ಹಾಗೂ 'ಯಶೋಧರಾ' ದಲ್ಲಿನ ಈ ಪ್ರಶ್ನೆಗೆ,

> ಆ ಪ್ರೇಮವೆಂದೆನ್ನ ಹೃದಯಸದ್ಮದೊಳಿಟ್ಟ
> ಸಮ್ಮೋದದೊಂದು ನಂದಾದೀಪ ಈಗಳೂ
> ಎನ್ನ ಆಂತರ್ಯವನ್ನು ತೃಪ್ತಿಯಲ್ಲಿ ಬೆಳಗುತಿದೆ...
> ಪತಿಗೆ ಬೇಡದೆ ಹೋದೆನೆಂದು ನೆನೆದುದು ಸಾಕು.

ಎಂದುತ್ತರಿಸಿ ಯಶೋಧರೆಯ ಮನಸ್ಸಿನ ಶಂಕೆಯನ್ನು ದೂರ ಮಾಡುತ್ತಾನೆ. 'ಗೌತಮಬುದ್ಧ' ದ ಯಶೋಧರಾ ಬುದ್ಧನಲ್ಲಿ ಸನ್ಯಾಸದೀಕ್ಷೆ ಯಾಚಿಸಿದಾಗಲೂ ಬುದ್ಧ ನಿರಾಕರಿಸುತ್ತಾನೆ. ಆದರೂ ಆಕೆ ಸನ್ಯಾಸತ್ವದ ಪ್ರತಿಜ್ಞೆ ಮಾಡುತ್ತಾಳೆ. ಮಾಸ್ತಿಯವರ 'ಯಶೋಧರಾ' ಬುದ್ಧನಿಂದ ಸನ್ಯಾಸತ್ವ ಪಡೆಯುತ್ತಾಳೆ ಹಾಗೂ ಈ ಮೂಲಕ ಸ್ತ್ರೀ ಕುಲಕ್ಕೆ ಆಧ್ಯಾತ್ಮಿಕ ಸಮಾನತೆಯನ್ನು ತಂದುಕೊಡುತ್ತಾಳೆ. ಇಡೀ ನಾಟಕ ಯಶೋಧರೆಯನ್ನು ಕೇಂದ್ರವಾಗಿರಿಸಿಕೊಂಡಿದ್ದರೂ ಬುದ್ಧನ ವ್ಯಕ್ತಿತ್ವಕ್ಕೆ ಕುಂದುಂಟಾಗದಂತೆ ಅವನ ಪಾತ್ರವನ್ನು ಚಿತ್ರಿಸಲಾಗಿದೆ.

ಕಾರಂತರ 'ಕಿಸಾಗೋತಮಿ'ಯಲ್ಲಿ ಮಗುವಿನ ಸಾವಿನ ದುಃಖದಿಂದ ರೋದಿಸುತ್ತಿದ್ದ ತಾಯಿಯೊಬ್ಬಳಿಗೆ ಸ್ವಾನುಭವದ ಮೂಲಕ ಸಾವಿನ ಅನಿವಾರ್ಯತೆಯನ್ನು ತಿಳಿಸಿಕೊಡುವ ಸಂದರ್ಭವನ್ನು ನಿರೂಪಿಸಲಾಗಿದೆ. 'ಗೌತಮಬುದ್ಧ'ದಲ್ಲಿಯೂ ಇದರ ಪ್ರಸ್ತಾಪವಿದ್ದರೂ ಕಾರಂತರು ಇದನ್ನೇ ಮುಖ್ಯವಾಗಿರಿಸಿಕೊಂಡಿದ್ದಾರೆ. ದುಃಖಿತಳಾದ ಹೆಣ್ಣುಮಗಳಿಗೆ ಸಾವಿಲ್ಲದ ಮನೆಯ ಸಾಸಿವೆ ತಂದರೆ ಮಗುವನ್ನು ಬದುಕಿಸಿಕೊಡುವುದಾಗಿ ಹೇಳುವ ಬುದ್ಧ ಆ ಮೂಲಕ. . . .

ಸಾವಿಲ್ಲದೆಡೆಯಿಲ್ಲ – ನೋವಿಲ್ಲದೆಡೆಯಿಲ್ಲ
ಸಾವು ಜೀವಕೆ ನಂಟು, ಅದನ್ನು ತಪ್ಪಿಸ ಸಲ್ಲ

ಎಂದು ಸಾವಿನ ಅನಿವಾರ್ಯತೆಯ ಸತ್ಯವನ್ನು ಮನಗಾಣಿಸುತ್ತಾನೆ.

'ಬುದ್ಧೋದಯ'ದಲ್ಲಿ ಸಿದ್ಧಾರ್ಥ ಬುದ್ಧನಾಗಲು ಹೊರಟ ಸಂದರ್ಭದ ಕಥೆಯನ್ನು ಒಳಗೊಂಡಿದೆ. ಗೃಹತ್ಯಾಗ ಮಾಡುವ ಆತನ ನಿರ್ಧಾರ, ಚೆನ್ನನ ಸಹಾಯ ಬಯಸುವುದು, ಅವನಿಂದ ಬೀಳ್ಕೊಂಡು ಅರಣ್ಯ ಪ್ರವೇಶಿಸುವುದು, ಬೋಧಿವೃಕ್ಷದಡಿಯಲ್ಲಿ ಸಿದ್ಧಾರ್ಥನಿಗೆ ಜ್ಞಾನೋದಯವಾಗಿದ್ದು ಈ ಎಲ್ಲದರ ವಿವೇಚನೆಯಿದೆ.

ಪ್ರಭುಶಂಕರರ ನಾಲ್ಕು ನಾಟಕಗಳು ವಸ್ತು ವಿವೇಚನೆಯ ದೃಷ್ಟಿಯಿಂದ ಈ ಹಿಂದಿನ ಕೃತಿಗಳಿಗಿಂತ ವಿಶಿಷ್ಟವಾಗಿ ನಿಲ್ಲುತ್ತವೆ. ಕುವೆಂಪು, ಕಾರಂತರು ಘಟನೆಯನ್ನು ಆಧರಿಸಿ ಕೃತಿ ರಚಿಸಿದ್ದರೆ, ಪ್ರಭುಶಂಕರರು ವ್ಯಕ್ತಿಗಳನ್ನು ಆಧರಿಸಿ ಘಟನೆಯನ್ನು ನಿರೂಪಿಸಿದ್ದಾರೆ. ಇಲ್ಲಿ ಬುದ್ಧ ಕೇಂದ್ರವ್ಯಕ್ತಿಯಾಗದೆ ಅಂಗುಲೀಮಾಲ, ಆಮ್ರಪಾಲಿ ಮೊದಲಾದವರ ಪರಿವರ್ತನೆಯ ಹಿಂದಿನ ಪ್ರೇರಕ ಶಕ್ತಿಯಾಗಿರುತ್ತಾನೆ. ಅಂಗುಲೀಮಾಲ ನಂತಹ ಕ್ರೂರ, ಅಮಾನವೀಯ ವ್ಯಕ್ತಿಯನ್ನು ಮಾನವತ್ವಕ್ಕೇರಿಸಿದುದರ ಚಿತ್ರಣವಿದೆ. ತನ್ನ ಕ್ರೂರತೆಯಿಂದ ಜಗತ್ತನ್ನೇ ನಡುಗಿಸುತ್ತಿದ್ದ ಅಂಗುಲೀಮಾಲನೆಡೆಗೆ ನಿರಾಯುಧನಾಗಿ ಹೋಗುವ ಬುದ್ಧ ಅತನಲ್ಲಿ ಕರುಣೆಯ ಸಂದೇಶವನ್ನು ಬಿತ್ತುತ್ತಾನೆ. ತನ್ನ ಅಸಾಧಾರಣ ವ್ಯಕ್ತಿತ್ವದಿಂದ ಕ್ರೂರ ವ್ಯಕ್ತಿಯೊಬ್ಬನನ್ನು ಉದ್ಧರಿಸುವ ಕರುಣಾಮಯಿ ಬುದ್ಧ ಮತ್ತು ಬುದ್ಧನ ಪ್ರಭಾವಕ್ಕೊಳಗಾಗಿ ಹಿಂಸೆಯಿಂದ ವೈರಾಗ್ಯದ ಕಡೆಗೆ ಸಾಗಿ ಸಾವಿನಲ್ಲಿ ಅವಸಾನ ಹೊಂದುವ ಅಂಗುಲೀಮಾಲ ಪರಸ್ಪರ

ವೈರುಧ್ಯಗಳಿಂದ ಕೂಡಿದ ಈ ಇಬ್ಬರೂ ವ್ಯಕ್ತಿಗಳ ಚಿತ್ರವಿದ್ದು ಅಂಗುಲೀಮಾಲನ ಪರಿವರ್ತನೆ ಇಲ್ಲಿ ಮುಖ್ಯವಾಗುತ್ತದೆ.

ಸೌಂದರ್ಯದ ಸಾಕಾರದಂತಿರುವ ವೇಶ್ಯಾಸ್ತ್ರೀಯೊಬ್ಬಳು ಭೋಗ ಜೀವನಕ್ಕೆ ಹೇಸಿ ವೈರಾಗ್ಯದ ಕಡೆಗೆ ಸಾಗುವ ಕಥೆಯನ್ನು ಒಳಗೊಂಡಿದ್ದು 'ಆಮ್ರಪಾಲಿ'. ಮಾಸ್ತಿಯವರ ನಾಟಕದಲ್ಲಿ ಆಮ್ರಪಾಲಿಯ ಪ್ರಸ್ತಾಪವಿದ್ದು, ಸ್ತ್ರೀಯರಿಗೆ ಸನ್ಯಾಸ ದೀಕ್ಷೆ ನೀಡುವ ವಿಚಾರದಲ್ಲಿ ಯಶೋಧರೆಯ ಮಾತನ್ನು ಆಮ್ರಪಾಲಿಯು ಅನುಮೋದಿಸುತ್ತಾಳೆ. ಅಲ್ಲಿ ಪ್ರಾಸಂಗಿಕವಾಗಿ ಬರುವ ಪಾತ್ರ ಪ್ರಭುಶಂಕರರ ಮುಖ್ಯವಾಹಿನಿಯಲ್ಲಿದೆ. ಆಮ್ರಪಾಲಿ ವೇಶ್ಯೆಯಾಗಲು ಕಾರಣವಾಗುವ ಸಾಮಾಜಿಕ ಪರಿಸರದ ಚಿತ್ರಣವನ್ನು ಕೊಡುವುದು ವಸ್ತುಸ್ಥಿತಿಯನ್ನು ಗ್ರಹಿಸುವ ನಾಟಕಕಾರರ ವಿಶಾಲದೃಷ್ಟಿಕೋನಕ್ಕೆ ನಿದರ್ಶನವಾಗಿದೆ. ನಾಟಕದ ಆರಂಭದಲ್ಲಿಯೇ ಕಾಣಿಸಿಕೊಳ್ಳುವ ಸುವರ್ಣದತ್ತ (ಸುಭಿಕ್ಷು) ನ ಪಾತ್ರ ಆಮ್ರಪಾಲಿಯ ಪಾತ್ರಕ್ಕೆ ವಿರುದ್ಧವಾದ ಸ್ವಭಾವವನ್ನು ಪ್ರತಿನಿಧಿಸುವಂತಹದ್ದು. ಯಾವುದೇ ಭಾವ ಅದು ರಾಗವಾಗಲಿ, ವೈರಾಗ್ಯವಾಗಲಿ ಆಂತರ್ಯದಿಂದ ಮೂಡದ ಹೊರತು ಸ್ಥಾಯಿಯಾಗಿ ಉಳಿಯಲು ಸಾಧ್ಯವಿಲ್ಲವೆಂಬ ಸತ್ಯವನ್ನು ಧ್ವನಿಸುತ್ತದೆ ಸುಭಿಕ್ಷುವಿನ ಪಾತ್ರ.

'ಸುಜಾತ' ಮಹಾನ್ ವ್ಯಕ್ತಿಯೊಬ್ಬನ ಆಗಮನದ ಸೂಚನೆಯನ್ನು ಅಲೌಕಿಕವಾಗಿ ಗ್ರಹಿಸುವ ಸ್ತ್ರೀಯೊಬ್ಬಳ ಕಥೆ. 'ಮಹಾರಾತ್ರಿ' ಯಲ್ಲಿ ಯಕ್ಷ, ಕಿನ್ನರ ಮೊದಲಾದ ಅತಿಮಾನುಷ ವ್ಯಕ್ತಿಗಳಿಗೆ ಮಾತ್ರ ಪೂರ್ವಗೋಚರವಾಗಿದ್ದ ಬುದ್ಧೋದಯದ ವಿಚಾರ ಇಲ್ಲಿ ಸಾಮಾನ್ಯ ಹೆಣ್ಣೊಬ್ಬಳಿಗೆ ವೇದ್ಯವಾದಂತೆ ಚಿತ್ರಿಸಿರುವುದು ಸಾಮಾನ್ಯರ ಬಗೆಗೆ ಲೇಖಕರ ದೃಷ್ಟಿಕೋನವನ್ನು ತಿಳಿಸುತ್ತದೆ. ಲೋಕ ಕಲ್ಯಾಣಕ್ಕಾಗಿ ಅವತರಿಸುವ ಮಹಾಪುರುಷನ ಆಗಮನದ ಕನಸುಕಂಡು ಅದು ನನಸಾದ ನಂತರ ಸಾರ್ಥಕತೆ ಪಡೆದುಕೊಳ್ಳುವ ವಿಶಿಷ್ಟ ವ್ಯಕ್ತಿತ್ವದ ಸ್ತ್ರೀ ಸುಜಾತೆ. ಅವಳು ನೀಡಿದ ಪಾಯಸ ಬುದ್ಧನಿಗೆ ಪ್ರಾಣಧಾರಣವಾದಂತಾಗಿ ಆತನ ಬೋಧಿಲಾಭಕ್ಕೆ ನೆರವಾದುದು ಸುಜಾತೆಯ ಹೆಸರು ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಳ್ಳಲು ಕಾರಣವಾಯಿತು. 'ಗೌತಮಬುದ್ಧ' ದಲ್ಲಿಯೂ ಸುಜಾತೆಯ ಪಾತ್ರವಿದ್ದು ಆಕೆ ಸಿದ್ಧಾರ್ಥ ದೇಹದಂಡನೆಯ ವ್ರತವನ್ನು ಖಂಡಿಸಿ 'ಆತ್ಮವು ಆಜ್ಞೇಯ ಸತ್ಯ ಅಗೋಚರ. ಈ ಉಭಯತತ್ವಗಳು ಬಾಹ್ಯ

ಜಗತ್ತಿನಲ್ಲಿ ವಿಕಾಸವಾಗಲು ಈ ನಶ್ವರ ದೇಹವು ಬೇಕು' ಎಂಬ ಸತ್ಯವನ್ನು ಮನವರಿಕೆ ಮಾಡಿಕೊಡುತ್ತಾಳೆ.

'ಗಾಳಿ ಎಂಬ ಕುದುರೆ ಏರಿ' ಸತ್ಯ ಸಾಕ್ಷಾತ್ಕಾರಕ್ಕಾಗಿ ಹೊರಟ ಇಬ್ಬರು ವ್ಯಕ್ತಿಗಳ ಮಾನಸಿಕ ತುಮುಲವನ್ನು ಮನೋಜ್ಞವಾಗಿ ಬಿಂಬಿಸುತ್ತದೆ. ಸಿದ್ಧಾರ್ಥ ಮತ್ತು ಅಗ್ನಿಮಿತ್ರ ಇಬ್ಬರ ದೃಢತೆಯಲ್ಲಿ ವ್ಯತ್ಯಾಸವಿರುವಂತೆ ಚಿತ್ರಿಸಲಾಗಿದೆ. ಇಲ್ಲಿನ ಎರಡೂ ಪಾತ್ರಗಳು ಆಮ್ರಪಾಲಿ ನಾಟಕದ ಸುವರ್ಣದತ್ತ ಮತ್ತು ಆಮ್ರಪಾಲಿಯ ಪಾತ್ರಗಳಂತೆ ಪರಸ್ಪರ ವೈರುಧ್ಯಗಳಿಂದ ಕೂಡಿರುವಂಥದ್ದು. ಸುವರ್ಣದತ್ತ ವಿರಾಗದಿಂದ ರಾಗದ ಕಡೆಗೆ ಆಕರ್ಷಿತನಾದಂತೆ ಅಗ್ನಿಮಿತ್ರ ವೈರಾಗ್ಯದ ಹಾದಿಯಲ್ಲಿ ನಡೆದು ತೃಪ್ತನಾಗದೆ ಹಿಂದಿರುಗುತ್ತಾನೆ. ಭೋಗದ ತುತ್ತ ತುದಿಯಲ್ಲಿದ್ದ ಆಮ್ರಪಾಲಿ ಲೌಕಿಕ ಕಾಮನೆಗಳನ್ನು ಮೀರಿದ ಅಧ್ಯಾತ್ಮದ ಸೆಳೆತಕ್ಕೊಳಗಾಗುತ್ತಾಳೆ ಬುದ್ಧನಂತೆ. ಸುವರ್ಣದತ್ತ ಮತ್ತು ಅಗ್ನಿಮಿತ್ರ ತಮ್ಮ ಮನೋನಿಗ್ರಹದಲ್ಲಿ ಎಡವಿ ವೈರಾಗ್ಯದ ಹಾದಿಯಿಂದ ಹಿಂದೆ ಸರಿದರೆ ಆಮ್ರಪಾಲಿ ಮತ್ತು ಸಿದ್ಧಾರ್ಥರ ಭೋಗದ ಸೆಳೆತ ತೀವ್ರವಾಗಿದ್ದ ಸಂದರ್ಭದಲ್ಲಿಯೇ ಅದನ್ನು ತ್ಯಜಿಸಿ ಸನ್ಯಾಸತ್ವದ ದೃಢಚಿತ್ತವನ್ನು ಸಾಬೀತುಪಡಿಸುತ್ತಾರೆ. ಹೀಗೆ ಪ್ರಭುಶಂಕರರ ಎರಡೂ ನಾಟಕಗಳು ತಮ್ಮ ವಿಶಿಷ್ಟ ವಸ್ತುವಿನಿಂದ ಗಮನ ಸೆಳೆಯುವಂಥದ್ದು.

ಈ ಎಲ್ಲಾ ಕೃತಿಗಳಿಗಿಂತ ವಸ್ತುವಿನಲ್ಲಿ ಭಿನ್ನವಾದುದು ಮನಜ ಅವರ 'ಜಲ'. ಸಿದ್ಧಾರ್ಥನ ಸನ್ಯಾಸ ಸ್ವೀಕಾರಕ್ಕೆ ಕಾರಣವಾಗುವ ಜಲವಿವಾದದಂತಹ ರಾಜಕೀಯ ಸಂದರ್ಭವನ್ನು ಚಿತ್ರಿಸುವುದು ನಾಟಕದ ವಸ್ತುವಾಗಿದೆ. ಸಿದ್ಧಾರ್ಥನಿಗೆ ಕರುಣೆಯ ಸಂದೇಶವನ್ನು ಹೊತ್ತುತಂದು, ಆತನಲ್ಲಿದ್ದ ಜೀವಪರ ಕಾಳಜಿಯನ್ನು ಸಮಾಜದ ಮುಂದೆ ತೆರೆದಿಡುವ ಪಕ್ಷಿಯ ಪ್ರಸಂಗವೂ ಇಲ್ಲಿದೆ. ಈ ಪ್ರಸಂಗ 'ಗೌತಮಬುದ್ಧ'ದಲ್ಲಿಯೂ ಕಾಣಿಸಿಕೊಂಡಿದೆ. 'ಜಲ' ಸಿದ್ಧಾರ್ಥ ಮತ್ತು ಯಶೋಧರೆಯ ಅನುರೂಪ ದಾಂಪತ್ಯವನ್ನು ಕಟ್ಟಿಕೊಡುವುದರೊಂದಿಗೆ ಸಿದ್ಧಾರ್ಥನ ಸನ್ಯಾಸ ಸ್ವೀಕಾರ ಸಂದರ್ಭದಲ್ಲಿ ಅವಳ ಆಸೆ, ಅವಳ ಸುಖ, ಅವಳ ಯೌವ್ವನ ಈ ಮೂರನ್ನೂ ಸಿದ್ಧಾರ್ಥನ ಭಿಕ್ಷಾ ಪಾತ್ರೆಗೆ ಹಾಕುವ ಮೂಲಕ ಆಕೆ ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿ ನಡೆದುಕೊಳ್ಳುವುದು ಅವಳ ವ್ಯಕ್ತಿತ್ವದ ಹಿರಿಮೆಯನ್ನು ತಿಳಿಸುತ್ತದೆ, ಜೊತೆಗೆ ಯಶೋಧರೆಯ ಹಾಸ್ಯಪ್ರಜ್ಞೆ ಮತ್ತು ವಿಚಾರವಂತಿಕೆಯನ್ನು ಕೂಡ. ಹಾಗೆಯೇ ಉಳಿದ ಕೃತಿಗಳಲ್ಲಿ ಇಲ್ಲದ ಪುರಾಣದ ಪರಿವೇಶವನ್ನು ಇಲ್ಲಿ ಕಾಣಬಹುದು.

ಹೀಗೆ ವಸ್ತು ಒಂದೇ ಆದರೂ ಅದನ್ನು ವಿವೇಚಿಸಿರುವ ರೀತಿಯಲ್ಲಿ ವ್ಯತ್ಯಾಸವಾಗಿರುವುದನ್ನು ಕಾಣಬಹುದು. ಈ ನಾಟಕಗಳಲ್ಲಿ ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ಗೌತಮನ ಜೀವನದ ಸಮಗ್ರ ಚಿತ್ರಣವನ್ನು ನೀಡುತ್ತದೆ. ಇನ್ನುಳಿದ ಕೃತಿಗಳಲ್ಲಿ ಬಿಡಿಯಾದ ಮಹತ್ವದ ಸನ್ನಿವೇಶಗಳನ್ನು ಘಟನೆಗಳನ್ನು ನಿರೂಪಿಸಲಾಗಿದೆ.

ಕಥಾ ವಿನ್ಯಾಸ:-

ವಸ್ತುವಿನಂತೆಯೇ ಕಥೆಯ ವಿನ್ಯಾಸವನ್ನು ರೂಪಿಸಿರುವುದರಲ್ಲಿಯೂ ಈ ಎಲ್ಲ ನಾಟಕಗಳಲ್ಲಿ ವೈವಿಧ್ಯವಿದೆ. ಕುವೆಂಪು ಅವರ 'ಮಹಾರಾತ್ರಿ' ವ್ಯಾಪ್ತಿಯಲ್ಲಿ ಉಳಿದ ನಾಟಕಗಳಿಗಿಂತ ಚಿಕ್ಕದಾಗಿದ್ದರೂ ವಿಶಿಷ್ಟವಾಗಿದೆ. ಕಥೆಯ ಹಂದರವು ೧೦ ದೃಶ್ಯಗಳನ್ನು ಒಳಗೊಂಡಿದ್ದು ಇದರಲ್ಲಿ ಪೀಠಿಕಾ ಮತ್ತು ಉಪಸಂಹಾರ ದೃಶ್ಯಗಳು ಇರುತ್ತವೆ. ಮೊದಲ ಮತ್ತು ಕೊನೆಯ ದೃಶ್ಯಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಕಥೆಯು ಕಥನಕವನದ ಓಟಕ್ಕೆ ತಕ್ಕಂತೆ ಸಾಗುತ್ತದೆ. ಸಿದ್ಧಾರ್ಥ ಗೃಹತ್ಯಾಗಕ್ಕೆ ಸಾವು, ರೋಗ, ಮುಪ್ಪು, ಸನ್ಯಾಸಿ ಈ ನಾಲ್ಕು ದೃಶ್ಯಗಳು ಕಾರಣವೆಂಬ ಅಂಶವೇ ಇಲ್ಲಿದೆ. ಒಂದು ಬದಲಾವಣೆಯೆಂದರೆ ಸಿದ್ಧಾರ್ಥ ಪತ್ರ ಬರೆದಿಟ್ಟು ಹೋಗುತ್ತಾನೆ. ಸಿದ್ಧಾರ್ಥ ಚೆನ್ನನಿಗೆ ತನ್ನ ಗೃಹತ್ಯಾಗದ ವಿಚಾರ ತಿಳಿಸುವ ಸಂದರ್ಭದಲ್ಲಿ,

> ಮುದುಕನೊಬ್ಬನ ಕಂಡ ಪುಣ್ಯ ದಿನ!
> ರೋಗಿಯನು ಕಂಡ ದಿನ! ಸತ್ತವನ ಕಂಡ ದಿನ!
> ಯೋಗೀಶ್ವರನೊಬ್ಬನನ್ನು ಕಂಡತುಳ ಪುಣ್ಯ ದಿನ!

ಎಂದು ಈ ನಾಲ್ಕು ದೃಶ್ಯಗಳನ್ನು ಕಂಡ ದಿನವೇ ತನ್ನ ಮನಸ್ಸಿನಲ್ಲಿ ವೈರಾಗ್ಯ ಕುಡಿಯೊಡೆದಿದ್ದನ್ನು ವಿವರಿಸುತ್ತಾರೆ. 'ಗೌತಮಬುದ್ಧ' ದಲ್ಲಿ ಇಂದ್ರನ ಅಣತಿಯಂತೆ ಗಂಗಾ-ಗೌತಮಿಯರು ಬುದ್ಧನನ್ನು ಮೋಹನಿದ್ರೆಯಿಂದ ಜಾಗೃತಗೊಳಿಸಲು ಬರುತ್ತಾರೆ. ಇವರಿಬ್ಬರ ಪ್ರಭಾವದಿಂದಲೇ ಸಿದ್ಧಾರ್ಥನಲ್ಲಿ ವೈರಾಗ್ಯ ಅಂಕುರವಾಗಿ ಮುಪ್ಪು, ರೋಗ, ಸಾವಿನ ದೃಶ್ಯಗಳು ಅದಕ್ಕೆ ಪುಷ್ಟಿಯನ್ನೊದಗಿಸುತ್ತವೆ. ಈ ಒಂದು ಬದಲಾವಣೆಯ ಮೂಲಕ ನಾಟಕಕಾರರು

ಸಿದ್ಧಾರ್ಥನ ಅಲೌಕಿಕ ಜೀವನ ಪಯಣಕ್ಕೆ ಅಲೌಕಿಕ ಹಿನ್ನೆಲೆಯಲ್ಲಿರುವ ವ್ಯಕ್ತಿಗಳಿಂದಲೇ ಪ್ರೇರಣೆಯನ್ನೊದಗಿಸುತ್ತಾರೆ. ಇಲ್ಲಿ ಯಶೋಧರೆಗೆ ಸಿದ್ಧಾರ್ಥ ಬುದ್ಧನಾಗುವ ಮುನ್ಸೂಚನೆ ಕನಸಿನ ಮೂಲಕ ದೊರೆಯುತ್ತದೆ. ಕಾರಂತರ 'ಬುದ್ಧೋದಯ' ದಲ್ಲಿ ಸಿದ್ಧಾರ್ಥ ತನ್ನ ಮಗ ರಾಹುಲನ ಬಾಲ ಸಹಜ 'ಬಯಲಾ ದಾಟುವ, ಜಗವಾ ಸುತ್ತುವ' ಎಂಬ ಮಾತನ್ನು ಕೇಳಿ 'ನಿಜವಾ ಅರಿಯುವ, ಬದುಕಾ ಬೆಳಗುವ' ಎಂದು ನಿರ್ಧರಿಸುತ್ತಾನೆ. ಆ ಸತ್ಯಶೋಧದ ಮೊದಲ ಹಂತವಾಗಿ

ಆ ಸೊಗದ ಸೌಧದ ಆಚೆ
ಜಗವ ತುಳಿವ ಬಯಕೆ

ಯನ್ನು ವ್ಯಕ್ತಪಡಿಸುತ್ತಾನೆ. ಆತ ನಗರ ದರ್ಶನಕ್ಕೆ ಬಂದಾಗ ಆ ನಾಲ್ಕು ದೃಶ್ಯಗಳು ಕಾಣಿಸಿಕೊಳ್ಳುತ್ತವೆ. ನಂತರ ಸಿದ್ಧಾರ್ಥ 'ಬಾಳನು ಕವಿದಿಹ ಮಬ್ಬನು ಹರಿಯುವ' ನಿರ್ಧಾರ ಕೈಗೊಳ್ಳುತ್ತಾನೆ.

ಬಿ.ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ನಾಟಕದ ಕಥಾ ಹಂದರ ವ್ಯಾಪಕವಾಗಿ ಹರಡಿಕೊಂಡಿರುತ್ತದೆ. ಈ ನಾಟಕ ಬುದ್ಧನ ಸಮಗ್ರ ಜೀವನ ಚಿತ್ರಣ ನೀಡುವುದರಿಂದ ಕಥೆಯ ಹಂದರ ವಿಸ್ತಾರವಾಗಿದೆ. ಮೂರು ಅಂಕಗಳ ಈ ನಾಟಕ ಸಿದ್ಧಾರ್ಥನ ಬಾಲ್ಯ, ಯೌವ್ವನ, ಸಿದ್ಧಾರ್ಥ ಬುದ್ಧನಾದುದು, ಜ್ಞಾನೋದಯದ ನಂತರ ಕಪಿಲವಸ್ತುವಿಗೂ ಆಗಮಿಸಿದ್ದು ಈ ಮೂರು ಹಂತಗಳನ್ನು ಚಿತ್ರಿಸುತ್ತದೆ. ಸಿದ್ಧಾರ್ಥ ದೇವದತ್ತನ ಪ್ರಾಣಿ ಹಿಂಸೆಯನ್ನು ಖಂಡಿಸುವ ಮೂಲಕ ಅಹಿಂಸೆಯ ಪ್ರತಿಪಾದನೆ ಮಾಡುವ ದೃಶ್ಯದೊಂದಿಗೆ ನಾಟಕ ಆರಂಭವಾಗುತ್ತದೆ.

ಇದೇ ದೇವದತ್ತನ ಪ್ರಸಂಗವನ್ನು ಮನಜ ಅವರ 'ಜಲ' ನಾಟಕದಲ್ಲಿಯೂ ಕಾಣಬಹುದು. ಎರಡೂ ಕೃತಿಗಳಲ್ಲಿ ಕಾಣಿಸಿಕೊಳ್ಳುವ ಈ ಪ್ರಸಂಗ ಸಿದ್ಧಾರ್ಥನ ಅಹಿಂಸಾ ಮಾರ್ಗವನ್ನು ಜೀವಪರ ಕಾಳಜಿಯನ್ನು ಪ್ರತಿಪಾದಿಸುತ್ತದೆ ಮತ್ತು ಶತ್ರುವಿನ ಪ್ರಾಣ ತೆಗೆಯುವುದಷ್ಟೆ ಯುದ್ಧದಲ್ಲಿ ಮುಖ್ಯವಾಗದೆ ಜೀವರಕ್ಷಣೆಯೂ ಅದರ ಅವಿಭಾಜ್ಯ ಅಂಗವೆಂಬ ವಿಚಾರವನ್ನು ಈ ಎರಡೂ ಕೃತಿಗಳಲ್ಲಿ ಕಾಣಬಹುದು.

ಅಹಿಂಸೆಯ ಪ್ರತಿಪಾದನೆಯಿಂದ ಆರಂಭವಾಗುವ 'ಗೌತಮಬುದ್ಧ' ಕಪಿಲವಸ್ತುವಿಗೆ ಬಂದ ಬುದ್ಧ ಯಶೋಧರೆಯ ಸಂದೇಹಗಳನ್ನು ಪರಿಹರಿಸುವುದನ್ನು ಆಕೆ ಅಧ್ಯಾತ್ಮದಲ್ಲಿ ಸ್ತ್ರೀಯರ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕೆಂದು ಕೇಳಿಕೊಳ್ಳುವುದನ್ನು, ಬುದ್ಧ ಇದನ್ನು ನಿರಾಕರಿಸಿದ್ದರಿಂದ 'ಪ್ರಪಂಚವು ಮಾಯೆ, ಕರ್ಮವು ಬಂಧನ, ನಿರ್ವಾಣವೇ ಮೋಕ್ಷ' ಎಂಬ ಬುದ್ಧ ದೇವನ ಮೂರು ರತ್ನಗಳನ್ನು ಆಶ್ರಯಿಸಿ ಮುಕ್ತಳಾಗುವೆನೆಂದು ಸಂಪೂರ್ಣವಾಗಿ ವೈರಾಗ್ಯದಲ್ಲಿ ನೆಲೆಗೊಳ್ಳುವುದರೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿನ ಯಶೋಧರೆಯ ಪುಟ್ಟಪಾತ್ರವೇ ಮಾಸ್ತಿಯವರಲ್ಲಿ ಭವ್ಯ ವ್ಯಕ್ತಿತ್ವದ ಸ್ತ್ರೀಯಾಗಿ ಚಿತ್ರಣಗೊಂಡಿದೆ. ಮನಜ ಅವರ 'ಜಲ' ದಲ್ಲಿಯೂ ಸಿದ್ಧಾರ್ಥ ಸನ್ಯಾಸ ಸ್ವೀಕಾರಕ್ಕೆ ಬೆಂಬಲ ಸೂಚಿಸುವ ಯಶೋಧರೆ ತಾನು ಪರೋಕ್ಷವಾಗಿ ಸನ್ಯಾಸಿಯ ದೀಕ್ಷೆಯನ್ನು ಪಡೆಯುವ ಸಂದರ್ಭ ಮೂಡಿಬಂದಿದೆ. ಪುಟ್ಟಸ್ವಾಮಯ್ಯನವರ ಈ ಕೃತಿಯಲ್ಲಿ ಜನಪ್ರಿಯತೆಯ ತಂತ್ರವೂ ಮುಖ್ಯವಾಗಿರುವುದು. ಕಥಾ ವಿನ್ಯಾಸದಲ್ಲಿ ಹೆಚ್ಚಿನ ಸಂಕೀರ್ಣತೆ ಸಾಧ್ಯವಾಗಿಲ್ಲ.

ಮಾಸ್ತಿಯವರ ೫ ಸ್ಥಾನಗಳ ನಾಟಕ ಯಶೋಧರಾ ಈ ಹಿಂದಿನ ಕೃತಿಗಳಿಗಿಂತ ಭಿನ್ನವಾದುದು. ಸಿದ್ಧಾರ್ಥನು 'ಯಶೋಧರೆ' ಯನ್ನು ತೊರೆದ ನಂತರ ಆಕೆ ಅನುಭವಿಸುವ ವೇದನೆಯ ವರ್ಣನೆಯೊಂದಿಗೆ ಆರಂಭವಾಗುವ ನಾಟಕ ಕಪಿಲವಸ್ತುವಿಗೆ ಆಗಮಿಸಿದ ಬುದ್ಧ ಆಕೆಯನ್ನು ಕಂಡು ಅವಳ ಮನಕ್ಕೆ ಸಮಾಧಾನ ತರುವ ಸಾಂತ್ವನ ನುಡಿಗಳನ್ನಾಡಿ ಆಕೆಗೆ ಸನ್ಯಾಸ ದೀಕ್ಷೆ ನೀಡಲು ಒಪ್ಪುವುದರೊಂದಿಗೆ ಕೊನೆಯಾಗುತ್ತದೆ. ಆಯ್ದುಕೊಂಡ ವಸ್ತುವಿಗೆ ತಕ್ಕಂತೆ ಕಥನ ಕ್ರಮದಲ್ಲಿ ನಿರಂತರತೆಯಿದೆ. ನಾಟಕದಲ್ಲಿ ಯಶೋಧರೆಯೇ ಮುಖ್ಯವಾಗಿದ್ದು, ಅವಳ ಸುತ್ತಲ ಪಾತ್ರಗಳು ಅದಕ್ಕೆ ಪೂರಕವಾಗಿ ಕಾಣಿಸಿಕೊಳ್ಳುತ್ತವೆ. ಅಂಬಿಕೆ, ಆನಂದ, ಆಮ್ರಪಾಲಿ ಈ ಎಲ್ಲಾ ಪಾತ್ರಗಳು ಯಶೋಧರೆಗೆ ಬೆಂಬಲವಾಗಿ ನಿಲ್ಲುತ್ತವೆ. ನಾಟಕದ ನಡುವೆ ಕಾಣಿಸಿಕೊಳ್ಳುವ ಪುರಾಣ ವ್ಯಕ್ತಿಗಳಾದ ವಸಿಷ್ಠ, ಭಾರದ್ವಾಜ, ಕೌಂಡಿನ್ಯ, ಕೌಶಿಕರ ಪಾತ್ರಗಳು ಒಂದು ದಿವ್ಯ ದಾಂಪತ್ಯದ ಚರ್ಚೆಯಾಗಬಹುದಾಗಿದ್ದ 'ಯಶೋಧರ' ಕೃತಿಗೆ ಧರ್ಮದ ಚೌಕಟ್ಟನ್ನು ಒದಗಿಸಿಕೊಡುತ್ತವೆ. ಕೃತಿಯಲ್ಲಿ ಯಶೋಧರೆಯೇ ಕೇಂದ್ರವಾಗಿದ್ದರೂ ಬುದ್ಧನ ಪಾತ್ರವನ್ನು ಕಡೆಗಣಿಸಿಲ್ಲದಿರುವುದು ವಿಶೇಷವಾಗಿದೆ.

ಕಾರಂತರ 'ಬುದ್ಧೋದಯ' ಮತ್ತು 'ಕಿಸಾಗೋತಮಿ' ನಾಟಕಗಳಲ್ಲಿ ಒಂದು ಸಿದ್ಧಾರ್ಥನ ಸತ್ಯ ಸಾಕ್ಷಾತ್ಕಾರದ ಪೂರ್ವಚರಿತ್ರೆಯನ್ನು, ಮತ್ತೊಂದು ಆತನ ಆತ್ಮ ವಿಕಾಸದ ಸ್ಥಿತಿಯನ್ನು ಬಿಂಬಿಸುತ್ತದೆ. ಮೇಲ್ನೋಟಕ್ಕೆ ಇವೆರೆಡೂ ವಿಭಿನ್ನ ವಸ್ತುಗಳಂತೆ ಕಂಡು ಬಂದರೂ ಆಂತರ್ಯದಲ್ಲಿ ಎರಡರ ಉದ್ದೇಶ ಒಂದೇ ಆಗಿದೆ. ಹುಟ್ಟು, ಸಾವು, ನೋವು ಮೊದಲಾದ ಮೂಲಭೂತ ಸಮಸ್ಯೆಗಳು ಎಲ್ಲಾ ಮನುಷ್ಯರನ್ನು ಕಾಡುತ್ತವೆ. ಸಿದ್ಧಾರ್ಥನಿಗೆ ಕಂಡುಬಂದ ಈ ದೃಶ್ಯಗಳು ಆತ ಬುದ್ಧನಾಗಲು ಕಾರಣವಾಗುತ್ತವೆ. ಹಾಗೆ ಬುದ್ಧನಾದ ನಂತರ ಆತ ಈ ಸಮಸ್ಯೆಗಳಿಗೆ ಸಾಂತ್ವನದ, ಸತ್ಯದ ತಿಳಿವಿನ, ವಾಸ್ತವದ ಅರಿವಿನ ಪರಿಹಾರವನ್ನು ನೀಡುತ್ತಾನೆ. ಕಾರಂತರ 'ಕಿಸಾಗೋತಮಿ' ಯ ತಾಯಿ 'ಗೌತಮಬುದ್ಧ'ದಲ್ಲಿಯೂ ಕಾಣಿಸಿಕೊಂಡು ಮರಣ ಮನುಷ್ಯನಿಗೆ ಅನಿವಾರ್ಯ ... ದುಃಖದಲ್ಲಿ ತೊಳಲುವವರಿಗೆ ಧೈರ್ಯವೇ ಏಕಮಾತ್ರ ಅವಲಂಬನೆ' ಎಂಬ ಬೋಧನೆಯನ್ನು ಸಿದ್ಧಾರ್ಥನಿಂದ ಪಡೆಯುತ್ತಾಳೆ.

ಮಂಕಿನೊಳಗಾಡಿದ್ದೆ, ಕೂಸು ನನ್ನದು ಎಂದೆ!
ಯಾರೋ ಕೊಟ್ಟರು ಅದನು!
ಯಾರೋ ಕಿತ್ತರು ಅದನು!
ಅದಕೇಕೆ ಈ ಹಿಗ್ಗು, ಈಗೇಕೆ ಈ ಕುಗ್ಗು?
ಕನಸಿಗಾಗಳಲಾರೆ,
ಶವವ ಮರೆಮಾಡುತಲಿ
ಕನಸ ಮರೆಯುವ ತಂದೆ

ಎಂದು ಸಾವಿನ ಅನಿವಾರ್ಯತೆಯನ್ನು ಮನಗಾಣುತ್ತಾಳೆ

ಪ್ರಭುಶಂಕರರ ನಾಲ್ಕು ನಾಟಕಗಳ ಕಥಾ ಹಂದರ ವ್ಯಕ್ತಿ ಪ್ರಧಾನವಾಗಿರುವುದು ಗಮನಾರ್ಹ. ಬುದ್ಧನ ಜೀವನದ ಅಪೂರ್ವ ಸನ್ನಿವೇಶಗಳನ್ನು ಇವರ ಕಥಾ ವಿನ್ಯಾಸದಲ್ಲಿ ಕಾಣಬಹುದು. ಸಾಮಾನ್ಯ ವ್ಯಕ್ತಿಗಳು ಸಮಾಜದಿಂದ ತಿರಸ್ಕೃತರಾದವರು ಬುದ್ಧನ ಸಂಸರ್ಗದಿಂದ ಉದ್ಧಾರ ಕಂಡುಕೊಂಡಿದ್ದು ಬುದ್ಧನ ಹಿರಿಮೆಗೆ ನಿದರ್ಶನವಾಗಿದೆ. ನಾಟಕಕಾರರಿಗೆ ಸ್ತ್ರೀಪರ ಕಾಳಜಿಯಿರುವುದನ್ನು 'ಆಮ್ರಪಾಲಿ' ಮತ್ತು 'ಸುಜಾತ' ನಾಟಕದ ಶೀರ್ಷಿಕೆಯೇ ತಿಳಿಯಪಡಿಸುತ್ತದೆ. ಹಾಗೆಯೇ ಸಮಾಜದಲ್ಲಿ ಶೋಷಣೆಗೊಳಗಾದವರ,

ನೊಂದವರ, ದುರ್ಬಲರ ಪರವಾಗಿ ನಿಲ್ಲುವ, ಅವರಿಗಾಗಿ ಮಿಡಿಯುವ ಬುದ್ಧ ಇಲ್ಲಿ ಮಹತ್ವ ಪಡೆಯುತ್ತಾನೆ. ಆಮ್ರಪಾಲಿ, ಸುಜಾತ ಮತ್ತು ಅಂಗುಲೀಮಾಲ ಈ ಮೂರು ನಾಟಕಗಳಲ್ಲಿ ಕಥೆಯು ಮುಂದುವರೆದಂತೆಲ್ಲ ಅಲ್ಲಿನ ಮುಖ್ಯ ಪಾತ್ರಗಳು ಎಲ್ಲ ಬಂಧನಗಳನ್ನು ಮೀರಿ ಬೆಳೆಯುವಂತಹ ನಿರೂಪಣೆಯಿದೆ, ಹಾಗೆಯೇ 'ಗಾಳಿ ಎಂಬ ಕುದುರೆ ಏರಿ' ನಾಟಕದಲ್ಲಿ ರಾಗ-ವಿರಾಗದ ಹಾದಿಯನ್ನು ಅಗ್ನಿಮಿತ್ರ ಮತ್ತು ಸಿದ್ಧಾರ್ಥ ಪಾತ್ರಗಳ ಮೂಲಕ ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಈ ನಾಲ್ಕು ನಾಟಕಗಳ ಕಥಾ ವಿನ್ಯಾಸದಲ್ಲಿ ನಾಟಕಕಾರರ ಸೃಜನಶೀಲತೆ ಅಪೂರ್ವವಾಗಿ ಪಡಿಮೂಡಿರುವುದನ್ನು ಕಾಣಬಹುದು.

ಮನಜ ಅವರ 'ಜಲ' ಕಥಾವಿನ್ಯಾಸದ ಕಾರಣಕ್ಕೆ ವಿಶಿಷ್ಟವಾಗಿರುವಂಥದ್ದು. ಇದು ಬುದ್ಧನನ್ನು ಕುರಿತ ಅಜ್ಞಾತ ಕಥಾವಸ್ತು ಎಂದು ನಾಟಕಕಾರರು ಹೇಳಿದ್ದರೂ ಈ ಜಲವಿವಾದದ ವಿಚಾರ ಅಂಬೇಡ್ಕರ್ ಅವರಲ್ಲಿಯೇ ಪ್ರಸ್ತಾಪವಾಗಿತ್ತು.

'ಜಲ' ನಾಟಕದ ಕಥಾಹಂದರ ಒಂದು ರಾಜಕೀಯ ಷಡ್ಯಂತ್ರವನ್ನು ನಿರೂಪಿಸುವುದಾಗಿದೆ. ಇಡೀ ನಾಟಕ ಸಾಂಪ್ರದಾಯಿಕ ಬುದ್ಧನ ಚಿತ್ರಣವನ್ನು ನೀಡದೆ ಸಿದ್ಧಾರ್ಥನ ವೈರಾಗ್ಯಕ್ಕೆ ಹೊಸತೊಂದು ಆಯಾಮವನ್ನು ಕಲ್ಪಿಸುತ್ತದೆ. ಜೀವರಕ್ಷಣೆ, ಜಲರಕ್ಷಣೆ, ದೇಶದ ರಕ್ಷಣೆ ಈ ಮೂರು ಅಂಶಗಳು ನಾಟಕದ ಉದ್ದಕ್ಕೂ ಪ್ರಾಮುಖ್ಯವನ್ನು ಗಳಿಸಿಕೊಂಡಿರುವಂತೆ ಕಥಾ ವಿನ್ಯಾಸವಿದೆ.

ದೃಷ್ಟಿಧೋರಣೆಗಳು:

ಈ ಮೇಲಿನ ವಿಚಾರಗಳು ಕಥಾವಿನ್ಯಾಸಕ್ಕೆ ಸಂಬಂಧಿಸಿದ್ದರೆ ಕಥಾವಸ್ತುವನ್ನು ಹೊರತುಪಡಿಸಿ ಅಥವಾ ಕಥಾವಸ್ತುವಿನಲ್ಲೇ ಕೆಲವು ಮಾರ್ಪಾಡುಗಳನ್ನು ತರುವ ಮೂಲಕ ಲೇಖಕರು ತಮ್ಮ ದೃಷ್ಟಿ-ಧೋರಣೆ ಆಶಯಗಳನ್ನು ಬಿಂಬಿಸಿರುವುದನ್ನು ತಿಳಿಯಬಹುದು. ಯಾವುದೇ ಸಾಹಿತ್ಯ ಕೃತಿಯೊಂದು ತನ್ನನ್ನು ರೂಪಿಸಿದ ಲೇಖಕನ ಮನೋಧರ್ಮವನ್ನಾಗಲಿ, ಸಮಕಾಲೀನ ವಿಚಾರಗಳನ್ನಾಗಲೀ ಪ್ರತ್ಯಕ್ಷ ಪರೋಕ್ಷವಾಗಿ ಒಳಗೊಂಡೇ ತೀರುತ್ತದೆ. ಈ ಹಿನ್ನೆಲೆಯಲ್ಲಿ ಬುದ್ಧನ ಕುರಿತ ಈ ಹತ್ತು ನಾಟಕಗಳನ್ನು ವಿವೇಚಿಸಬಹುದು. ಈ ಕೃತಿಗಳು

ಕೇವಲ ಇತಿಹಾಸದ ವಿಚಾರಗಳನ್ನು ಮಾತ್ರ ಒಳಗೊಂಡಿದೆಯೇ ಅಥವಾ ಸಮಕಾಲೀನ ತುಡಿತಗಳಿಗೆ ಸ್ಪಂದಿಸಿದೆಯೇ ಎಂಬುದನ್ನು ತೌಲನಿಕವಾಗಿ ತಿಳಿಯಬಹುದು.

ಕುವೆಂಪು ಅವರ 'ಮಹಾರಾತ್ರಿ' ಸಿದ್ಧಾರ್ಥ ಬುದ್ಧನಾಗಲು ಹೊರಟ ರಾತ್ರಿಯ ಕಥಾನಕವನ್ನು ಒಳಗೊಂಡಿದ್ದು ಕುವೆಂಪು ಅವರಿಗೆ ಇಷ್ಟೇ ಮುಖ್ಯವಾಗುವುದಿಲ್ಲ. ಇದರೊಂದಿಗೆ ನಾಟಕ ಸಮಕಾಲೀನ ಭಾರತದ ಸ್ಥಿತಿ–ಗತಿಗಳನ್ನು ಪರೋಕ್ಷವಾಗಿ ಬಿಂಬಿಸುತ್ತದೆ. ಈ ಸಮಕಾಲೀನ ಸಮಾಜದ ಒತ್ತಡವೇ ಅವರ ಕೃತಿ ರಚನೆಗೆ ಕಾರಣವಾಗಿದೆ. ಪುರೋಹಿತಶಾಹಿಯ ಹಿಡಿತದಲ್ಲಿ ಸಿಕ್ಕಿ ನರಳುತ್ತಿರುವ ಭಾರತೀಯ ಸಮಾಜಕ್ಕೆ ಬಿಡುಗಡೆಯ ಪರ್ಯಾಯ ಮಾರ್ಗವಾದ ಬುದ್ಧ ಮಾರ್ಗದ ಕಡೆಗೆ ಯಾವುದೇ ಸೃಜನಶೀಲ ಪ್ರಗತಿಪರ ಮನಸ್ಸು ಒಲಿಯುವುದು ಚರಿತ್ರೆಯಲ್ಲಿ ಕಂಡುಬರುವ ಸಂಗತಿ ಅಂತೆಯೇ ವೇದಗಳ ಕರ್ಮಕಾಂಡವನ್ನು ವಿರೋಧಿಸುವ ಆ ಮೂಲಕ ಸಮಕಾಲೀನ ತರುಣ ಮನಸ್ಸುಗಳಿಗೆ ಪರ್ಯಾಯ ಚಿಂತನೆಯ ಸಾಧ್ಯತೆಯನ್ನೊದಗಿಸುವ ಕುವೆಂಪು ಅವರ ದೃಷ್ಟಿ ನಾಟಕದ ಆರಂಭದಲ್ಲಿಯೇ ಯಕ್ಷನ ಪಾತ್ರದ ಮೂಲಕ ಸ್ಪಷ್ಟವಾಗುತ್ತದೆ.

> ಯಜ್ಞಯಾಗಾದಿಗಳ
> ಹಿಂಸೆಯಲ್ಲಿ ಬೆಂದು, ಕೃತ್ರಿಮದ ವೈದಿಕರ
> ದಾಷ್ಟ್ಯದೊಳು ನೊಂದು, ಒಣವೇದ ಪಂಡಿತರ
> ವಾದದೊಳು ಮುಳುಮುಳುಗಿ ಗೋಳಿಡುವ ಭಾರತಿ!

ಯಕ್ಷನ ಈ ಮಾತು ಹಳೆಯ ಧರ್ಮವನ್ನು, ವ್ಯವಸ್ಥೆಯನ್ನು ವಿಡಂಬಿಸುವುದಾಗಿದೆ. ಬುದ್ಧ ತನ್ನ ಗೃಹತ್ಯಾಗದ ವಿಚಾರವನ್ನು ಚನ್ನನಲ್ಲಿ ಪ್ರಸ್ತಾಪಿಸಿದಾಗ 'ಏಕೆ ನನ್ನೊಡೆಯ ಇಲ್ಲಿ ಸೊಗಮಿಲ್ಲವೆ ನಿನಗೆ' ಎಂದು ಮುಗ್ಧವಾಗಿ ಪ್ರಶ್ನಿಸುತ್ತಾನೆ. ಚನ್ನನ ಪ್ರಶ್ನೆಗೆ ಸಿದ್ಧಾರ್ಥ ಹೀಗೆ ಉತ್ತರಿಸುತ್ತಾನೆ.

> ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ
> ಬೊಬ್ಬಿರಿಯುತಿಹುದಲ್ಲ, ಬೆಂದು ಬಡತನದಲ್ಲಿ
> ಮೌಢ್ಯಾಂಧಕಾರದೊಳು ಸಿಕ್ಕಿ ದಾರಿತಪ್ಪಿ

ಕಾಡುಪಾಲಾಗಿಹಳು, ಭಾರತಾಂಬೆಯು, ಚನ್ನ

ಕಾಡುಪಾಲಾಗಿಹಳು

"ಸಿದ್ಧಾರ್ಥ ಇಲ್ಲಿ ಭಾರತಾಂಬೆಯ ಸ್ಥಿತಿಯನ್ನು ಕುರಿತು ಹೇಳುತ್ತಿರುವ ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯು ತಪ್ಪಿ, ಕಾಡುಪಾಲಾಗಿಹಳು ಭಾರತಾಂಬೆ ಎಂಬ ಮಾತುಗಳು ನಿಸ್ಸಂದಿಗ್ಧವಾಗಿ ಸಮಕಾಲೀನ ಭಾರತೀಯ ಸಮಾಜವನ್ನು ನಿರ್ದಿಷ್ಟವಾಗಿ ಹೇಳಬೇಕಾದರೆ ಕುವೆಂಪುರವರು ಸಮಕಾಲೀನ ಸಂದರ್ಭವನ್ನು ಬಿಂಬಿಸುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿನ ಭಾರತಾಂಬೆಯ ಸ್ಥಿತಿಯನ್ನು ದೃಷ್ಟಿಸುತ್ತಿರುವ ಕವಿಯು ಪ್ರಯತ್ನವನ್ನು ಈ ಮೇಲಿನ ಮಾತುಗಳಲ್ಲಿ ಕಾಣಬಹುದು. ತಾನೊಬ್ಬ ಸುಖಿಯಾದರೇನಾಯ್ತು? ಬಡತನದಲ್ಲಿ ಬೆಂದು ನೋಯುತ್ತಿರುವ ಲೋಕಕ್ಕೆ ಸಮಾಧಾನ ತರುವ ಪ್ರಯತ್ನ ಸಿದ್ಧಾರ್ಥನದು. ಕುವೆಂಪುರವರ ಸಾಮಾಜಿಕ ಕಾಳಜಿ ಇಲ್ಲಿ ವ್ಯಕ್ತವಾಗಿದೆ".[೧] ಸಾಹಿತಿಯಾದವನಿಗೆ ಸಾಮಾಜಿಕ ಬದ್ಧತೆ ಇರಬೇಕೆಂಬ ನಿಲುವಿನ ಕುವೆಂಪು ಅವರ ಸಾಮಾಜಿಕ ಆಶಯಗಳೊಂದಿಗೆ ಮಹಾಪುರುಷನ ಉದಯಕ್ಕೆ ಹಂಬಲಿಸುತ್ತಿರುವ ಸಾಹಿತಿಯ ಮನಸ್ಸು ಇಲ್ಲಿ ವ್ಯಕ್ತವಾಗುತ್ತದೆ.

ಚೆನ್ನ, ಮಾರ, ರಾಲ ಮೊದಲಾದ ಪಾತ್ರಗಳ ಸೃಷ್ಟಿಯಲ್ಲಿ ಕುವೆಂಪು ಅವರ ಸೃಜನಶೀಲ ಪ್ರತಿಭೆ ರೂಪುಗೊಳ್ಳುವ ಕ್ರಮವನ್ನು ಗಮನಿಸಬಹುದು. ಈಗಾಗಲೆ ಇರುವ ಪಾತ್ರಗಳೊಂದಿಗೆ ಹೊಸ ಪಾತ್ರಗಳ ಪರಿಚಯದಲ್ಲಿ ನಾಟಕಕಾರರಿಗೊಂದು ಉದ್ದೇಶವಿದೆ. ಹೀಗಾಗಿ 'ರಾಲ' ನಂತಹ ಪುಟ್ಟ ಪಾತ್ರವೂ ಇಲ್ಲಿ ಮಹತ್ವದ್ದೇ. ಬುದ್ಧನಂತಹ ಮಹಾನ್ ವ್ಯಕ್ತಿಯನ್ನು ಲೋಕಕ್ಕೆ ನೀಡಿದ ಆ ಮಹಾರಾತ್ರಿಯ ಪ್ರತ್ಯಕ್ಷದರ್ಶಿಯಾಗಿದ್ದರೂ ಆ ಅಲೌಕಿಕ ಸನ್ನಿವೇಶವನ್ನು ಗ್ರಹಿಸುವಲ್ಲಿ ವಿಫಲನಾಗುತ್ತಾನೆ. 'ಲಾಯದಾಣೆಗೂ ಚನ್ನ, ಹಣವಂತರಿಗೆ ಹುಚ್ಚು' ಎಂಬ ಅವನ ಮಾತು ಸಿದ್ಧಾರ್ಥನ ಗೃಹತ್ಯಾಗಕ್ಕೆ ಅವನದೇ ಆದ ನೂತನ ವ್ಯಾಖ್ಯಾನದಂತಿದೆ.

ಹಾಗೆಯೇ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ರಚಿತವಾಗಿರುವ ಮಾರನ ಪಾತ್ರ ಭೋಗದಿಂದ ವಿರಾಗದ ಕಡೆಗೆ ಹೊರಟಿರುವ ಸಿದ್ಧಾರ್ಥನ ಮನಸ್ಸಿನ ಒಳತೋಟಿಯ ಪ್ರತೀಕದಂತಿದೆ. ಸಿದ್ಧಾರ್ಥನ ಅಂತರಂಗದ ತುಮುಲ, ಎಲ್ಲವನ್ನೂ ಕಡಿದುಕೊಂಡು ದೂರಾಗುವ

---

೧. ಕುವೆಂಪು ನಾಟಕಗಳ ಅಧ್ಯಯನ, ಡಾ: ನರಹಳ್ಳಿ ಬಾಲಸುಬ್ರಹ್ಮಣ್ಯ

ಮುನ್ನ ಆತ ಅನುಭವಿಸುವ ಯಾತನೆ, ಅವನಿಗೆದುರಾಗುವ ರಾಗದ ಪ್ರಲೋಭನೆ ಈ ಎಲ್ಲದರ ಪ್ರತಿರೂಪವೇ ಮಾರನ ಪಾತ್ರ.

ಒಟ್ಟಾರೆ ಇಡೀ ನಾಟಕ ಸಮಕಾಲೀನ ವಿಚಾರಗಳನ್ನೊಳಗೊಂಡ ಐತಿಹಾಸಿಕ ನಾಟಕವಾಗಿದೆ.

ಬಿ.ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ಬುದ್ಧನ ಜೀವನವನ್ನು ಇಡಿಯಾಗಿ ಚಿತ್ರಿಸುತ್ತದೆ. ಲೇಖಕರ ಮೇಲೆ ಗಾಂಧೀಜಿಯವರ ಪ್ರಭಾವವಿರುವುದನ್ನು ನಾಟಕದ ಆರಂಭದಿಂದಲೂ ಗುರುತಿಸಬಹುದು. ಗಾಂಧೀಜಿಯವರ ಅಹಿಂಸಾತತ್ವಕ್ಕೆ ಇಲ್ಲಿ ಒತ್ತು ನೀಡಲಾಗಿದೆ. ಇದು ಆರಂಭದಲ್ಲೇ ಸ್ಪಷ್ಟವಾಗುತ್ತದೆ. 'ಒಂದು ಜಿಂಕೆಯ ಮರಿಯನ್ನು ಕೊಲ್ಲಲಾರದವನು ನಾಳೆ ಶಾಕ್ಯರನ್ನಾಳುವುದು ಹೇಗೆ?' ಎಂಬ ದೇವದತ್ತನ ಮಾತು ಹಿಂಸೆಯ ಪರವಾಗಿದ್ದರೆ, ಪಾರಿವಾಳವನ್ನು ರಕ್ಷಿಸಿ ಅದಕ್ಕೆ ಜೀವದಾನ ಮಾಡುವ ಗೌತಮಬುದ್ಧಹಿಂಸೆಯ ವಿರುಧ್ಧವಾಗಿದ್ದಾನೆ. ಇಲ್ಲಿ ಗೆಲುವು ಅಹಿಂಸೆಯದ್ದೇ.

ಸಿದ್ಧಾರ್ಥ ಇಲ್ಲಿ ನೀಡಿದ ಅಹಿಂಸೆಯ ಸಂದೇಶವನ್ನು ಸನ್ಯಾಸ ಸ್ವೀಕಾರದ ನಂತರವೂ ಮುಂದುವರೆಸಿದ್ದನ್ನು, ಜೀವಸಹಿತವಾದ ಪ್ರತಿಯೊಂದು ಪ್ರಾಣಿಯ ದು:ಖವನ್ನು ಪರಿಹರಿಸುವೆನೆಂಬ ಪ್ರತಿಜ್ಞೆಯನ್ನು ನೆರವೇರಿಸಿದ್ದನ್ನು ಬಿಂಬಸಾರನ ಪ್ರಸಂಗದಲ್ಲಿ ಕಾಣಬಹುದು. ಸಂತಾನಾಪೇಕ್ಷೆಯಿಂದ ಪಶುವಧೆಯ ಯಾಗದಲ್ಲಿ ತೊಡಗಿರುವ ಬಿಂಬಸಾರನಿಗೆ 'ಮಾನವನ ದು:ಖಕ್ಕೆ ಹಿಂಸೆಯೇ ಮೂಲ ಮಗಧೇಶ್ವರ! ಹಿಂಸೆಯಿಂದ ಧರ್ಮ ರಕ್ಷಣೆಯಾಗುವುದಿಲ್ಲ' ಎಂದು ಹಿಂಸೆಯ ಭೀಕರತೆಯನ್ನು, ದಯೆಯ ಮಹತ್ವವನ್ನು ತಿಳಿಸುತ್ತಾನೆ ಸಿದ್ಧಾರ್ಥ. ಇದು ನಾಟಕಕಾರರ ಅಹಿಂಸಾಪರವಾದ ಧೋರಣೆಗೆ ನಿದರ್ಶನವಾಗಿದೆ. ಹಾಗೆಯೇ ಮೂರನೆಯ ಅಂಕದ ಪ್ರಥಮ ದೃಶ್ಯದಲ್ಲಿ ಬರುವ ಸಿದ್ಧಾರ್ಥನ ಶಿಷ್ಯರ ಪಾತ್ರಗಳು ಸಮಕಾಲೀನ ಸಂದರ್ಭದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯವನ್ನು ವಿಡಂಬಿಸುತ್ತದೆ.

ಗುಣಮಂಜರಿ, ವಾಸವದತ್ತ, ಯಶೋಧರೆಯ ಸ್ವಯಂವರವನ್ನು, ಸಿದ್ಧಾರ್ಥ ಯಶೋಧರೆಗೆ ಮನಸೋಲುವುದು, ನಂತರ ಅವನ ವಿವಾಹ ಮತ್ತು ದಾಂಪತ್ಯ ಜೀವನವನ್ನು ಚಿತ್ರಿಸುವ ಮೂಲಕ ನಾಟಕಕಾರರು ಭೋಗದ ತೀವ್ರ ಅನುಭವದಲ್ಲಿಯೂ ವೈರಾಗ್ಯದೆಡೆಗೆ

ವಾಲುವ ಅವನ ವ್ಯಕ್ತಿತ್ವವನ್ನು, ಸಿದ್ಧಾರ್ಥನದು ಅಭಾವ ವೈರಾಗ್ಯವಲ್ಲ, ಸ್ವಭಾವ ವೈರಾಗ್ಯವೆಂಬ ಚಿತ್ರವನ್ನು ಕಟ್ಟಿಕೊಡುತ್ತಾರೆ.

ಮಾಸ್ತಿಯವರ 'ಯಶೋಧರಾ' ನಾಟಕದಲ್ಲಿ ನಾಟಕಕಾರರ ಸ್ತ್ರೀಪರವಾದ ದೃಷ್ಟಿಕೋನ ಕೆಲಸ ಮಾಡಿರುವುದನ್ನು ಗಮನಿಸಬಹುದು. ನಾಟಕದ ಶೀರ್ಷಿಕೆ ಮತ್ತು ವಸ್ತು ಎರಡೂ ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಬುದ್ಧನ ಜೀವನದಲ್ಲಿ ಅವನ ಪೂರ್ವಾಶ್ರಮದ ಪತ್ನಿ ಯಶೋಧರೆಗೊಂದು ವಿಶಿಷ್ಟ ಸ್ಥಾನವಿದೆ. ಇತಿಹಾಸದಲ್ಲಿ ಅನಾದರಕ್ಕೊಳಗಾಗಿದ್ದ ಈ ಪಾತ್ರದ ಮಹತ್ವವನ್ನು ಗುರುತಿಸುವುದು ನಾಟಕಕಾರರ ಉದ್ದೇಶವಾಗಿದೆ. ಮನೋವೈಜ್ಞಾನಿಕ ನೆಲೆಯಲ್ಲಿ ಯಶೋಧರೆಯ ಮನಸ್ಸಿನ ದ್ವಂದ್ವಗಳನ್ನು ಚಿತ್ರಿಸುವ ನಾಟಕಕಾರರು ಮುಂದುವರೆದು ಪ್ರತಿಭಟನೆಯ ಸ್ಥೈರ್ಯವನ್ನು ಅವಳ ಪಾತ್ರಕ್ಕೆ ಕಲ್ಪಿಸಿಕೊಡುತ್ತಾರೆ. ಎಲ್ಲಾ ಸುಖದಿ ಜೊತೆ ನಡೆದವರು ಮುಕ್ತಿಯ ಸುಖದಿ ಒಬ್ಬರೇ ನಡೆದರಮ್ಮಾ' ಎಂದು ಪರಿತಪಿಸುವ ಯಶೋಧರೆ ಮುಕ್ತಿ ಮಾರ್ಗದಲ್ಲೂ ಹೆಣ್ಣಿಗೆ ಅವಕಾಶ ನೀಡಬೇಕೆಂದು ಸ್ತ್ರೀಪುರುಷರ ಸಮಾನತೆಯ ತತ್ವವನ್ನು ಪ್ರತಿಪಾದಿಸುತ್ತಾಳೆ. ಆರಂಭದಲ್ಲಿ ಮನೆಯ ಸುಟ್ಟು ಊರು ಬೆಳಗುವರೆಂದು ಬುದ್ಧನ ಮಾರ್ಗದ ಬಗ್ಗೆ ಅತೃಪ್ತಿ ವ್ಯಕ್ತಪಡಿಸುವ ಯಶೋಧರೆ ನಾಟಕದ ಅಂತ್ಯದ ವೇಳೆಗೆ ತನ್ನ ಸಂಸಾರವೆಂಬ ಸ್ವಂತದ ಸ್ವಾರ್ಥವನ್ನು ಮರೆತು ಇಡೀ ಸ್ತ್ರೀ ಕುಲಕ್ಕೆ ಬೆಳಕು ನೀಡುವ ಸಮಾನತೆ ದೊರಕಿಸಿಕೊಡುವ ಪ್ರಯತ್ನ ಮಾಡುತ್ತಾಳೆ. ಲೌಕಿಕ- ಅಲೌಕಿಕದಲ್ಲಿ ಹೆಣ್ಣಿನ ಪಾತ್ರ ಕುರಿತ ಅವಳ ಚಿಂತನೆ ಲೌಕಿಕವನ್ನು ಮೀರಿ ಬೆಳೆಯುವ ಅವಳ ಪ್ರಬುದ್ಧ ವ್ಯಕ್ತಿತ್ವದ ಪರಿಚಯ ನಾಟಕದ ಮೂಲ ಕಾಳಜಿಯಾಗಿದೆ.

ಸ್ತ್ರೀಯರಿಗೆ ದೀಕ್ಷೆ ನೀಡಲು ಸಾಧ್ಯವಿಲ್ಲವೆಂದು ಬುದ್ಧ ನಿರಾಕರಿಸಿದಾಗ ಮಾಸ್ತಿಯವರ ಸ್ತ್ರೀಪರ ನಿಲುವು ಮತ್ತು ಅವರ ಮೌಲ್ಯ ವಿವೇಚನೆ ದೃಷ್ಟಿ ಉದಾರವಾಗಿರುವುದು ಕಾಣುತ್ತದೆ. ಸ್ತ್ರೀಯರಿಗೆ ದೀಕ್ಷೆ ಕೊಟ್ಟರೆ ಧರ್ಮದ ಆಯುಷ್ಯದಲ್ಲಿ ಅರ್ಧ ಅಳಿಯುವುದು ಎಂದು ಬುದ್ಧ ಹೇಳಿದಾಗ 'ಈರ್ವರೂ ಮುಕ್ತವಾಗಲಿ ಅರ್ಧಯುಗವೇ ಸಾಕೆಂಬೆನು" ಎಂಬ ಯಶೋಧರೆಯ ಮಾತು ಅವಳ ದಿಟ್ಟತನವನ್ನು ಲೌಕಿಕ ಧಾರ್ಮಿಕಗಳೆರೆಡರಲ್ಲಿಯೂ ಹೆಣ್ಣಿನ ಹಕ್ಕನ್ನು ಎತ್ತಿಹಿಡಿಯುವ ಅವಳ ಛಲವನ್ನು ಪ್ರತಿನಿಧಿಸುತ್ತದೆ.

ಹೀಗೆ 'ಯಶೋಧರಾ' ನಾಟಕ ಪ್ರಾಚೀನ ಕಾಲದಿಂದಲೂ ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯನ್ನು, ಅವಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿರುವುದನ್ನು ಹೇಳುತ್ತಲೇ ಅದನ್ನು ಮೀರಿ ಬೆಳೆಯುವ ಅವಳ ವ್ಯಕ್ತಿತ್ವವನ್ನು ತೆರೆದಿಡುವ ಆಶಯವನ್ನು ಒಳಗೊಂಡಿದೆ.

ಕಾರಂತರ ಪ್ರಕಾರ ಪುರಾಣ ಕಥೆಗಳು ಭಾವನಾ ಲೋಕದ ಸತ್ಯಗಳೂ ಎಲ್ಲಾ ಕಾಲದ ಮಾನವನ ಕನಸನ್ನು ಪ್ರತಿನಿಧಿಸುವ ಗುಣವನ್ನು, ಸಾರ್ವಕಾಲಿಕ ಪ್ರಸ್ತುತತೆಯನ್ನು ಒಳಗೊಂಡವೂ ಆಗಿವೆ. ಹೀಗಾಗಿ ಕಾರಂತರು ಪುರಾಣವನ್ನೇ ಕಥಾವಸ್ತುವಾಗಿ ಆಯ್ಕೆಮಾಡಿಕೊಂಡರೂ ಅದನ್ನು ಸಮಕಾಲೀನ ಜಾಯಮಾನಕ್ಕೆ ಹೊಂದಿಸುವ ಪ್ರತಿಭೆಯ ಕೌಶಲ ಅವರದು. ಈ ಹಿನ್ನೆಲೆಯಲ್ಲಿ ಕಾರಂತರ ಎರಡು ನಾಟಕಗಳನ್ನು ಪರಿಶೀಲಿಸಬಹುದು. ಮನುಷ್ಯನನ್ನು ಎಲ್ಲ ಕಾಲಕ್ಕೂ ಕಾಡುವ ಮೂಲಭೂತ ಸಮಸ್ಯೆಗಳನ್ನು ಕುರಿತು ಚರ್ಚಿಸುವುದು ನಾಟಕಕಾರರ ಉದ್ದೇಶ. ಸಿದ್ಧಾರ್ಥ ಬುದ್ಧನಾಗಲು ಹೊರಟ ಸಂದರ್ಭ ಚಿತ್ರಣ 'ಬುದ್ಧೋದಯ' ದಲ್ಲಿದ್ದರೆ ಆತನ ಆತ್ಮವಿಕಾಸದ ಸಂದರ್ಭದಲ್ಲಿ ಲೋಕದ ಜನರ ಸಮಸ್ಯೆಗೆ ಪರಿಹಾರ ನೀಡಿದ ವಿಚಾರ 'ಕಿಸಾಗೋತಮಿ'ಯಲ್ಲಿದೆ.

ಜೀವನ ನಶ್ವರ, ದೇಹ ಅಶಾಶ್ವತ, ಅದು ಸಾವು-ನೋವು ರೋಗರುಜಿನಗಳ ತವರು ಎಂದು ತಿಳಿದರೂ ಅದರ ವ್ಯಾಮೋಹಕ್ಕೆ ಒಳಗಾಗಿ ನರಳುವ ಅನಿವಾರ್ಯತೆಯನ್ನು ಧ್ವನಿಸುತ್ತಲೇ ಈ ಎಲ್ಲಾ ಸಮಸ್ಯೆಗೆ ಪರಿಹಾರ ನೀಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಸ್ವಹಿತವನ್ನು ತ್ಯಜಿಸಿ ಹೊರಡುವ ಮಹಾನ್ ಚೇತನದ ಉದಯವನ್ನು ಸಾರುವುದು. ಕಾರಂತರ ಆಶಯವಾಗಿದೆ. ಹಾಗೆಯೇ ಬುದ್ಧ ತಾನು ಕಂಡುಕೊಂಡ ಸತ್ಯದಿಂದ ಸಾವು-ನೋವಿನ ಅನಿವಾರ್ಯತೆಯನ್ನು ಮನದಟ್ಟು ಮಾಡುವುದು ಕಾರಂತರ ಧೋರಣೆಯಾಗಿದೆ. 'ಬುದ್ಧೋದಯ'ದಲ್ಲಿ ಕಾರಂತರ 'ರಾಹುಲ'ನ ಪಾತ್ರ ನಿರೂಪಣೆಯಲ್ಲಿ ಹೊಸತನ ತಂದಿದ್ದು ಅದು ಸಿದ್ಧಾರ್ಥನ ಬದುಕಿನಲ್ಲಿ ಹೊಸ ತಿರುವಿಗೆ ಕಾರಣವಾಗಿರುತ್ತದೆ. ಸಿದ್ಧಾರ್ಥನ ವೈರಾಗ್ಯ ಭಾವ ಹೊರಗೆಲ್ಲೋ ಮೂಡದೆ ಮನೆಯಲ್ಲೇ ಅವನ ಮಗನಿಂದಲೇ ಮೂಡಿತೆನ್ನುವುದು ಕಾರಂತರ ದೃಷ್ಟಿಯಾಗಿದೆ. 'ಗೌತಮಬುದ್ಧ' ದ ಸಿದ್ಧಾರ್ಥ ಪುತ್ರೋದಯದ ವಿಚಾರ ತಿಳಿದು ತೀವ್ರ ವಿಷಾದದಿಂದ 'ನನ್ನ ಜೀವನ ಸೂರ್ಯನನ್ನು ಹಿಡಿದ ರಾಹುಗ್ರಹವು ಶಿಶುರೂಪದಿಂದ ಜನಿಸಿರುವುದೇ! ರಾಹುಲ ನನ್ನ ಆತ್ಮ ವಿಕಾಸನಕ್ಕೆ ಆತಂಕ ಸ್ವರೂಪನೇ! ಎಂದು ಪ್ರಲಾಪಿಸುತ್ತಾನೆ. ಬುದ್ಧೋದಯದಲ್ಲಿ

ಇದಕ್ಕೆ ಪೂರ್ಣ ವ್ಯತಿರಿಕ್ತವಾಗಿ ಅದೇ ರಾಹುಲ ಸಿದ್ಧಾರ್ಥನ ಆತ್ಮ ವಿಕಾಸಕ್ಕೆ ಬಯಲಾ ದಾಟುವಾ ಜಗವಾ ಸುತ್ತುವ ಎಂಬ ಮಾತಿನಿಂದ ಪ್ರೇರಣೆಯನ್ನೊದಗಿಸುವುದು ಕಾರಂತರ ವಿಶಾಲ ದೃಷ್ಟಿಗೆ ನಿದರ್ಶನವಾಗಿದೆ.

ಈಗಾಗಲೇ ಸಿದ್ಧಾರ್ಥ ಬುದ್ಧನಾದ, ಬುದ್ಧನಾಗಲು ಕಾರಣವಾದ ವಿಚಾರಗಳನ್ನು ಕುರಿತು ಹಲವು ಕೃತಿಗಳು ರಚಿತವಾಗಿದ್ದು, ಬುದ್ಧನ ಪೂರ್ವಚರಿತ್ರೆಯ ಬದಲಾಗಿ ಆತನ ಉತ್ತರ ಚರಿತ್ರೆಯನ್ನು, ಅವನ ಸಾಧನೆಯ ನಂತರದ ತತ್ವಬೋಧನೆಯ ಪ್ರಭಾವಕ್ಕೊಳಗಾದ ವ್ಯಕ್ತಿಗಳನ್ನು ಪರಿಚಯಿಸುವುದು, ಪ್ರಭುಶಂಕರರ ಉದ್ದೇಶವಾಗಿದೆ. ಅವತಾರ ಪುರುಷನೊಬ್ಬ ತನ್ನ ಪ್ರಭಾವದಿಂದ ಪತಿತರನ್ನು ಉದ್ಧರಿಸುವುದನ್ನು ಚಿತ್ರಿಸುವುದು ನಾಟಕಕಾರರ ಆಶಯ.

ಅಂಗುಲೀಮಾಲ ಮತ್ತು ಆಮ್ರಪಾಲಿ ನಾಟಕಗಳಲ್ಲಿ ಬುದ್ಧನ ವ್ಯಕ್ತಿತ್ವ ಮತ್ತು ಉಪದೇಶಗಳನ್ನು ಚಿತ್ರಿಸಿರುವುದರ ಜೊತೆಗೆ ಆಮ್ರಪಾಲಿ ಭೋಗದಿಂದ ವೈರಾಗ್ಯದ ಕಡೆಗೆ ಸಾಗುವುದನ್ನು ವಿವಿಧ ನೆಲೆಯಲ್ಲಿ ನಿರೂಪಿಸಲಾಗಿದೆ. 'ಸುಜಾತ' ನಾಟಕದಲ್ಲಿ ಸಿದ್ಧಾರ್ಥನು ಬುದ್ಧ ನಾಗುವ ಅಂತಿಮ ಘಟ್ಟದಲ್ಲಿ ಸುಜಾತಳು ಕೊಟ್ಟ ಪಾಯಸವನ್ನು ಸ್ವೀಕರಿಸಿ ಪ್ರಾಣಧಾರಣ ಮಾಡಿಕೊಂಡು ಅವಳಿಗೆ ಮೊದಲು ಉಪದೇಶ ಮಾಡುವುದನ್ನು ಗಮನಿಸಬಹುದು. 'ಗಾಳಿ ಎಂಬ ಕುದುರೆ ಏರಿ'ಯಲ್ಲಿ ಸಿದ್ಧಾರ್ಥನ ಸ್ವಭಾವಕ್ಕೆ ವೈರುಧ್ಯದಿಂದ ಕೂಡಿದ ಅಗ್ನಿಮಿತ್ರನ ಪಾತ್ರಸೃಷ್ಟಿಯ ಮೂಲಕ ಸಾಧಕರಿಬ್ಬರ ಮನಸ್ಥಿತಿಯನ್ನು ಮುಖಾಮುಖಿಯಾಗಿಸುವುದು ಪ್ರಮುಖ ಧೋರಣೆಯಾಗಿದೆ. ಹಾಗೆಯೇ ಅಗ್ನಿಮಿತ್ರನ ಪತ್ನಿ ವಾಸ್ತವದ ನೆಲೆಗಟ್ಟಿನ ಜೀವನ ಚಿಂತನೆಯ ಪ್ರತೀಕವಾಗಿರುವುದು ಅಲ್ಲಿನ ವಿಶೇಷ,

ಒಟ್ಟಾರೆಯಾಗಿ ಯಾವುದೇ ವ್ಯಕ್ತಿ ಹುಟ್ಟುತ್ತಲೇ ದುಷ್ಟನಾಗಿರುವುದಿಲ್ಲ ಆತ ಪರಿಸ್ಥಿತಿಯ ಕೂಸು ಎಂಬುದನ್ನು, ಯಾವುದೋ ದಿವ್ಯಶಕ್ತಿ ಆತನಲ್ಲಿ ಬದಲಾವಣೆ ತರಬಹುದು ಎಂಬುದನ್ನು ತಿಳಿಸುವುದು ಪ್ರಭುಶಂಕರರ ದೃಷ್ಟಿಯಾಗಿದೆ.

ಮನಜ ಅವರ 'ಜಲ' ಸಿದ್ಧಾರ್ಥನ ವೈರಾಗ್ಯ ಸ್ವೀಕಾರಕ್ಕೆ ಜಲವಿವಾದದಂತಹ ಹೊಸತೊಂದು ಆಯಾಮವನ್ನು ನೀಡುತ್ತಾರೆ. ನಾಟಕಕಾರರ ಈ ಬದಲಾವಣೆಯಲ್ಲಿ ವ್ಯವಸ್ಥೆಯನ್ನು ವಿರೋಧಿಸುವ ಮತ್ತು ಅದನ್ನು ಬದಲಾಯಿಸಬೇಕೆಂಬ ತುಡಿತವಿರುವುದನ್ನು ಗಮನಿಸಬಹುದು. ರಣತುಂಗನಿಗೆ ಕ್ರೀಡಾಕೂಟದಲ್ಲಿ ಪ್ರಾಣಿ ಬೇಟೆ ಸಲ್ಲದು ಎಂಬ ವಿಚಾರವನ್ನು

ತಿಳಿಸಿದಾಗ ಆತ 'ಬೇಟೆ ಆಡದೆ ಹೋಗೋದು ಕ್ಷತ್ರಿಯ ಧರ್ಮಕ್ಕೆ ಅವ್ಮಾನ ಅಲ್ವೇ? ಎಂದಾಗ 'ಬೇಟೆ ನಿಮಗೆ ಮಾನ, ಅವ್‌ಮಾನದ್ ಪ್ರಶ್ನೆ. ಆದರೆ ಮುಗ್ಧ ಪ್ರಾಣಿಗಳಿಗೆ ಬದುಕು ಸಾವಿನ ಪ್ರಶ್ನೆ. ಈ ಬಗ್ಗೆ ಹೊಸ ಪೀಳಿಗೆಗೆ ಸೇರಿದ ನಿನ್ನಂಥವರಾದ್ರೂ ಕೊಂಚ ಬೇರೆ ಥರ ಯೋಚಿಸದ್ ಬೇಡವೇ?' ಎನ್ನುವ ಗೌತಮನ ಮಾತು, ಯುವರಾಜನಾಗಿದ್ದ ಆತ ಜನಸಾಮಾನ್ಯರೊಂದಿಗೆ ಬೆರೆಯುವ ರೀತಿ ಇದೆಲ್ಲವೂ ಬಂಡಾಯದ ನೆಲಗಟ್ಟಿನ ನಾಟಕಕಾರರ ಹೊಸ ವ್ಯವಸ್ಥೆಯ ಹಂಬಲವನ್ನು ವ್ಯಕ್ತಪಡಿಸುತ್ತವೆ. ದೇವದತ್ತನ ಪಾರಿವಾಳ ಬೇಟೆಯ ಸಂದರ್ಭ ಮತ್ತು ಕೋಲಿಯದೊಂದಿಗೆ ಯುದ್ಧ ಮಾಡದೆ ಮಾತುಕತೆ ಮೂಲಕ ವಿವಾದ ಬಗೆಹರಿಸಿಕೊಳ್ಳಬೇಕೆಂಬ ಸಂದರ್ಭದಲ್ಲಿ ಗೌತಮ ತಳೆಯುವ ನಿಲುವು ಸಮಾಕಾಲೀನ ಜಗತ್ತಿಗೆ ಅವಶ್ಯಕವಾಗಿ ಬೇಕಾದ ಶಾಂತಿಯ ಸಂದೇಶವನ್ನು ಪ್ರತಿಪಾದಿಸುತ್ತದೆ. ಹಾಗೆಯೇ ವಿಷ್ಣುಗುಪ್ತನಂತಹವರು 'ಸಮಾಜ್ದಲ್ಲಿ ಯಾರ್‍ಯಾರು ಎಲ್ಲೆಲ್ಲಿರಬೇಕೊ ಅಲ್ಲಲ್ಲಿರೋದೆ ಸಮಾಜಕ್ಕೆ ಸುರಕ್ಷಿತವಾದ್ದು. ಅದು ಬಿಟ್ಟು ಮೂಲೇಲಿರ್ಬೇಕಾದ್ ಪದಾರ್ಥನ ಗದ್ದುಗೆ ಮೇಲಾಗ್ಲಿ, ಗದ್ದುಗೆ ಮೇಲಿರ್ಬೇಕಾದ್ ಪದಾರ್ಥನ ಮೂಲೇಲಾಗ್ಲಿ ಹಾಕೋದುಂಟೆ? ಎನ್ನುವ ಮಾತುಗಳು ವ್ಯವಸ್ಥೆಯ ಪರವಾಗಿದ್ದರೆ ಚಾಂಡಾಲ ಕುಲದ ಚನ್ನನನ್ನು ಸಿದ್ಧಾರ್ಥ ಸಾರಥಿಯನ್ನಾಗಿರಿಸಿಕೂಂಡಿದ್ದನ್ನು ಮಾಯಿ ಪ್ರಜಾಪತಿ 'ಸಿದ್ಧಾರ್ಥನಿಗೆ ಚೆನ್ನ ಅಮ್ಮನಿಗಿಂತಲೂ ಚೆನ್ನ' ಅಂದಿದ್ದನ್ನು ವಿಷ್ಣುಗುಪ್ತನಿಗೆ ನೆನಪಿಸುವ ಕವಿ ಸತ್ಯಕೀರ್ತಿಯ ಮಾತುಗಳು ಸಿದ್ಧಾರ್ಥನಿಂದ ವ್ಯವಸ್ಥೆ ಬದಲಾಗುತ್ತಿರುವುದನ್ನು ಸೂಚ್ಯವಾಗಿ ಧ್ವನಿಸುತ್ತದೆ. ಇಡೀ ನಾಟಕ ಸಮಕಾಲೀನ ರಾಜಕೀಯ ಸಂದರ್ಭವನ್ನು ವಿಡಂಬಿಸುತ್ತಲೇ ಬದಲಾವಣೆಯನ್ನು ಪ್ರತಿನಿಧಿಸುತ್ತದೆ.

ಒಟ್ಟಾರೆಯಾಗಿ ಈ ಎಲ್ಲಾ ಲೇಖಕರು ತಮ್ಮದೇ ಆದ ದೃಷ್ಟಿ ಧೋರಣೆಗಳನ್ನು ನಾಟಕಗಳಲ್ಲಿ ಅಭಿವ್ಯಕ್ತಿಸುವುದನ್ನು ಕಾಣಬಹುದು.

ತಂತ್ರ ಮತ್ತು ರಂಗಭೂಮಿಯಲ್ಲಿ ಈ ನಾಟಕಗಳ ಸಾಧನೆ:

ಯಾವುದೇ ಒಂದು ಕೃತಿಯ ಮೌಲ್ಯ ನಿರ್ಣಯ ಮಾಡುವಲ್ಲಿ ಕೃತಿ ಧ್ವನಿಸುವ ಜೀವನ ಮೌಲ್ಯಗಳು, ಕಲಾಕಾರನ ಜೀವನ ದೃಷ್ಟಿಗಳನ್ನು ಕೃತಿಯ ಸತ್ವದ ನಿರ್ಣಯದಲ್ಲಿಯೂ ಕೃತಿಯಾಗಿ ಅದರ ಸಾಧನೆ – ವೈಫಲ್ಯಗಳನ್ನು ತಂತ್ರದ ದೃಷ್ಟಿಯಿಂದಲೂ ಗಮನಿಸಬೇಕಾಗುತ್ತದೆ. ಪ್ರತಿಯೊಬ್ಬ

ಲೇಖಕನೂ ತಂತ್ರಗಳಿಂದಲೇ ಜನಪ್ರಿಯನಾಗಲು ಪ್ರಯತ್ನಿಸದಿದ್ದರೂ ಕೆಲವೊಮ್ಮೆ ತಂತ್ರವೇ ಯಶಸ್ಸಿಗೆ ಮತ್ತು ವಿಫಲತೆಗೆ ಕಾರಣವಾಗಬಹುದು. ಆದ್ದರಿಂದ ತಂತ್ರ ಕೃತಿಯ ಒಂದು ಭಾಗವೇ ಹೊರತು ಕೃತಿಯನ್ನಳೆಯುವ ಮಾನ ದಂಡವಲ್ಲ. ತಂತ್ರದ ದೃಷ್ಟಿಯಿಂದ ಈ ಎಲ್ಲಾ ನಾಟಕಗಳನ್ನು ವಿಶಿಷ್ಟವಾಗಿರುವುದನ್ನು ಇಲ್ಲಿ ವಿವೇಚಿಸಲಾಗಿದೆ.

ಕುವೆಂಪು ಅವರ ಮಹಾರಾತ್ರಿ ಪಾತ್ರ ಮತ್ತು ದೃಶ್ಯ ಸಂಯೋಜನೆಗಳ ದೃಷ್ಟಿಯಿಂದ ಅನೇಕ ತಂತ್ರಗಳನ್ನು ಒಳಗೊಂಡಿದೆ. ನಾಟಕದ ಆರಂಭದಲ್ಲಿಯೇ ಕಾಣಿಸಿಕೊಳ್ಳುವ ಯಕ್ಷ, ಕಿನ್ನರ, ಗಂಧರ್ವರು ಬ್ರಹ್ಮಾಂಡವನ್ನು ಸಂಬೋಧಿಸಿ...

ಇದು ಮಹಾರಾತ್ರಿ; ಸಿದ್ಧಾರ್ಥ ಬುದ್ಧನಾ
ಗುವ ರಾತ್ರಿ; ಸಗ್ಗದೊಲವಿಳೆಗಿಳಿವ ರಾತ್ರಿ!
ಜೀವಜ್ಯೋತಿಯದೊಂದು ಧರೆಯ ಮೇಲ್ಯೆತಂದು
ಬುದ್ಧ ರೂಪದಿ ನಿಂದು ಮೈದೋರುವುದು ಇಂದು!
ವೈರಾಗ್ಯ ಮಾರನಂ ಸೋಲಿಸುವುದಿಂದು ;
ಸತ್ಯಮಿಥ್ಯೆಯನೊದೆವುದಿಂದು !

ಎಂದು ಬುದ್ಧನ ಉದಯವನ್ನು ಸಾರುತ್ತವೆ. ೧೦ ದೃಶ್ಯಗಳ ನಾಟಕದಲ್ಲಿ ಪೀಠಿಕಾ ಮತ್ತು ಉಪಸಂಹಾರ ದೃಶ್ಯಗಳಿದ್ದು ಪರಸ್ಪರ ಸಂಬಂಧವನ್ನು ಸಾಧಿಸುತ್ತದೆ. ದೃಶ್ಯ ಸಂಯೋಜನೆಯಲ್ಲಿ ನಾಟಕ ಏಕಾಂಕದಂತೆ ಕಂಡು ಬಂದು ನಿರಂತರವಾದ ಘಟನಾವಳಿಗಳ ಕ್ರಮವಿದೆ. ಇಡೀ ನಾಟಕದಲ್ಲಿ ಸಿದ್ಧಾರ್ಥನ ಹೊಯ್ದಾಟ ಮಾರ್ಮಿಕವಾಗಿದ್ದು ಅದಕ್ಕೆ ಮನೋವಿಶ್ಲೇಷಣಾತ್ಮಕ ಹಿನ್ನೆಲೆಯಿರುವುದು ವಿಶಿಷ್ಟವಾಗಿದೆ. ಮಾರ ಮತ್ತು ರಾಲ ಪಾತ್ರಗಳ ನಿರ್ಮಾಣವೂ ನಾಟಕಕಾರರ ತಂತ್ರವಾಗಿದ್ದು ಅವು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತವೆ.

ಬಿ.ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ಜನಪ್ರಿಯ ನಾಟಕಕಾರರಾಗಿದ್ದು ಇದಕ್ಕೆ ರಂಗ ಪ್ರದರ್ಶನದ ಉದ್ದೇಶವೂ ಇರುವುದರಿಂದ ಹಲವು ಜನಪ್ರಿಯ ತಂತ್ರಗಳು ಇಲ್ಲಿವೆ. ಹಾಗಾಗಿ ಬುದ್ಧನ ಇಡೀ ಜೀವನವನ್ನು ಕಟ್ಟಿಕೊಡುವ ಲೇಖಕರು ನಾಟಕದ ಘಟನಾವಳಿಗಳ ಅನುಕ್ರಮ ವಾಚಕರಿಗೆ ಸ್ಪಷ್ಟವಾಗಬೇಕೆಂಬ ಉದ್ದೇಶದಿಂದ ಕಾಲದ ಅಂತರವಿಲ್ಲದೆ ಒಂದಾದ ಮೇಲೆ

ಒಂದರಂತೆ ಬೇರೆ ಬೇರೆ ಸ್ಥಳಗಳಲ್ಲಿ ನಡೆಯುವ ಘಟನೆಗಳನ್ನು ಒಂದೇ ದೃಶ್ಯದಲ್ಲಿ ಸೇರಿಸುವ ತಂತ್ರವನ್ನು ಅನುಸರಿಸುತ್ತಾರೆ. ಹಾಗಾಗಿ ನಾಟಕಕ್ಕೆ ಒಂದು ನಿರಂತರತೆ ಪ್ರಾಪ್ತವಾಗಿದ್ದು ರತಿ-ಮನ್ಮಥ, ಗಂಗಾ-ಗೌತಮಿ ಮೊದಲಾದ ಪಾತ್ರಗಳು ನಾಟಕಕ್ಕೆ ಅತಿಮಾನುಷತೆ ತಂದುಕೊಟ್ಟು ರಂಜನೀಯವಾಗಿವೆ. ಕುವೆಂಪು ಅವರಂತೆಯೇ ಇವರೂ ಈ ಪಾತ್ರಗಳ ಸೃಷ್ಟಿಯ ಮೂಲಕ ಒಂದು ಅಲೌಕಿಕ ಸನ್ನಿವೇಶವನ್ನು ನಿರ್ಮಿಸಿಕೊಡುತ್ತಾರೆ. ಈ ಪಾತ್ರಗಳ ಪ್ರವೇಶ ಮಾತ್ರದಿಂದಲೇ ಸಿದ್ಧಾರ್ಥನ ಮನಸ್ಸಿನ ಹೊಯ್ದಾಟವನ್ನು ಚಿತ್ರಿಸುವ ತಂತ್ರವನ್ನು ಅನುಸರಿಸಿದ್ದಾರೆ. ಹಾಗೆಯೇ ಕನಸಿನ ಪ್ರತಿಮೆಯ ತಂತ್ರವನ್ನು ಬಳಸಿಕೊಂಡಿದ್ದಾರೆ. ಸಿದ್ಧಾರ್ಥನು ದೂರಾಗುವ ಮುನ್ನ ಯಶೋಧರೆ ಕಾಣುವ ಕನಸು, ಬುದ್ಧೋದಯಕ್ಕೆ ಪೂರ್ವದಲ್ಲಿ ಸುಜಾತೆ ಕಾಣುವ ಕನಸು ನಾಟಕಕ್ಕೆ ವಿಶೇಷ ಅರ್ಥ ತಂದುಕೊಟ್ಟಿವೆ. ಆದರೂ ಕೆಲವೊಮ್ಮೆ ಇಲ್ಲಿನ ಪಾತ್ರಗಳು ಭಾವಾತಿರೇಕಕ್ಕೆ ಒಳಗಾಗುತ್ತವೆ. ಇದಕ್ಕೆ ಸಿದ್ಧಾರ್ಥನ ಪಾತ್ರವೂ ಹೊರತಲ್ಲ. ರಾಹುಲನ ಜನನದ ಸಂದರ್ಭದಲ್ಲಿ ಆತ ಪ್ರತಿಕ್ರಿಯಿಸುವ ರೀತಿ ಅವನ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ. ಇಂಥದ್ದೇ ಸಂದರ್ಭ ಕುವೆಂಪು ಅವರ 'ಮಹಾರಾತ್ರಿ'ಯಲ್ಲಿ ಸಿದ್ಧಾರ್ಥನ ಗೃಹತ್ಯಾಗದ ಸನ್ನಿವೇಶದಲ್ಲಿ ಕಂಥಕನಿಗೆ ಆತ ಹೇಳುವ ಮಾತುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಒಟ್ಟಾರೆ ಬಿ.ಪುಟ್ಟಸ್ವಾಮಯ್ಯನವರ ಗುರಿ ಜನಪ್ರಿಯ ನಾಟಕ ರಚನೆಯಾಗಿರುವುದರಿಂದ ಜನಪ್ರಿಯ ತಂತ್ರಗಳನ್ನು ಅನುಸರಿಸಿದ್ದು ನಾಟಕಕ್ಕೆ ಸಂಕೀರ್ಣತೆ ಸಿದ್ದಿಸಿಲ್ಲ. ರಂಗ ಪ್ರದರ್ಶನದ ದೃಷ್ಟಿಯಿಂದ ನಾಟಕದ ಕೆಲಭಾಗ ಪದ್ಯರೂಪದಲ್ಲಿರುವುದು ವಿಶಿಷ್ಟವಾಗಿದೆ.

ಮಾಸ್ತಿಯವರ ೫ ಸ್ಥಾನಗಳ ನಾಟಕ ಯಶೋಧರಾ ನಾಂದಿಗೀತದಿಂದ ಆರಂಭವಾಗಿ ಭರತವಾಕ್ಯದಿಂದ ಮುಕ್ತಾಯಗೊಳ್ಳುವುದು. ಕಥನಗೀತದ ರೀತಿ ಸಾಗುವ ನಾಟಕದಲ್ಲಿ ಪ್ರತಿಮೆಗಳು, ರೂಪಕಗಳು, ಉಪಮಾನಗಳು ಚಿತ್ರವತ್ತಾದ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ನಿರ್ಮಿಸುತ್ತವೆ. ಇಲ್ಲಿಯೂ ಕನಸಿನ ಪ್ರಸ್ತಾಪವಿದೆ. ಪತಿಯಿಂದ ದೂರವಾದ ಯಶೋಧರೆ ಮಗನನ್ನು ಕಳೆದುಕೊಳ್ಳುವ ಭೀತಿ ವ್ಯಕ್ತಪಡಿಸುವ ಸಂದರ್ಭದಲ್ಲಿ ಈ ಪ್ರತಿಮೆಯನ್ನು ಗಮನಿಸಬಹುದು.

ಒಂದು ಹಿರಿಯಾಲದಡಿಯಲಿ ಸೊಗಸ ತಾಣದಲಿ
ನಿಂದೆನೊಂದರೆನಿಮಿಷ. ನನ್ನ ಬದಿಯಲಿ ವೃಕ್ಷ

ಒಂದು ಬೀಳಲನು ಬಿಟ್ಟು ದೂರ ಸರಿಯಿತು ತಾಯಿ
ಬಿಳಲ ನೋಡುವ ಭರದಿ ಮರ ಸರಿದುದರಿಯದೆ
ನಾನಿತ್ತಲೇ ಮನವ ನೆಟ್ಟು ಕೌತುಕದಿಂದ
ಕುಡಿ ತಳಿರ ನೋಡಿ ಮೆಯ್ ಸವರಿ ಆಹಾ ಎಷ್ಟು
ಬೆಂದವಾಗಿಹುದು ಎನ್ನುತಲಿರಲು...
ದೂರಸರಿದಿರ್ದ ಮರ
ಒಂದು ಕೈ ನೀಡಿ ಎಳೆಯನಿಗೆ ಸನ್ನೆಯ ಮಾಡಿ
ಬಾ ಎಂದು ಕರೆಯುತಿತ್ತು.

ಇಲ್ಲಿಯವರೆಗೆ ಈ ಪ್ರತಿಮೆ ಯಶೋಧರೆಯ ಮಾನಸಿಕ ಒಳತೋಟಿಯನ್ನು ಸಶಕ್ತವಾಗಿ ಬಿಂಬಿಸುತ್ತದೆ.

ರಂಗಭೂಮಿಯ ಬಗೆಗೆ ಆಳವಾದ ಚಿಂತನೆ ನಡೆಸಿರುವ ಕಾರಂತರು ತಮ್ಮ ಚಿಂತನೆಯ ಪ್ರಯೋಗವನ್ನು ನಾಟಕಗಳ ಮೂಲಕ ಮಾಡಿಸಿದ್ದಾರೆ. ಕಾರಂತರ ನಾಟಕಗಳು ಘಟನಾ ಪ್ರಧಾನವಾಗಿದ್ದು ವಾಸ್ತವಕ್ಕೆ ಹತ್ತಿರವಾಗಿವೆ. ಎರಡೂ ನಾಟಕಗಳು ಆಕಾರದಲ್ಲಿ ಕಿರಿದಾಗಿದ್ದರೂ ಅರ್ಥದಲ್ಲಿ ಹಿರಿದಾಗಿವೆ, ಗಂಭೀರವಾಗಿದೆ. ಹಿರಿದಾದ ಭಾವವನ್ನು ಕಿರಿದಾಗಿ ಹಿಡಿದಿರುವ ಈ ಪ್ರಯತ್ನವೂ ಒಂದು ತಂತ್ರವಾಗಿದೆ. 'ಕಿಸಾಗೋತಮಿ'ಯ ೪ ದೃಶ್ಯಗಳಲ್ಲಿ ಸಿದ್ಧಾರ್ಥನ ಮನಃಪರಿವರ್ತನೆಯ ವಿಚಾರವನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ.

ಪ್ರಭುಶಂಕರರ 'ಅಂಗುಲೀಮಾಲ' ನಾಟಕದಲ್ಲಿ ಪ್ರತಿಯೊಂದು ದೃಶ್ಯ ಹಾಡಿನ ಮೂಲಕ ಮುಕ್ತಾಯವಾಗುತ್ತದೆ. ನಾಟಕದಲ್ಲಿ ಸಂಭಾಷಣೆಗೆ ಮಹತ್ವವಿದ್ದು ಪಾತ್ರಗಳ ಮುಖಾಮುಖಿ ಮೂಲಕ ಕರುಣೆ ಮತ್ತು ಕ್ರೂರತೆ ಎಂಬ ವಿರುದ್ಧ ಅಂಶಗಳನ್ನು ಮುಖಾಮುಖಿಯಾಗಿಸುತ್ತಾರೆ. ಹಾಗೆ ನೋಡಿದರೆ ಆಮ್ರಪಾಲಿ ಮತ್ತು ಗಾಳಿ ಎಂಬ ಕುದುರೆ ಏರಿ ನಾಟಕಗಳಲ್ಲೂ ಈ ತಂತ್ರವಿದೆ. ಆಮ್ರಪಾಲಿಯಲ್ಲಿ ರಾಗ-ವಿರಾಗದ ಮುಖಾಮುಖಿ. ಗಾಳಿ ಎಂಬ ಕುದುರೆ ಏರಿಯಲ್ಲಿ ಸಾಧನೆಯ ಹಾದಿಯಿಂದ ಹಿಂತಿರುಗಿದ ಮತ್ತು ಸಾಧನೆಯತ್ತ ಮುಖ ಮಾಡಿದ ಎರಡು ಪಾತ್ರಗಳನ್ನು ಮುಖಾಮುಖಿಯಾಗಿಸುತ್ತಾರೆ. ಕುವೆಂಪು ಮತ್ತು ಬಿ.ಪುಟ್ಟಸ್ವಾಮಯ್ಯನವರು

ಮನ್ಮಥ–ರತಿಯ ಪಾತ್ರವನ್ನು ಬಳಸಿಕೊಂಡಿದ್ದರೆ ಪ್ರಭುಶಂಕರರು ಆಮ್ರಪಾಲಿಯಲ್ಲಿ ಮೋಹಿನಿಯ ಪಾತ್ರವನ್ನು ಕಾಮಾಭಿಲಾಷೆಯ ತಂತ್ರವಾಗಿ ಬಳಸಿಕೊಂಡಿದ್ದಾರೆ. 'ಸುಜಾತ' ನಾಟಕದಲ್ಲಿ ದೃಶ್ಯ ನಿರ್ಮಾಣಕ್ಕೆ ಸಹಾಯಕವಾಗಿ ಸ್ಮರಣ ತಂತ್ರವನ್ನು ಬಳಸಿಕೊಂಡಿಸಿದ್ದಾರೆ.

'ಗಾಳಿ ಎಂಬ ಕುದುರೆ ಏರಿ' ನಾಟಕದಲ್ಲಿ ಎರಡೂ ಪಾತ್ರಗಳನ್ನು ಪ್ಲಾಷ್‌ಬ್ಯಾಕ್ ತಂತ್ರದ ಮೂಲಕ ನಿರೂಪಿಸುತ್ತಾರೆ. ಅಗ್ನಿಮಿತ್ರ ಮತ್ತು ಸಿದ್ಧಾರ್ಥ ತಮ್ಮ ಹಿಂದಿನ ಜೀವನ ಚಿತ್ರಣವನ್ನು ಪ್ರಸ್ತುತದಲ್ಲಿ ಅವಲೋಕಿಸುವುದು ಇಲ್ಲಿನ ವಿಶೇಷ.

'ಜಲ' ನಾಟಕದಲ್ಲಿ ಮನಜ ಅವರು ಆರಂಭದಲ್ಲಿಯೇ ಚಂದ್ರನ ಪತ್ನಿಯಾದ ರೋಹಿಣಿ, ಭೂಲೋಕದಲ್ಲಿ ನಿಂತು ಚಂದ್ರನನ್ನು ನೋಡುವ ಬಯಕೆಯನ್ನು ಧರೆಯಲ್ಲಿ ನದಿಯಾಗಿ ಹರಿದು ಸಾಗರದಲ್ಲಿ ಪತಿಯ ಸೇರುವ ಬಯಕೆಯನ್ನು ವ್ಯಕ್ತಪಡಿಸಿ ಕಪಿಲವಸ್ತುವಿನಲ್ಲಿ ರೋಹಿಣಿ ನದಿಯಾಗಿ ಅವತರಿಸುವ ಪುರಾಣದ ಕಲ್ಪನೆ ನೂತನ ತಂತ್ರವಾಗಿದೆ. ನಾಟಕದಲ್ಲಿ ಮೇಳದ ಪರಿಕಲ್ಪನೆಯೂ ಇದ್ದು ಮೇಳ ಗೀತೆಯೊಂದಿಗೆ ನಾಟಕ ಆರಂಭವಾಗುತ್ತದೆ. ಸಿದ್ಧಾರ್ಥನಿಗೆ ಭಿಕ್ಷೆ ನೀಡುವ ಸಂದರ್ಭದಲ್ಲಿ ಯಶೋಧರೆ ತನ್ನ ಬಾಳನ್ನೇ ಆತನ ಭಿಕ್ಷಾಪಾತ್ರೆಗೆ ಹಾಕಿದುದು ತಂತ್ರದ ದೃಷ್ಟಿಯಿಂದ ಗಮನಾರ್ಹವಾಗಿದೆ.

ಹೀಗೆ ಎಲ್ಲಾ ನಾಟಕಗಳು ತಮ್ಮದೇ ಆದ ವಿಶಿಷ್ಟ ತಂತ್ರಗಳಿಂದ ಅಭಿವ್ಯಕ್ತಿಯ ಸಿದ್ದಿಯನ್ನು ಸಾಧಿಸಿರುವುದನ್ನು ಇಲ್ಲಿ ತೌಲನಿಕವಾಗಿ ವಿವೇಚಿಸಲಾಗಿದೆ. ತಂತ್ರ ವಿವೇಚನೆಯ ಈ ಅಧ್ಯಾಯದಲ್ಲಿಯೇ ರಂಗ ಭೂಮಿಯಲ್ಲಿ ಈ ನಾಟಕಗಳ ಸ್ಥಾನವನ್ನು ಅವು ಪಡೆದಿರುವ ಯಶಸ್ಸು ಮತ್ತು ವೈಫಲ್ಯಗಳನ್ನು ವಿವೇಚಿಸಬಹುದಾಗಿದೆ.

ಅದಮ್ಯ ಭಾವನೆಗಳ ಅನಿವಾರ್ಯ ಪ್ರಕಾಶನವೇ ಕಾವ್ಯ ಎಂಬ ಮಾತಿನಂತೆ ಎಲ್ಲ ಸಾಹಿತ್ಯಗಳು ಮಾನವನ ದಿನನಿತ್ಯದ ನೋವು–ನಲಿವುಗಳ ಆಚಾರ–ವಿಚಾರಗಳ ಅಭಿವ್ಯಕ್ತವಾಗಿದೆ. ಇದಕ್ಕೆ ನಾಟಕ ಪ್ರಕಾರವೂ ಹೊರತಲ್ಲ. ಒಂದೊಂದು ಸಂಸ್ಕೃತಿಗೂ ಒಂದೊಂದು ಪರಂಪರೆಯಿರುವಂತೆ ಎಲ್ಲ ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿಗೆ ಕಾರಣವಾಗುವ ಸಂದರ್ಭಗಳೂ ಏಕರೀತಿಯಲ್ಲಿವೆ. ಸಂಸ್ಕೃತಿಯನ್ನು ಸಮಗ್ರ ಜೀವನ ವಿಧಾನಗಳ ಮೊತ್ತ ಎಂಬರ್ಥದಲ್ಲಿ ಗ್ರಹಿಸುವುದಾದರೆ ಸಂಸ್ಕೃತಿಗೂ ಅಭಿವ್ಯಕ್ತಿಗೂ ಪರಸ್ಪರ ಸಂಬಂಧವಿರುವಂತೆ ನಾಟಕ ರಚನೆಗೂ ರಂಗಭೂಮಿಗೂ ಸಂಬಂಧವಿರುವುದನ್ನು ಕಾಣಬಹುದು. ಹಾಗೆಯೇ

ಉತ್ತಮ ರಂಗ ಪರಂಪರೆಯ ಹಿನ್ನೆಲೆ ಇಲ್ಲದೆ ಉತ್ತಮ ನಾಟಕಗಳ, ನಾಟಕಕಾರರ ಸೃಷ್ಟಿ ಸಾಧ್ಯವಿಲ್ಲವೆಂಬ ಮಾತು ಉತ್ಪ್ರೇಕ್ಷೆಯಾಗಲಾರದು. ಹಾಗೆಯೇ ಒಂದು ನಾಟಕ ರಂಗಪ್ರದರ್ಶನದ ಗುಣಗಳನ್ನು ಒಳಗೊಳ್ಳದೆಯೂ ಅದೊಂದು ಸಮರ್ಥ ಸಾಹಿತ್ಯ ಕೃತಿಯಾಗಿರಲು ಸಾಧ್ಯವೆಂಬ ಮಾತು ಅಷ್ಟೇ ಸತ್ಯ. ಉತ್ತಮ ನಾಟಕಗಳು ರಂಗದ ಮೇಲೆ ಪ್ರದರ್ಶಿತವಾಗಿರಬಹುದು. ಆದರೆ ರಂಗದ ಮೇಲೆ ಪ್ರದರ್ಶಿತವಾಗುವುದೆಲ್ಲ ಉತ್ತಮ ನಾಟಕಗಳಲ್ಲ. ಈ ಅರ್ಥದಲ್ಲಿ ರಂಗಕೃತಿ ಮತ್ತು ನಾಟಕಗಳೆರೆಡೂ ಸ್ವತಂತ್ರವಾದ ಕಲಾಕೃತಿಗಳೇ ಆಗುತ್ತವೆ.

ಈ ಹಿನ್ನೆಲೆಯಲ್ಲಿ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಬುದ್ಧನ ಕುರಿತ ನಾಟಕಗಳು ರಂಗಭೂಮಿಯಲ್ಲಿ ಯಶಸ್ವಿಯಾಗಿದೆಯೇ ಇವುಗಳ ಜೊತೆಗೆ ಇವು ಓದು ನಾಟಕವೇ ಅಥವಾ ರಂಗದ ಮೇಲೆ ಆಡುವ ನಾಟಕವೇ ಎಂಬುದನ್ನು ವಿಶ್ಲೇಷಿಸಲಾಗಿದೆ. ಈ ನಿಟ್ಟಿನಲ್ಲಿ ಮೊದಲಿಗೆ ಕುವೆಂಪು ಅವರ 'ಮಹಾರಾತ್ರಿ' ಯನ್ನು ವಿವೇಚಿಸಬಹುದು. "ಕುವೆಂಪುರವರು ವಾಸ್ತವಿಕತೆಗಿಂತ ಅಮೂರ್ತ ತಾತ್ವಿಕತೆಗೆ ಒಲಿದವರು, ರಂಗ ಸಾಧ್ಯತೆಗಳಿಗಿಂತ ಸಾಹಿತ್ಯದ ಮೌಲ್ಯಗಳಿಗೆ ಗಮನಕೊಟ್ಟವರು. ಹೀಗಾಗಿ ಅನೇಕ ಮಿತಿಗಳು ಅವರ ನಾಟಕಗಳಿಗಿವೆ. 'ಶೂದ್ರ ತಪಸ್ವಿ'ಯ ಮುನ್ನುಡಿಯಲ್ಲಿ ತಮ್ಮ ನಾಟಕವನ್ನು ವೇದಿಕೆ ಮೇಲೆ ಪ್ರಯೋಗಿಸುವುದು ಅಸಾಧ್ಯವಾದ್ದರಿಂದ ಮನೋರಂಗಭೂಮಿಯಲ್ಲಿ ಅದನ್ನು ಸೃಷ್ಟಿಸಬೇಕು ಎಂದು ಅವರೇ ಹೇಳಿಕೊಂಡಿದ್ದಾರೆ. ಇಂತಹ ಆಲೋಚನೆಯಿಂದಾಗಿ ಅವರ ನಾಟಕಗಳ ರಂಗ ಸಾಧ್ಯತೆಗಳು ತುಂಬಾ ಕಡಿಮೆಯಾಗಿದೆ"[೨] ವಿಮರ್ಶಕರ ಈ ಅಭಿಪ್ರಾಯವು ಪೂರ್ಣ ಸತ್ಯವಲ್ಲ. ಕುವೆಂಪು ಅವರು ಮೂಲತ: ಕವಿಯಾಗಿದ್ದು ಕಾವ್ಯಗುಣಗಳಿಂದ ಕೂಡಿರುವ ಅವರ ನಾಟಕಗಳು ರಂಗ ಪ್ರದರ್ಶನಕ್ಕೆ ಹೊಂದಿಕೊಳ್ಳುವುದಿಲ್ಲ ಎಂಬ ಅಭಿಪ್ರಾಯ ಸಂಪೂರ್ಣ ಸರಿಯಾದುದ್ದಲ್ಲ. ಏಕೆಂದರೆ ಕವಿ ಕಲ್ಪನೆ ಸಾಹಿತ್ಯ ಕೃತಿಯಾಗಿ ರೂಪುಗೊಳ್ಳುವ ಮೊದಲು ಕವಿಯ ಮನೋರಂಗ ಭೂಮಿಕೆಯಲ್ಲಿ ಪ್ರಯೋಗವಾಗಿರುತ್ತದೆ. "ಕವಿ ಕಲ್ಪನೆಗೆ ತಕ್ಕ ರಂಗ ಮಂಟಪವನ್ನು ಸಿದ್ಧಗೊಳಿಸಬಲ್ಲ ಪ್ರತಿಭಾವಂತ ನಿರ್ದೇಶಕನಿಂದ ಕವಿ ಯಾವ ರೀತಿಯಲ್ಲಿ ಬಣ್ಣದ ಭೂಮಿಕೆಯಲ್ಲಿ ಅದನ್ನು ಒಳಗಣ್ಣಿನಿಂದ ಕಂಡರೋ ಅದೇ ರೀತಿಯ ಬಣ್ಣದ ಭೂಮಿಕೆಯಲ್ಲಿ ಪ್ರಯೋಗಸಾಧ್ಯವಾದ

---

೨. ಶತಮಾನದ ಕನ್ನಡ ಸಾಹಿತ್ಯ ಜಿ.ಎಚ್.ನಾಯಕ. ಪು: ೯೩-೯೪

ನಾಟಕಗಳಿವು. ಈ ಸಂಗತಿ ಈಗ ರುಜುವಾತಾಗಿದೆ. ಸೊಗಸಾದ ರಂಗಸಜ್ಜಿಕೆಯೊಡನೆ ಪರಿಣಾಮಕಾರಿಯಾಗಿ ಪ್ರದರ್ಶನಗೊಂಡಿವೆ."[೩]

ಈ ಎರಡೂ ಅಭಿಪ್ರಾಯಗಳ ಆಧಾರದ ಮೇಲೆ ಕುವೆಂಪುರವರ 'ಮಹಾರಾತ್ರಿ' ಓದು ನಾಟಕವಾಗಿದ್ದೂ ಪ್ರತಿಭಾವಂತ ನಿರ್ದೇಶಕರಿಂದ ರಂಗಭೂಮಿಯ ಮೇಲೂ ಯಶಸ್ವಿಯಾಗಬಲ್ಲದು. ಕಥನಕವನದ ಸತ್ವವಿರುವುದರಿಂದ ಪ್ರದರ್ಶನದ ದೃಷ್ಟಿಯಿಂದ ಕೊರತೆಯಾಗಿ ಪರಿಣಮಿಸುವ ಸಂಭವವಿದ್ದರೂ ಪ್ರತಿಭಾವಂತ ನಿರ್ದೇಶಕರಿಂದ ರಂಗಭೂಮಿಯ ಮೇಲೂ ಯಶಸ್ವಿಯಾಗಬಲ್ಲದು.

ಬಿ.ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ರಂಗಪ್ರಯೋಗದ ದೃಷ್ಟಿಯಿಂದಲೇ ರಚಿತವಾಗಿದೆ. ಅಲ್ಲಲ್ಲಿ ಕಾವ್ಯದ ಅಂಶಗಳು ಕಾಣಿಸಿಕೊಂಡರೂ ಜನಪ್ರಿಯತೆಯ ಕಾರಣಕ್ಕಾಗಿ ಸಂಕೀರ್ಣತೆ ಸಿದ್ಧಿಸಿಲ್ಲ. ಮಹಮದ್ ಪೀರರು ಗೌತಮಬುದ್ಧನ ಪಾತ್ರವನ್ನು ವಹಿಸಿಕೊಂಡು ರಂಗಭೂಮಿಯ ಮೇಲೆ ಯಶಸ್ವಿಯಾಗಿ ಪ್ರಯೋಗಿಸಿರುವುದು ರಂಗಭೂಮಿಯಲ್ಲಿ. ನಾಟಕದ ಸಾಧನೆಗೆ ನಿದರ್ಶನವಾಗಿದೆ. ಈ ನಾಟಕವು ಓದು ನಾಟಕವೂ ಆಗಿದ್ದು ಜನಪ್ರಿಯ ಆಡು ನಾಟಕವೂ ಆಗಿದೆ.

ಮಾಸ್ತಿಯವರ 'ಯಶೋಧರಾ' ಗೀತನಾಟಕವಾಗಿದ್ದು ಇಡೀ ನಾಟಕದಲ್ಲಿ ಯಶೋಧರೆಯನ್ನು ಕೇಂದ್ರಸ್ಥಾನದಲ್ಲಿರಿಸಿಕೊಂಡು ಅವಳ ಮಾನಸಿಕ ತುಮುಲವನ್ನು ಚಿತ್ರಿಸುತ್ತದೆ. ಹೀಗಾಗಿ ನಾಟಕದಲ್ಲಿ ಘಟನೆಗಳ ನಿರೂಪಣೆಗಿಂತ ಭಾಷೆಯೇ ಮುಖ್ಯವಾಗುತ್ತದೆ. ನಾಟಕ ಕ್ರಿಯೆ ಮತ್ತು ಪಾತ್ರಗಳ ನಡವಳಿಕೆ ಇಲ್ಲಿ ಮುಖ್ಯವಾಗದೆ ಸಂಭಾಷಣೆಗೆ ಒತ್ತುನೀಡಲಾಗಿದೆ. ಆದ್ದರಿಂದಲೇ ದೃಶ್ಯಕಾವ್ಯವಾಗಿ ನಾಟಕ ಯಶ್ವಸಿಯಾಗುವುದಿಲ್ಲ. ದೃಶ್ಯಗುಣಗಳಿಂದ ಹಿಂದೆ ಬಿದ್ದು ಭಾಷೆಯ ಮೂಲಕವೇ ನಡೆಯುವ ಯಶೋಧರಾ ರಂಗಮಾಧ್ಯಮ ದೃಷ್ಟಿಯಿಂದ ಸೋಲುತ್ತದೆ. ನಯನ ಮನೋಹರ ದೃಶ್ಯ, ಘಟನೆಗಳು ತಿರುವು ಪಡೆಯುವಿಕೆ, ನಾಟಕೀಯ ಬೆಳವಣಿಗೆ, ಬದುಕಿನ ವೈವಿಧ್ಯ ಇದಾವುದೂ ಇಲ್ಲದ ಯಶೋಧರಾ ರಂಗ ಭೂಮಿಕೆಯಲ್ಲಿ ಸೋತರೂ ಪ್ರತಿಮೆ ರೂಪಕ, ಉಪಮೆಗಳಿಂದ ಕೂಡಿ ಕಾವ್ಯವಾಗಿ ಓದು ನಾಟಕವಾಗಿ ಯಶಸ್ವಿಯಾಗುತ್ತದೆ. ಈ ಕಾರಣಕ್ಕಾಗಿಯೇ ಮಾಸ್ತಿಯವರ ನಾಟಕಗಳು ರಂಗದ ಮೇಲೆ ಕಾಣಿಸಿಕೊಳ್ಳುವುದಿಲ್ಲ. "ಮಾಸ್ತಿಯವರ ನಾಟಕಗಳು ರಂಗಭೂಮಿಯ ಮೇಲೆ

೩.ಗೋಪುರದ ದೀಪಗಳು, ಎಚ್. ಜೆ. ಲಕ್ಕಪ್ಪಗೌಡ, ಕನ್ನಡ ವಿ.ವಿ

ಯಥೇಚ್ಚವಾಗಿ ಪ್ರದರ್ಶಿತವಾಗದಿರುವುದಕ್ಕೆ ಬಹುಶ: ಅವುಗಳಲ್ಲಿ ರಂಗತಂತ್ರದ ಅಭಾವವಿರುವುದೇ ಕಾರಣವಿರಬಹುದು ಎಂದು ಕಾಣಬರುತ್ತದೆ.”[೪]

ರಂಗಭೂಮಿಯ ಸಾಧ್ಯತೆಗಳನ್ನು ಕುರಿತು ಚಿಂತನೆ ನಡೆಸಿದ್ದ ಕಾರಂತರು ಶಾಸ್ತ್ರೀಯವಾಗಿ ನಾಟಕವನ್ನು ರಚಿಸಿದವರು ಹಾಗಾಗಿ ಇವರ ಗೀತ ನಾಟಕಗಳು ಐತಿಹಾಸಿಕ ವಸ್ತುವನ್ನೊಳಗೊಂಡ ಗೀತ ನಾಟಕದ ನಿರೀಕ್ಷೆಗಳನ್ನು ಸಫಲಗೊಳಿಸಿದೆ. ಮೇಳ, ನೇಪಥ್ಯಗಾನ ಇದಾವ ತಂತ್ರಗಳೂ ಇಲ್ಲದೆ ಗೀತೆಯ ಮೂಲಕವೇ ನಾಟಕ ಯಶಸ್ಸನ್ನು ಕಾಣುತ್ತದೆ. ನಾಟಕದ ವಸ್ತುವಿನ ಆಯ್ಕೆ ಅದರಲ್ಲಿ ವ್ಯಕ್ತವಾಗುವ ರಸಗಳು, ಅದಕ್ಕೆ ಪೂರಕವಾದ ಸಂಗೀತ ಈ ಎಲ್ಲವನ್ನೂ ಕಾರಂತರು ಹದವರಿತು ಬಳಸಿರುವುದು ಕೃತಿಯ ಯಶಸ್ಸಿಗೆ ಕಾರಣವಾಗಿದೆ. ಉದಾಹರಣೆಗೆ ‘ಕಿಸಾಗೋತಮಿ’ ಯ ಶೋಕ, ಕರುಣರಸ ಪ್ರತಿಪಾದನೆಗೆ ಭೈರವಿ, ದೇಸಕಾರ, ಮುಲ್ತಾನಿ ರಾಗಗಳನ್ನು ಆರಿಸಿಕೊಂಡಿರುವುದು ಈ ಕ್ಷೇತ್ರದಲ್ಲಿ ಅವರ ಅನುಭವವನ್ನು ಸೂಚಿಸುತ್ತದೆ. ನಾಟಕದಲ್ಲಿ ಸಂಭಾಷಣಾ ಗೀತೆಗಳಿಗೆ ಹೆಚ್ಚು ಪ್ರಾಮುಖ್ಯ ಸಂದಿದೆ. ಸಂಭಾಷಣಾ ಗೀತೆಗಳು ವೈವಿಧ್ಯಮಯವಾಗಿದೆ. ಒಂದು ಪದದಿಂದ ಹತ್ತು ಸಾಲುಗಳವರೆಗೂ ಇರುವ ಈ ಗೀತೆಗಳನ್ನು ಮೇಳದ ನೆರವಿಲ್ಲದೆ ಪಾತ್ರಗಳು ತಾವೇ ಹಾಡುತ್ತವೆ. ಆದ್ದರಿಂದಲೇ ಪೂರ್ಣ ನಾಟಕ ಕಲ್ಪನೆಯನ್ನು ಈ ಗೀತ ನಾಟಕ ಒದಗಿಸುತ್ತದೆ. ಉಚಿತವಾದ ವಾದ್ಯದ ಹಿನ್ನೆಲೆ ಸಂಗೀತ ಪೋಷಣೆಯಿಂದ ರಂಗ ಪ್ರದರ್ಶನವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಿದೆ.

ಈ ಎಲ್ಲಾ ಹಿನ್ನೆಲೆಗಳಿಂದ ಕಾರಂತರ ಈ ಎರಡೂ ನಾಟಕಗಳು ಆಡು ನಾಟಕಗಳಾಗಿದ್ದು ಕಾರಂತರು ರಂಗಭೂಮಿಯ ಜೊತೆಗೆ ನಡೆಸಿದ ಪ್ರಯೋಗಗಳ ಪರಿಣಾಮವಾಗಿ ರಂಗಭೂಮಿಯಲ್ಲಿ ಯಶಸ್ವಿಯಾಗಿವೆ. ಕಾರಂತರ ನಾಟಕಗಳು ಕಾಲೇಜು ರಂಗದ ಹವ್ಯಾಸಿ ಕಲಾವಿದರಿಂದ ಪ್ರಚಾರಕ್ಕೆ ಬಂದಿವೆ. ನಾಟಕ ದೃಶ್ಯ ಪ್ರಯೋಗಕ್ಕೆ ಅನುಕೂಲವಾಗಿರಬೇಕೆಂಬ ಕಾರಂತರ ಧೋರಣೆ ಇಲ್ಲಿ ಫಲ ನೀಡಿರುವುದನ್ನು ಕಾಣಬಹುದು.

ಪ್ರಭುಶಂಕರರ ನಾಲ್ಕು ನಾಟಕಗಳಲ್ಲಿ ‘ಅರಿಕೆ’ಯಲ್ಲಿ ಅವರೇ ಹೇಳಿಕೊಂಡಿರುವಂತೆ ‘ಅಂಗುಲೀಮಾಲ’ ರಂಗದ ಮೇಲೆ ಹಲವು ಪ್ರದರ್ಶನಗಳನ್ನು ಕಂಡಿದೆ. ಇನ್ನುಳಿದ ಮೂರು ನಾಟಕಗಳಲ್ಲಿ ‘ಆಮ್ರಪಾಲಿ’ ರಾಗ–ವಿರಾಗದ ಸಂಘರ್ಷವನ್ನು ಭಾವನಾತ್ಮಕ ನೆಲೆಯಲ್ಲಿ

೪.ಮಾಸ್ತಿ ವೆಂಕಟೇಶ ಅಯ್ಯಂಗಾರ್. ಸಂ.ಆರ್.ಎಸ್.ರಾಮರಾವ್. ಪುಟ :೫೦-೫೧

ಚಿತ್ರಿಸಿರುವುದರಿಂದ ಇಲ್ಲಿ ಕ್ರಿಯೆಗಿಂತ ಭಾಷೆ ಮುಖ್ಯವಾಗುತ್ತದೆ. 'ಸುಜಾತ' ಮತ್ತು 'ಗಾಳಿ ಎಂಬ ಕುದುರೆ ಏರಿ' ಸ್ಮರಣ ತಂತ್ರವನ್ನು ಒಳಗೊಂಡಿದ್ದು ಓದುನಾಟಕ ದಂತಿದೆ.

ಮನಜ ಅವರ 'ಜಲ' ಕಾವ್ಯ ಗುಣಕ್ಕಿಂತ ರಂಗ ಪ್ರಯೋಗದ ಲಕ್ಷಣಗಳನ್ನೇ ಹೆಚ್ಚು ಹೊಂದಿದ್ದು ಇದು ಆಡು ನಾಟಕವಾಗಿದೆ. ಅದಕ್ಕೆ ಪೂರಕವಾಗಿ ಮೇಳದ ಕಲ್ಪನೆಯೂ ಇದೆ. ಭಾವನಾತ್ಮಕ ಸಂಘರ್ಷವಿಲ್ಲದ, ಅನಿರೀಕ್ಷಿತ ತಿರುವುಗಳಿಲ್ಲದ 'ಜಲ' ಸಮಕಾಲೀನ ರಾಜಕೀಯ ಸ್ಥಿತಿಯನ್ನು ವಿಡಂಬಿಸುವುದರಿಂದ ವಿಶಿಷ್ಟವಾಗಿದೆ. ಬಂಡಾಯದ ಹಿನ್ನೆಲೆಯ ಕೃತಿ ರಂಗಪ್ರಯೋಗದಲ್ಲಿ ಯಶಸ್ವಿಯಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಬಿ.ಪುಟ್ಟಸ್ವಾಮಯ್ಯ, ಕಾರಂತ ಮತ್ತು ಮನಜ ಅವರು ರಂಗ ಸಾಧ್ಯತೆಗಳೊಂದಿಗೆ ಕೃತಿ ರಚಿಸಿರುವುದರಿಂದ ಇವರ ನಾಟಕಗಳು ತಾಂತ್ರಿಕವಾಗಿ ರಂಗ ಭೂಮಿಕೆಗೆ ಹೊಂದಿಕೊಳ್ಳುತ್ತವೆ. ಮಾಸ್ತಿ, ಕುವೆಂಪು, ಪ್ರಭುಶಂಕರರು ಮೌಲ್ಯಗಳಿಗೆ, ಕಾವ್ಯಗುಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಅವರ ನಾಟಕಗಳು ರಂಗಭೂಮಿಯಲ್ಲಿ ಯಶಸ್ವಿಯಾಗದಿದ್ದರೂ ತನ್ನ ಕಾವ್ಯಗುಣದಿಂದ ಉತ್ತಮ ಸಾಹಿತ್ಯ ಕೃತಿಗಳಾಗಿ ಗಮನ ಸೆಳೆಯುತ್ತವೆ.

* * *

ಅಧ್ಯಾಯ – ೬

ಭಾಷೆ ಮತ್ತು ಅಭಿವ್ಯಕ್ತಿ

ಅಮೂರ್ತ ಭಾವನೆಗಳನ್ನು ಮೂರ್ತ ಭಾಷೆಯ ಮೂಲಕ ವ್ಯಕ್ತಪಡಿಸುವ ವಿಧಾನವೇ ಅಭಿವ್ಯಕ್ತಿ. ಭಾವನೆ ಮತ್ತು ಭಾಷೆ ಎಲ್ಲರಿಗೂ ಅನ್ವಯಿಸುವುದಾದರೂ ಅದನ್ನು ಅಭಿವ್ಯಕ್ತಿಸುವ ವಿಧಾನ ಬೇರೆ ಬೇರೆಯಾಗಿರುತ್ತದೆ. ಅದರಲ್ಲಿಯೂ ಒಂದೇ ವಸ್ತುವನ್ನು ಆಯ್ಕೆ ಮಾಡಿಕೊಂಡ ಸಾಹಿತಿಗಳಲ್ಲಿ ಈ ಅಭಿವ್ಯಕ್ತಿ ಹೆಚ್ಚು ಮುಖ್ಯವಾಗುತ್ತದೆ. ಅಭಿವ್ಯಕ್ತಿಯ ಈ ವಿಧಾನದಲ್ಲೇ ಕವಿ ಅಥವಾ ಸಾಹಿತಿಯ ವಿಶಿಷ್ಟತೆ ಅಡಗಿರುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು, ಬಿ. ಪುಟ್ಟಸ್ವಾಮಯ್ಯ, ಮಾಸ್ತಿ, ಕಾರಂತ, ಪ್ರಭುಶಂಕರ ಹಾಗೂ ಮನಜ ಅವರ ನಾಟಕಗಳ ಅಭಿವ್ಯಕ್ತಿಯನ್ನು ಮುಖ್ಯವಾಗಿ ಭಾಷೆ, ಛಂದಸ್ಸು, ತಂತ್ರಗಳ ಮೂಲಕ ಸಾಧಿಸಿರುವ ಕಲಾತ್ಮಕತೆ, ಈ ಎಲ್ಲ ನಾಟಕಗಳ ಸಾಮ್ಯತೆ ಭಿನ್ನತೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಯಾವುದೇ ಕಾಲಘಟ್ಟದಲ್ಲಿ ಜೀವಿಸಿದ್ದ ಮಹಾನ್ ಪುರುಷರ ಬದುಕು, ಅವರ ಸಾಧನೆ, ಸಿದ್ಧಿಗಳು ಅವರ ಮುಂದಿನ ಜನಾಂಗಕ್ಕೆ ಐತಿಹ್ಯಗಳಾಗಿ ಪರಿಣಮಿಸುತ್ತವೆ. ಈ ಐತಿಹ್ಯಗಳು ಅತಿಮಾನುಷ ಕಲ್ಪನೆಗಳಿಂದ, ಪವಾಡಗಳಿಂದ ಪುರಾಣದ ರೂಪ ಪಡೆದಿರುತ್ತದೆ ಹಾಗೂ ನಮ್ಮ ಬಹುತೇಕ ಐತಿಹಾಸಿಕ ಮಹಾಪುರುಷರು ಪುರಾಣ ಪುರುಷರಾಗಿ ಕಾಣಿಸಿಕೊಳ್ಳುತ್ತಾರೆ. ಇಂತಹ ಪೌರಾಣಿಕ ಜೀವನ ಚಿತ್ರಣಕ್ಕೆ ಗದ್ಯ ಭಾಷೆಗಿಂತ ಪದ್ಯಭಾಷೆ ಹೆಚ್ಚು ಒಪ್ಪುತ್ತದೆ. ಈ ಹಿನ್ನೆಲೆಯಲ್ಲಿ ನಾಟಕಗಳಿಗೆ ಪದ್ಯಭಾಷೆಯನ್ನು ಬಳಸಿಕೊಂಡ ನವೋದಯ ನಾಟಕಕಾರರಲ್ಲಿ ಕುವೆಂಪು ಮತ್ತು ಮಾಸ್ತಿಯವರು ಪ್ರಮುಖರು. ಅದರಲ್ಲಿಯೂ ಆಡುಮಾತಿನ ಲಯಕ್ಕೆ ಸಮೀಪವಾಗಿರುವ ಸರಳ ರಗಳೆಯನ್ನು ನಾಟಕದಲ್ಲಿ ಮೊದಲಬಾರಿಗೆ ಬಳಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ.

೧೨ ದೃಶ್ಯಗಳ 'ಮಹಾರಾತ್ರಿ' ಒಂದೇ ಘಟನೆಯನ್ನು ಒಳಗೊಂಡಿದ್ದು ಒಂದು ರೂಪಕವಾಗಿದೆ. ಆಯ್ಕೆ ಮಾಡಿಕೊಂಡಿರುವ ಘಟನೆ ಒಂದೇ ಆಗಿದ್ದು ಸೀಮಿತ ಸನ್ನಿವೇಶದಲ್ಲಿ ನಡೆಯುವಂತೆ ನಿರೂಪಿತವಾಗಿರುವುದರಿಂದ ಸ್ಥಳೈಕ್ಯ, ಕಾಲೈಕ್ಯ ಮತ್ತು ಕ್ರಿಯೈಕ್ಯಗಳು ಸುಲಭವಾಗಿ ಸಿದ್ಧಿಸಿದ್ದು, ನಾಟಕದ ವಸ್ತು ಅಲೌಕಿಕ ಹಿನ್ನೆಲೆಯಲ್ಲಿರುವುದರಿಂದ ಅದನ್ನು ನಿರೂಪಿಸುವ ಕವಿಯ ಕಲ್ಪನಾ ವಿಲಾಸಕ್ಕೆ ಒಂದು ಹೊಸತನ ಪ್ರಾಪ್ತವಾಗುತ್ತದೆ. ಈ ಎಲ್ಲದಕ್ಕೆ ಪೂರಕವಾಗಿ ಹದವಾದ

ಸರಳ ರಗಳೆಯ ಲಯವಿರುವುದು ಇಲ್ಲಿನ ವೈಶಿಷ್ಟ್ಯ. ನಾಟಕದ ಆರಂಭ ಮತ್ತು ಅಂತ್ಯದಲ್ಲಿ ಕಾಣಿಸಿಕೊಳ್ಳುವ ಯಕ್ಷ, ಕಿನ್ನರ, ಗಂಧರ್ವರು ಪೌರಾಣಿಕ ವಸ್ತುವಿಗೆ ಕಲಾತ್ಮಕತೆಯನ್ನು ತಂದುಕೊಡುತ್ತಾರೆ. ಈ ಅಲೌಕಿಕ ವ್ಯಕ್ತಿಗಳಿಗೆ ತಕ್ಕ ಭಾಷೆಯೂ ನಾಟಕದಲ್ಲಿದೆ. ಹಾಗೆಯೇ ಪಾತ್ರಗಳಿಗೆ ತಕ್ಕ ಭಾಷೆಯನ್ನು ಬಳಸುವ ನಾಟಕಕಾರರ ಕೌಶಲವನ್ನು ಇಲ್ಲಿ ಕಾಣಬಹುದು. ಉದಾಹರಣೆಗೆ 'ಮಹಾರಾತ್ರಿ' ನಾಟಕದ ಯಕ್ಷನ ಈ ಮಾತನ್ನು ಗಮನಿಸಬಹುದಾಗಿದೆ.

ನಲಿಯಿರೈ ಅದರಿಂದ
ಉಡುಗಳಿರ! ನಲಿಯೆಲೈ ಹಿಮಕರನೆ ! ವಿಶ್ವವೇ
ಸಂತಸದಿ ಹಿಗ್ಗು, ಪೂವಲಿಯ ಚೆಲ್ಲಿರೈ
ದೇವತೆಗಳಿರ ನೀವು, ಜೀವ ಜಂತುಗಳೆ
ಇಂದು ನಿಮಗಾಗೆದೆಯ ಕೆನ್ನೀರ ಸುರಿವ
ಪುಣ್ಯಾತ್ಮನುದಿಸುವನು !

ಇಲ್ಲಿನ ಯಕ್ಷನ ಮಾತಿಗೆ ಒಂದು ಕಾವ್ಯಗುಣವಿದೆ. ಲೋಕೋಪಯೋಗಕ್ಕೆ ಮೀರಿದ ಭಾವೋಪಯೋಗಿ ನಾಟಕೀಯತೆಯನ್ನೊಳಗೊಂಡ ಭಾಷೆಯಿದು. ಮುಂದಿನ ದೃಶ್ಯಗಳಲ್ಲಿ ಬರುವ ರಾಲನ ಪಾತ್ರದ ಭಾಷೆಯಲ್ಲಿ ಯಕ್ಷನ ಭಾಷೆಯಲ್ಲಿಲ್ಲದ ಒಂದು ರೂಕ್ಷತೆಯಿರುವುದನ್ನು ಕಾಣಬಹುದು. ಗೃಹತ್ಯಾಗಕ್ಕೆ ಹೊರಟಿರುವ ಸಿದ್ಧಾರ್ಥ ರಾಲನನ್ನು ಎಡವಿ ಮುಂದುವರಿದಾಗ ಆತ ಚೆನ್ನನನ್ನು ಶಪಿಸುವ ಸಂದರ್ಭವನ್ನಿಲ್ಲಿ ನೆನೆಯಬಹುದು.

ನಿನ್ನ ಮನೆ ಹಾಳಾಗ! ನೀ ಸತ್ತುಹೋಗ!
ಚೆನ್ನ, ನನ್ನ ಕೆಲಸದ ಬಾಯ್ಗೆ ಮಣ್ಣಾಗುತ್ತಿತ್ತಲ್ಲ !
ಬದುಕಿದೆಯ ಬಡ ಜೀವ.

ಎಂಬ ಮಾತುಗಳು ರಾಲನಿಗೆ ಸಹಜವಾದುದಾಗಿದೆ. ಪಾತ್ರಗಳಿಗೆ ತಕ್ಕ ಭಾಷೆಯನ್ನು ಬಳಸುವ ಕವಿತ್ವ ಒಮ್ಮೊಮ್ಮೆ ನಾಟಕ ಕ್ರಿಯೆಗೆ ತೊಡಕಾಗಿಬಿಡುತ್ತದೆ. ತಮ್ಮ ಸಹಜವಾದ ಪ್ರತಿಭೆಯನ್ನು ಭಾಷಾಭಿವ್ಯಕ್ತಿಯಲ್ಲಿ ತೋರುವ ನಾಟಕಕಾರರು ಕೆಲವೊಮ್ಮೆ ಪ್ರಾಸದ ಮೋಹಕ್ಕೆ

ಸಿಕ್ಕು, ಆ ಸಹಜತೆಗೆ ಭಂಗ ತರುವುದುಂಟು. 'ಮಹಾರಾತ್ರಿ'ಯಲ್ಲಿ ನಿದ್ರೆಯ ಅನಾಹುತವನ್ನು ಬಣ್ಣಿಸುವ ಸಂದರ್ಭದಲ್ಲಿ,

ಎಲೆ ನಿದ್ದೆ, ನಿನ್ನುದರವತಿ ಕಪ್ಪು
ನಿನ್ನ ಬಲೆಗೊಳಗಾದವರೆ ಬೆಪ್ಪು
ನಿನ್ನ ನಿಂದಿಸುವುದು ತಪ್ಪು

ಎಂಬ ಕಾವಲುಗಾರನ ಮಾತುಗಳನ್ನು ಗಮನಿಸಬಹುದು. 'ಮಹಾರಾತ್ರಿ' ಶ್ರೇಷ್ಠ ಮಾದರಿಯ ಪದ್ಯ ಶೈಲಿಗೆ ಉದಾಹರಣೆಯಾಗಿದ್ದು ನಡುಗನ್ನಡ ಶೈಲಿಯ ಸರಳ ಭಾಷೆಯ ಬಳಕೆ ಇದೆ. ಘಟನೆ ಒಂದೇ ಆದರೂ ಒಂದಾದ ಮೇಲೊಂದರಂತೆ ಬರುವ ಅಗಲಿಕೆಯ, ಭಾವೋತ್ಕರ್ಷ ಸನ್ನಿವೇಶಗಳು ಪರಿವರ್ತನೆ ಕಡೆಗೆ ಸಾಗುವ ಸಿದ್ಧಾರ್ಥ ಮನಸ್ಥಿತಿ ಒಂದಕ್ಕೊಂದು ಪ್ರೇರಕವಾಗಿ ಪೋಷಕವಾಗಿ ಕೃತಿಗೆ ಯಶಸ್ಸು ತಂದುಕೊಟ್ಟಿವೆ. ಇತಿಹಾಸದ ಆ ಒಂದು ಘಟನೆಗೆ ಸಾಹಿತ್ಯದ ಸೌಂದರ್ಯವನ್ನು ಸಮಕಾಲೀನ ಸಂದರ್ಭದ ವಿಚಾರಪರತೆಯನ್ನು ತುಂಬಿ ಮನೋಜ್ಞಗೊಳಿಸಿದ್ದಾರೆ ಕುವೆಂಪುರವರು.

ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ರಂಗಭೂಮಿಯ ಜನಪ್ರಿಯತೆಯನ್ನು ಉದ್ದೇಶವಾಗಿರಿಸಿಕೊಂಡಿದ್ದರೂ ಇದರಲ್ಲಿ ಕಾವ್ಯ ಗುಣವು ಅಡಕವಾಗಿದೆ. ಇದೊಂದು ಗದ್ಯನಾಟಕವಾಗಿದ್ದು ಅಲ್ಲಲ್ಲಿ ಗೀತೆಗಳನ್ನು ಬಳಸಿಕೊಳ್ಳಲಾಗಿದೆ. ಉದಾಹರಣೆಗೆ ಪ್ರೇಮ, ಅಗಲಿಕೆ ವೈರಾಗ್ಯದಂತಹ ರಸೋತ್ಕರ್ಷ ಸನ್ನಿವೇಶ ನಿರೂಪಣೆಗೀತೆಗಳ ಬಳಕೆ ಇದೆ. ಸಿದ್ಧಾರ್ಥನ ಗೃಹ ತ್ಯಾಗದ ಸಂದರ್ಭದ ಚಿತ್ರಣದಲ್ಲಿ ಗದ್ಯಕ್ಕಿಂತ ಗೀತೆಗಳ ಆಧಿಕ್ಯವಿದೆ. 'ಗೌತಮಬುದ್ಧ' ನಾಟಕದಲ್ಲಿ ಭಾಷೆ ಛಂದಸ್ಸಿನ ವಿಶಿಷ್ಟ ಬಳಕೆ ಇದ್ದು ಭಾಷೆಗೆ ನಾಟಕೀಯ ಗುಣವಿದೆ. ವಸ್ತು ಇತಿಹಾಸದ್ದೇ ಆದರೂ ಪಾತ್ರಸೃಷ್ಟಿ ಮತ್ತು ಸನ್ನಿವೇಶ ನಿರ್ಮಾಣದಲ್ಲಿ ಕುಶಲತೆ ಇದೆ. ರತಿ ಮನ್ಮಥ ಗಂಗಾ ಗೌತಮಿಯ ಪಾತ್ರಗಳು ವಿಶಿಷ್ಟವಾಗಿದ್ದು, ಲೌಕಿಕ ಮತ್ತು ಅಲೌಕಿಕದ ಪ್ರತೀಕದಂತಿದ್ದು ನಾಟಕಕ್ಕೆ ಕಲಾತ್ಮಕತೆ ತಂದುಕೊಟ್ಟಿವೆ. ನಾಟಕದಲ್ಲಿ ಅನಿರೀಕ್ಷಿತ ತಿರುವು ನೀಡುವ ಘಟನೆಗಳಿಲ್ಲದೆ ಏಕರೂಪತೆ ಇದೆ. ನಿರಂತರತೆ ಇದೆ.

ಪುಟ್ಟಸ್ವಾಮಯ್ಯನವರ ಭಾಷಾಶೈಲಿ ಪಾಂಡಿತ್ಯ ಪೂರ್ಣವೂ ನೀತಿ ಪರವೂ ಆಗಿದ್ದು, ಸಾಮಾನ್ಯ ಜನತೆಯ ಗ್ರಹಿಕೆಗೆ ಸುಲಭವಾಗಿಲ್ಲ. ಅಲ್ಲಲ್ಲಿ ಅಲಂಕಾರಿಕ ಶೈಲಿಯು ಕಾಣಿಸಿಕೊಳ್ಳುತ್ತದೆ. ಸಿದ್ಧಾರ್ಥನು ಯಶೋಧರೆಯ ಸೌಂದರ್ಯ ವರ್ಣನೆ ಮಾಡುವ ಸಂದರ್ಭವನ್ನು ಗಮನಿಸಬಹುದು.

ವನಿತೆ ನಿನ್ನಯ ವದನ ವಿಧುವ ನೋಡಿದ ಬಳಿಕ
ಕುಂದಾಂತ ಚಂದಿರನ ಚೆಲ್ವದೇಕೆ?
ಶಶಿವಕ್ತ್ರೆ, ನಿನ್ನಕ್ಷಿ ವಿಶಿಖಮಿರೆ, ಮನ್ಮಥಂ
ಶರ ಸಂಕಕುಲವ ತೊಡುವ ತವಕಮೇಕೆ?
ಮಧುರಾಕ್ಷಿ ನಿನ್ನದರ ಮಧುವನೀಂಟಿದ ಬಳಿಕ
ಸುಧೆಯ ಸೇವಿಪೆನೆಂಬ ಸರಸಮೇಕೆ?
ಬಿಂಬೋಷ್ಟಿ, ನಿನ್ನ ಕುಚಕುಂಭ ಪರಿರಂಭಮಿರೆ
ರಂಭಾದಿ ರಮಣಿಯರ ಗೊಡವೆಯೇಕೆ?
ಮನಕೆ ಮುದವಿತ್ತು ಮೈಮರಸಿ ಮೋಹಗೊಳಿಸಿ
ಪಂಚೇಂದ್ರೀಯಗಳಿಗೆ ನಿರುಪಮ ಶಾಂತಿಯೀವ
ನಿನ್ನೊಲ್ಮೆ ಪರಿಮಳವ ಸೇವಿಸುತೆ ಮತ್ತನಾಗಿ
ನಲಿಯುತಿರುವೆನಗೆಂದು ಸ್ವರ್ಗದ ಚಿಂತೆಯೇಕೆ?

ಈ ವರ್ಣನೆ ಭೋಗದ ತುತ್ತ ತುದಿಯಲ್ಲಿದ್ದ ಸಿದ್ಧಾರ್ಥನ ಮನಸ್ಥಿತಿಯನ್ನು ಬಿಂಬಿಸಿದರೆ 'ದುಃಖ ನಿವಾರಣೆಯೇ ಎನ್ನ ಬದುಕಿನ ಧ್ಯೇಯ. ಜರಾ, ರೋಗ, ಮೃತ್ಯುವಿನ ಗ್ರಾಸದಲ್ಲಿ ತೊಳಲುವ ಜೀವ ಅಲ್ಪವಾದ ಅಗಲಿಕೆಗೆ ಕಾತರಗೊಳ್ಳುವುದೆಂದರೆ ಅಗ್ನಿ ಮಧ್ಯದಲ್ಲಿ ಕುಳಿತು ಮಿಣುಕು ಹುಳಕ್ಕೆ ಹೆದರಿಂತೆ ಎಂಬ ನುಡಿಗಳು ಭವ ಬಂಧನನಿಂದ ಮುಕ್ತನಾದ ಬುದ್ಧನ ವ್ಯಕ್ತಿತ್ವವನ್ನು ಸೂಚಿಸುತ್ತದೆ. ಹೀಗೆ ನಾಟಕದಲ್ಲಿ ಗದ್ಯ, ಪದ್ಯ, ಶ್ಲೋಕ ಎಲ್ಲವೂ ಇದ್ದರೂ ಇಡೀ ನಾಟಕದಲ್ಲಿ ಗದ್ಯವೇ ಮೆರೆಯುತ್ತದೆ. ನಾಟಕಕಾರರ ಅಲಂಕಾರಮಯ ಭಾಷಾ ಶೈಲಿಗೆ ತಕ್ಕ ಸನ್ನಿವೇಶವಿದ್ದರೆ ನಾಟಕ ರಂಗಭೂಮಿಯಲ್ಲಿ ಬಹಳ ಯಶಸ್ವಿಯಾಗುತ್ತದೆ. ಆದರೆ ಸೇವಕ

ಚೆನ್ನನಿಗೂ ಇದೇ ಭಾಷೆಯ ಬಳಕೆ ಕೃತಕವೆನಿಸುತ್ತದೆ. ಉದಾಹರಣೆಗೆ ಸಿದ್ಧಾರ್ಥನಿಗೆ ಬುದ್ಧಿ ಹೇಳುವ ಚೆನ್ನನ ಈ ಮಾತುಗಳನ್ನು ಗಮನಿಸಬಹುದು.

ಸಹಿಸೆ ಕಲಿತವರಲ್ಲ. ಚಿಕ್ಕಂದಿನಿಂ ಸುಖದೊ
ಳಿರ್ದವರ್. ನೀನಾದರೆಂತು ಸಹಿಸುವೆ? ತಪಂ
ಸುಲಭವಲ್ಲತಿಕಠಿಣ ಸಾಧನವು. ಸಿರಿತನದ
ಮೇಲ್ವಾಸಿನೋಳ್ ಬೆಳದು ಯಮಿಗಳ ಕಠೋರವ್ರ
ತ್ತಿಯೆನೆಂತು ತಳೆದಿರುವೆ? ಮೃದು ಹಂಸತೂಲಿಕಾ
ತಲ್ಪದೋಳ್ ಮಲಗಿನಿದ್ರಿಸುವ ನೀಂ ತರುತಲದ
ಬಿರುನೆಲದ ಮೇಲೆಂತು ನಿದ್ರಿಸುವೇ? ಷಡ್ರಸೋ
ಪೇತ ಮೃಷ್ಟಾನ್ನಮಂ ಭುಂಜಿಸುತೆ ಭಿಕ್ಷಾನ್ನ
ದಿಂದೆಂತು ಜೀವಿಸುವೆ? ಆಗದೆಂದೆಂದಿಗೂ

ಈ ಮಾತುಗಳು ಕೃತಕವಾಗಿದ್ದು, ನಾಟಕೀಯವೆನಿಸುತ್ತವೆ. 'ಗೌತಮಬುದ್ಧ' ಪೌರಾಣಿಕ ನಾಟಕವಾಗಿದ್ದು, ರತಿಮನ್ಮಥ ಮುಂತಾದ ಅತಿಮಾನುಷಪಾತ್ರಗಳು ರಂಜನೀಯವಾಗಿವೆ. ಅತಿಮಾನುಷ ಕಲ್ಪನೆ, ಪವಾಡ ಸದೃಶ ಘಟನೆಗಳ ನೆರವಿಲ್ಲದೆಯೂ ವಸ್ತುವಿನ ರಚನೆಯಲ್ಲಿ ಹೊಸತನ ತರುವ ಪ್ರತಿಭೆ ನಾಟಕಕಾರರಿಗಿದೆ. ಛಂದಸ್ಸಿನ ದೃಷ್ಟಿಯಿಂದ ನೋಡಿದಾಗ ಜನಪ್ರಿಯ ನಾಟಕವಾದ್ದರಿಂದ ಅಲ್ಲಲ್ಲಿ ಗೀತೆಗಳು ಕಂದ ಪದ್ಯಗಳು ಕಾಣಿಸಿಕೊಂಡಿದ್ದು, ನಡುಗನ್ನಡ ಶೈಲಿಯ ಭಾಷೆಯನ್ನು ಮತ್ತು ಹೊಸಗನ್ನಡ ಗದ್ಯಶೈಲಿಯಲ್ಲಿ ಬಿಗಿಯಾದ ಬಂಧವನ್ನು ಕಾಣಬಹುದು.

ಮಾಸ್ತಿಯವರ 'ಯಶೋಧರಾ' ಸರಳ ರಗಳೆಯ ಛಂದಸ್ಸಿನಲ್ಲಿ ರಚಿತವಾದ ನಾಟಕವಾಗಿದ್ದು, ಪರಿಣಾಮಕಾರಿಯಾಗಿ ಮೂಡಿಬಂದಿದೆ. ಜೀವನವನ್ನು ವಿಶಾಲ ದೃಷ್ಟಿಕೋನದಿಂದ ನೋಡುವ ಮಾಸ್ತಿಯವರ ಧೋರಣೆ ಕಥಾವಸ್ತುವಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ತಾತ್ವಿಕತೆಯಲ್ಲಿ, ಭಾಷಾ ಪ್ರಯೋಗದಲ್ಲಿ ಪಡಿಮೂಡಿರುವುದನ್ನು ಕಾಣಬಹುದು. ಮಾಸ್ತಿಯವರ ಯಶೋಧರಾ ನಾಟಕದ ಕ್ರಿಯೆ ಮಾನಸಿಕವಾದ್ದರಿಂದ ಅದನ್ನು ಅಭಿವ್ಯಕ್ತಗೊಳಿಸುವ ಕಾವ್ಯ ಭಾಷೆ

ಮುಖ್ಯವಾಗುತ್ತದೆ. ಹಾಗಾಗಿ ನಾಟಕ ಕ್ರಿಯೆಗಿಂತ ಹೆಚ್ಚಾಗಿ ಪ್ರತಿಮೆ, ರೂಪಕ, ಉಪಮೆಗಳನ್ನು ಅವಲಂಬಿಸುತ್ತದೆ. ನಿದರ್ಶನವಾಗಿ ನಾಟಕದ ಆರಂಭದಲ್ಲಿ ಪತಿಯಿಂದ ದೂರವಾದ ಯಶೋಧರೆ 'ಯಾವುದೋ ಬಾಳು ಇದು. ಯಾರೋ ಬಾಳುತಲಿಹರು, ನಾನು ನೋಡುತಲಿಹೆನು' ಎಂದು ತನ್ನ ನೋವಿನ ತೀವ್ರತೆಯನ್ನು ಅಂಬಿಕೆಗೆ ವಿವರಿಸುವ ಸಂದರ್ಭದ ಈ ಚಿತ್ರಣವನ್ನು ಗಮನಿಸಬಹುದು.

ಈ ನನ್ನ ನೋವು ದಿನ ದಿನಕ್ಕೆ ಹೊಸ ಹೊಸತಾಗಿ
ಉಪವನದ ಅಶ್ವತ್ಥ ನೆಲೆಯ ಕಟ್ಟೆಯ ಕೆದರಿ,
ಬೇರೂರಿ ಬೆಳೆದಂತೆ, ನನ್ನ ಜೀವವ ಸೀಳಿ
ಬೆಳೆಯುತ್ತಿರುವುದು ತಾಯಿ.

ಇಲ್ಲಿ ಅಶ್ವತ್ಥ ನೆಲೆಯ ರೂಪಕ ಚಿತ್ರ ಸೊಗಸಾಗಿ ಬಂದಿದೆ. ಈ ಪ್ರತಿಮೆಯ ಧ್ವನ್ಯಾರ್ಥ ವಿಶೇಷವಾಗಿದೆ. "ಯಶೋಧರೆಯ ಜೀವನದ ಸಂದರ್ಭದಲ್ಲಿ ಅಗಲಿಕೆಯ ನೋವು ಅಶ್ವತ್ಥನೆಲೆಯನ್ನು ಭೇದಿಸಿ ಆಳಕ್ಕಿಳಿಯುತ್ತಿದೆ ಮಾತ್ರವಲ್ಲ, ಕೆದರತ್ತಲೂ ಇವೆ. ಇಲ್ಲಿ ಬುದ್ಧ ಯಶೋಧರೆಯ ಜೊತೆಗೆ ಪರಂಪರಾನುಗತ ಮೌಲ್ಯಗಳನ್ನು ಧಿಕ್ಕರಿಸಿ ಹೋದ ಧ್ವನಿಯ ಜೊತೆ ಸಂತಾನ ಕರುಣಿಸುವುದೆಂಬ ನಂಬಿಕೆಯ ಅಶ್ವತ್ಥದ ನೆಲೆ ಕೆದರುತ್ತಿರುವುದರಲ್ಲಿ ರಾಹುಲನೂ ತಂದೆಯ ಹಾದಿ ಹಿಡಿಯಬಹುದೆಂಬ ಭೀತಿಯು ಧ್ವನಿಸಿ ಈ ಪ್ರತಿಮೆ ಅರ್ಥಪೂರ್ಣವಾಗುತ್ತದೆ."[೧] ಇದೇ ದೃಶ್ಯದಲ್ಲಿ ಕನಸಿನ ತಂತ್ರದ ಮೂಲಕ ಹೇಳುವ

ಒಂದು ಹಿರಿಯಾಲದಡಿಯಲಿ ಸೊಗಸತಾಣದಲಿ
ನಿಂದೆನೊಂದರೆನಿಮಿಷ ನನ್ನ ಬದಿಯಲಿ ವೃಕ್ಷ
ಒಂದು ಬೀಳಲನು ಬಿಟ್ಟು ದೂರ ಸರಿಯಿತು ತಾಯಿ
ಬಿಳಲ ನೋಡುವ ಭರದಿ ಮರ ಸರಿದುದರಿಯದೆ
ನಾನಿತ್ತಲೇ ಮನವ ನೆಟ್ಟು ಕೌತುಕದಿಂದ

---

೧. ಮಾಸ್ತಿಯವರ ನಾಟಕಗಳು ಜಿ.ಎಸ್ ರಂಗನಾಥರಾವ್, ಬೆಂಗಳೂರು ವಿಶ್ವವಿದ್ಯಾನಿಲಯ

ಕುಡಿತಳಿರ ನೋಡಿ ಮೆಯ್ ಸವರಿ ಆಹಾ ಎಷು
ಚೆಂದವಾಗಿಹುದು ಎನ್ನುತಲಿರಲು. . .
ದೂರಸರಿದಿರ್ದ ಮರ
ಒಂದು ಕೈ ನೀಡಿ ಎಳೆಯನಿಗೆ ಸನ್ನೆಯ ಮಾಡಿ
ಬಾ ಎಂದು ಕರೆಯಿತ್ತಿತ್ತು.

ವೃಕ್ಷ ಪ್ರತಿಮೆಯು ನಾಟಕಕ್ಕೆ ಕಲಾತ್ಮಕ ಸೊಗಸನ್ನು ನೀಡುತ್ತದೆ. ಹಾಗೆಯೇ ನಾಟಕದಲ್ಲಿ ಕಥೆ, ಪಾತ್ರ ಸ್ವಭಾವ, ಸನ್ನಿವೇಶ ಸಂದರ್ಭಗಳಿಗೆ ಅನುಗುಣವಾಗಿ ಭಾಷೆಯ ಬಳಕೆ ಇದೆ. ಇಲ್ಲಿನ ನಾಟಕ ಕ್ರಿಯೆ ಬಹಿರಂಗಕ್ಕಿಂತ ಹೆಚ್ಚಾಗಿ ಅಂತರಂಗದಲ್ಲಿ ನಡೆಯುತ್ತಿರುವುದರಿಂದ ಇಲ್ಲಿಯ ಪಾತ್ರ, ಘಟನೆಗಳಿಗಿಂತ ಭಾಷೆಯೇ ವಿಜೃಂಬಿಸುತ್ತದೆ. ಸರಳ ರಗಳೆಯ ಈ ನಾಟಕವನ್ನು ಪದ್ಯ ನಾಟಕವೆಂದು ಕರೆಯಬಹುದು. ಹಾಗೆಯೇ ಮಾಸ್ತಿಯವರ ಸಾತ್ವಿಕ ದೃಷ್ಟಿಕೋನ ಮತ್ತು ಸೌಮ್ಯವಾದಿ ನಿಲುವನ್ನು ನಾಟಕ ತಂತ್ರದಲ್ಲಿಯೂ ಕಾಣಬಹುದು. ನಾಟಕದ ಮಧ್ಯದಲ್ಲಿ ಕಾಣಿಸಿಕೊಳ್ಳುವ ಕೌಂಡಿನ್ಯ, ಕೌಶಿಕ, ಭಾರಧ್ವಾಜ ಮೊದಲಾದವರ ಸಂಭಾಷಣಾ ದೃಶ್ಯ ನಾಟಕದ ಓಟಕ್ಕೆ ಧಕ್ಕೆ ತಂದರೂ ಯಶೋಧರೆಯ ಮಾನಸಿಕ ಒಳತೋಟಿಗೆ ಧರ್ಮದ ವಿಶಾಲವ್ಯಾಪ್ತಿಯನ್ನು ತಂದುಕೊಡುತ್ತದೆ.

ಒಟ್ಟಾರೆಯಾಗಿ ಮಾಸ್ತಿಯವರ ಸ್ತ್ರೀವಾದಿ ನೆಲೆಯ 'ಯಶೋಧರಾ' ಅಭಿವ್ಯಕ್ತಿಯ ದೃಷ್ಟಿಯಲ್ಲಿ ತನ್ನ ಕಾವ್ಯಗುಣಗಳಿಂದ ಒಂದು ಸುಂದರ ಪ್ರಯೋಗವಾಗಿದೆ.

ರಂಗಪರಿಕಲ್ಪನೆಯ ಅರಿವಿದ್ದ ಕಾರಂತರ 'ಕಿಸಾಗೋತಮಿ' ಮತ್ತು 'ಬುದ್ಧೋದಯ' ಎರಡು ಗೀತ ನಾಟಕಗಳಾಗಿವೆ. ಕಾರಂತರು ಗೀತ ನಾಟಕಗಳಲ್ಲಿ ಪ್ರಯೋಗಿಸುವ ತಂತ್ರ ಅದರ ಯಶಸ್ಸಿಗೆ ಕಾರಣವಾಗಿದೆ. ಕಾರಂತರ ಭಾಷಾ ಸಾಮರ್ಥ್ಯವು ವಿಫುಲವಾಗಿರುತ್ತದೆ. ಭಾಷಾ ಸಾಮರ್ಥ್ಯದ ಗಳಿಕೆ ಹೆಚ್ಚಾದಂತೆಲ್ಲಾ ಕಾವ್ಯ ತಂತಾನೆ ಬೆಳೆಯುತ್ತಾಹೋಗುತ್ತದೆ. ಆದ್ದರಿಂದ ಗೀತ ನಾಟಕದಲ್ಲಿ ಕೂಡ ಭಾಷಾ ಸಾಮರ್ಥ್ಯದ ಗಳಿಕೆಯನ್ನು ಗಮನಿಸಬೇಕಾಗುತ್ತದೆ.

ಪು.ತಿ.ನ ಅವರ ಗೀತ ನಾಟಕಗಳ ಉಜ್ವಲತೆ ಕಾರಂತರ ಗೀತ ನಾಟಕಗಳಿಗೆ ಇಲ್ಲದೇ ಹೋದರೂ ಪ್ರಯೋಗ ವೈವಿಧ್ಯವುಳ್ಳ ಗೀತ ನಾಟಕಗಳನ್ನು ರಚಿಸಿದ ಕೀರ್ತಿ ಶಿವರಾಮ ಕಾರಂತರದು. ಶುದ್ಧ ವೈಚಾರಿಕ ನಿಲುವಿನ ಕಾರಂತರು ಎರಡು ನಾಟಕಗಳನ್ನು ಹಿಮ್ಮೇಳ ಅಥವಾ

ನೇಪಥ್ಯಗಾನವಿಲ್ಲದೆ ನಿರೂಪಿಸಿರುವುದು ವಿಶಿಷ್ಟವಾಗಿದೆ. ಸಂಭಾಷಣೆಯಲ್ಲಿ ನಾಟಕೀಯ ವ್ಯಂಗ್ಯವಿದೆ. 'ಕಿಸಾಗೋತಮಿ' ಯಲ್ಲಿ ಕಾಣಿಸಿಕೊಳ್ಳುವ ಪ್ರಾಸಬದ್ಧ ಗೀತೆಗಳು ಅಭಿವ್ಯಕ್ತಿಗೆ ತೊಡಕಾಗುವುದಿಲ್ಲ. ದೃಶ್ಯಾರಂಭದಲ್ಲಿ ಬರುವ ಕಿಸಾಗೋತಮಿಯ,

ಹಗಲೆಲ್ಲ ... ಕತ್ತಲಾಯಿತು.

ಬಾಳೆಲ್ಲಾ ... ಬರಿದು ಆಯ್ತು...

ಬೆಳಗಿಪರು ಯಾರದನು?

ತೊಡಗಿಪರು ಯಾರದನು?

ಮುಳುಗಿದೆನ್ನಯ ರವಿಯ ತೇಲಿಪರು ಯಾರು?

ಎಂಬ ಕಿಸಾಗೋತಮಿಯ ರೋದನದಲ್ಲಿ ಆಕೆ ಹೇಳುವ ಆ ಪದಗಳಲ್ಲಿ ಪುನರುಕ್ತಿ ಇದ್ದರೂ ಇಲ್ಲಿ ಅದು ದೋಷವಲ್ಲ, ಅದು ಅನುರಣನ ಗುಣ. ಇಲ್ಲಿನ ಲಯ, ತಾಳ, ನಾದಗಳಲ್ಲಿ ಕಾವ್ಯದ ಸೊಬಗು ಅಡಗಿದೆ.

'ಕಿಸಾಗೋತಮಿ' ಪ್ರಶ್ನೆ ಉತ್ತರಗಳ ಸಂಭಾಷಣಾ ಕೌಶಲದಲ್ಲಿ ಸ್ವಾನುಭವದಿಂದ ಸಾವಿನ ಅನಿವಾರ್ಯತೆಯನ್ನು ತಿಳಿಯುವ ತಾಯೊಬ್ಬಳ ಚಿತ್ರ. ಸಾವಿನ ರಹಸ್ಯ ಪ್ರಶ್ನಾತೀತವಾದುದೆಂಬುದನ್ನು ಈ ವಾಗ್ವಾದದ ಮೂಲಕ ಮನವರಿಕೆ ಮಾಡಿಕೊಡುವ ತಂತ್ರವಿದೆ. ಅಂತಿಮವಾಗಿ 'ಸಾವಿಲ್ಲದೆಡೆಯಿಲ್ಲ, ನೋವಿಲ್ಲದೆಡೆಯಿಲ್ಲ, ಸಾವು ಜೀವಕೆ ನಂಟು' ಎಂಬ ಸತ್ಯದ ಅರಿವಿನಿಂದ ನಾಟಕ ಮುಕ್ತಾಯವಾಗುತ್ತದೆ. ಸಾವಿನಂತಹ ಗಂಭೀರ ವಿಚಾರವನ್ನು ಸರಳವಾದ ಭಾಷೆಯಲ್ಲಿ ಹಿಡಿದಿಡುವ ಕಾರಂತರ ಪ್ರಯತ್ನ ಅನ್ಯಾದೃಶವಾದುದು.

ಆರು ದೃಶ್ಯಗಳ ಬುದ್ಧೋದಯದಲ್ಲಿ ಕಾರಂತರು ಅನಾವಶ್ಯಕ ಸಂಭಾಷಣೆ, ಸನ್ನಿವೇಶಗಳನ್ನು ತರದೆ ಸರಳವಾಗಿ ಆದರೆ ಉತ್ತಮವಾಗಿ ಸಿದ್ಧಾರ್ಥ ಬುದ್ಧನಾದ ಸಂದರ್ಭವನ್ನು ಚಿತ್ರಿಸುತ್ತಾರೆ. "ಬಡತನ ಅಸ್ಪೃಶ್ಯತೆ ಬಂಡವಾಳತನ ಇತ್ಯಾದಿ ಸಮಸ್ಯೆಗಳನ್ನು ನೇರವಾಗಿಯೂ, ಸಾಂಕೇತಿಕವಾಗಿಯೂ ನಿರೂಪಿಸುವ ನಾಟಕಗಳನ್ನು ಗದ್ಯದಲ್ಲಿಯೇ ರಚಿಸಿದರು. ಅಲ್ಲಲ್ಲಿ ಅವಶ್ಯಕತೆ ಇರುವೆಡೆಯಲ್ಲಿ ವಸ್ತು ಮತ್ತು ಉದ್ದೇಶದ ಔಚಿತ್ಯಕ್ಕೆ ತಕ್ಕಂತೆ ಸರಳ ರಗಳೆಯನ್ನು ಬಳಸಿದರು. ಅವರ ದೃಷ್ಟಿಯಲ್ಲಿ ವಾಸ್ತವ ಚಿತ್ರಣಕ್ಕೆ ಸಮರ್ಪಕವಾದರೆ ದೇಶ, ಕಾಲ, ಆವರಣ ಪ್ರಧಾನವಾಗಿ ಎಲ್ಲ ಕಾಲಕ್ಕೂ ಒಪ್ಪುವ ಮಾನವ ಸ್ವಭಾವ ಚಿತ್ರಣವೇ

ಮುಖ್ಯವಾದಲ್ಲಿ ಸರಳ ರಗಳೆ ಉಪಯುಕ್ತ ಮತ್ತು ಉಚಿತ ಮಾಧ್ಯಮವಾಗುತ್ತದೆ."[೨] ಎಂದು ಕಾರಂತರೇ ಹೇಳಿಕೊಂಡಿದ್ದಾರೆ. ಕಾರಂತರ ಈ ಎರಡೂ ನಾಟಕಗಳು ಸರಳ ಭಾಷೆಯ ಗೀತ ನಾಟಕಗಳಾಗಿವೆ. ಗೀತನಾಟಕಗಳು ಆಡುಮಾತಿನ ಸತ್ವವನ್ನು ಒಳಗೊಂಡಿರುತ್ತದೆ.

ಪ್ರಭುಶಂಕರರ ನಾಲ್ಕು ನಾಟಕಗಳಲ್ಲಿ ಅಂಗುಲೀಮಾಲ ಗೀತನಾಟಕವಾಗಿದ್ದು, ಪ್ರಭುಶಂಕರರಿಗೆ ಉತ್ಕೃಷ್ಟ ಕಾವ್ಯಗಳ ಸತ್ಸಂಗವಿದ್ದು, ಶಬ್ದಗಳ ಮೇಲೂ ಛಂದಸ್ಸಿನ ಮೇಲೂ ಪ್ರಭುತ್ವವಿದೆ. 'ಆಮ್ರಪಾಲಿ' ಮತ್ತು 'ಸುಜಾತ' ಗದ್ಯದಲ್ಲಿ ನಿರೂಪಿತವಾದರೆ 'ಗಾಳಿ ಎಂಬ ಕುದುರೆ ಏರಿ', ಗದ್ಯ-ಪದ್ಯ ಮಿಶ್ರಿತವಾಗಿದ್ದರೂ ಹೆಚ್ಚು ಗದ್ಯವಿರುವುದರಿಂದ ಇದೊಂದು ಗದ್ಯ ನಾಟಕವೇ ಆಗಿದೆ. ನಾಟಕ ಮುಂದುವರಿದಂತೆಲ್ಲ ಪಾತ್ರಗಳ ವ್ಯಕ್ತಿತ್ವ ಔನ್ನತ್ಯದ ಕಡೆಗೆ ಸಾಗುವುದು ಇಲ್ಲಿನ ವಿಶೇಷ.

'ಸುಜಾತ' ಮತ್ತು 'ಗಾಳಿ ಎಂಬ ಕುದುರೆ ಏರಿ' ಯಲ್ಲಿ ಸ್ಮರಣ ತಂತ್ರವಿದ್ದು ಅಭಿವ್ಯಕ್ತಿಗೆ ಹೊಸತನ ನೀಡಿದೆ. ಪ್ರಭುಶಂಕರರ ಗೀತ ನಾಟಕ ಅಂಗುಲೀಮಾಲವನ್ನು ಹೊರತುಪಡಿಸಿ ಉಳಿದವು ಹೊಸಗನ್ನಡ ಭಾಷಾ ಶೈಲಿಯ ಸರಳತೆಯನ್ನು ಒಳಗೊಂಡಿವೆ ಹಾಗೂ ಈ ಎಲ್ಲ ನಾಟಕಗಳು ಆಯ್ಕೆ ಮಾಡಿಕೊಂಡಿರುವ ವಸ್ತುವಿನಲ್ಲೇ ಕಲಾತ್ಮಕತೆ ಸಾಧಿಸಿವೆ ಎನ್ನಬಹುದು.

ಮನಜ ಅವರ 'ಜಲ' ಹೊಸಗನ್ನಡದ ಆಡುಮಾತಿನ ಸತ್ವವನ್ನು ಒಳಗೊಂಡ ಗದ್ಯನಾಟಕವಾಗಿದೆ. ಇವರೂ ಸಹ ಪ್ರಭುಶಂಕರರಂತೆ ವಸ್ತುವಿನಲ್ಲೆ ಹೊಸತನ ತಂದು ಕೃತಿಗೆ ಕಲಾತ್ಮಕ ಸ್ಪರ್ಶ ನೀಡಿದ್ದಾರೆ. ಇಡೀ ನಾಟಕ ಜಲವಿವಾದದಂತಹ ಸಮಸ್ಯೆಯೊಂದನ್ನು ತೆಗದುಕೊಂಡು ಸಿದ್ಧಾರ್ಥನ ಸನ್ಯಾಸ ಸ್ವೀಕಾರಕ್ಕೆ ಈ ಜಲವಿವಾದದ ಕುಟಿಲ ರಾಜಕೀಯ ಕಾರಣವಾದದ್ದನ್ನು ಬಿಂಬಿಸುತ್ತದೆ. ನಾಟಕದುದ್ದಕ್ಕೂ ಒಂದೇ ರೀತಿಯ ಕುತೂಹಲವನ್ನು ಕಾಯ್ದುಕೊಂಡುಹೋಗುವ ನಿರೂಪಣೆ ಇದೆ. ಗೌತಮನಿಗಾದ ಅನ್ಯಾಯದ ಕಾರಣದಿಂದಲೇ ಲೋಕಕ್ಕೆ ನ್ಯಾಯ ಒದಗಿದ್ದನ್ನು, ಬುದ್ಧನಂತಹ ವ್ಯಕ್ತಿ ಉದಯವಾದದ್ದನ್ನು ರಾಜಕೀಯದ ಹಿನ್ನಲೆಯಲ್ಲಿ ಚಿತ್ರಿಸುತ್ತದೆ. ನಾಟಕದ ಆರಂಭದಲ್ಲಿಯೇ ಮೇಳದವರು ಹಾಡುವ

---

೨. ಡಾ॥ ಶಿವರಾಮ ಕಾರಂತ-ನಾನು ಮತ್ತು ರಂಗಭೂಮಿ ಸ್ಮತಿಪಟಲದಿಂದ

ಹಾಡು ಗೌತಮನು ಅವತಾರ ಪುರುಷನೆಂದು, ಶಾಕ್ಯ ನಾಡಿನ ರೋಹಿಣಿ ನದಿ ಸಾಮಾನ್ಯವಾದದ್ದಲ್ಲವೆಂದು ಮುಂದಿನ ಎಲ್ಲ ಘಟನೆಗಳಿಗೆ ಪುರಾಣದ ಈ ಅಂಶದಿಂದ ತಳಹದಿ ಹಾಕಿಕೊಡುತ್ತದೆ. ಗೌತಮಬುದ್ಧ ನಾಗುವುದರ ಸೂಚನೆಯೂ ಇಲ್ಲಿ ದೊರೆಯುತ್ತದೆ,

ಕಾಲಕಾಲಕೂ ನಡೆಯದೆಂದು
ಅರಿವು ಕೊಲುವುದು ಆಗದೆಂದು
ಯಾರಿಗೂ ಕಾಯದೆ ಬಂದೇ ಬರಲಿದೆ
ಕುಟಿಲ ಕೋಟಿಯ ತುಳಿದು ಹಿಂದೆ.

ಎಂಬ ಮೇಳದ ಈ ಧ್ವನಿಪೂರ್ಣ ಮಾತುಗಳು ಅನ್ಯಾಯ, ಆಧರ್ಮದ ನಾಶಕ್ಕಾಗಿ ಮಹಾವ್ಯಕ್ತಿಗಳ ಹುಟ್ಟು ಸಂಭವಿಸುತ್ತದೆ ಎಂಬ ಲೋಕೋಕ್ತಿಯನ್ನು ಬಿಂಬಿಸುತ್ತದೆ. ನಾಟಕದಲ್ಲಿ ಗದ್ಯಭಾಷೆಯೇ ಮುಖ್ಯವಾಗಿದ್ದು ಕೆಲವೊಮ್ಮೆ ಅಭಿವ್ಯಕ್ತಿಯಲ್ಲಿ ಪದ್ಯವೂ ತಲೆದೋರಿದ್ದರೂ ಅದು ಕೂಡ ಗದ್ಯದ ಗುಣವನ್ನೇ ಹೊಂದಿದೆ. 'ಜಲ' ನಾಟಕದ ಮತ್ತೊಂದು ವಿಶೇಷವೆಂದರೆ ಇಲ್ಲಿನ ಆಡು ಮಾತಿನ ಸೊಗಸು. ಉದಾಹರಣೆಗೆ ನಗರವಾಸಿಗಳ ಚರ್ಚೆಯ ಸಂದರ್ಭದಲ್ಲಿ ದೇವದತ್ತನಿಗೆ ಗೌತಮನ ಮೇಲಿರುವ ದ್ವೇಷದ ವಿಚಾರ ಪ್ರಸ್ತಾಪವಾದಾಗ

'ಇಷ್ಟಕ್ಕೂ ದೇವದತ್ತ ಗೌತಮನ್ ಕಂಡು ವಟ್ಟೆಕಿಚ್ ಪಡ್ತೀರೋದು ಇದೇ ವಸ್ಡೇನೂ ಅಲ್ಲ. ಅವನು ಸದಾ ಗೌತಮನ ಆಜನ್ಮವೈರಿಯಾಗಿ ವರ್ತಿಸ್ತಿರೋ ಇಚಾರ ನಮ್ದೇಸ್ದಲ್ಲಿ ಯಾರಿಗೊತ್ತಿಲ್ಲ.?'

ಎಂಬ ಮಾತುಗಳನ್ನು ಗಮನಿಸಬಹುದು. ಬುದ್ಧನಂತಹ ಮಹಾನ್ ವ್ಯಕ್ತಿ ಜೀವನ ಚಿತ್ರಣಕ್ಕೆ ಇಂತಹ ಭಾಷೆ ಗಾಂಭೀರ್ಯ ತಂದುಕೊಡುವುದಿಲ್ಲ ಎಂದೆನೆಸಿದರೂ ನಾಟಕದ ಕಥಾವಸ್ತುವಿನ ಹೊಸತನದ ಕಾರಣ ಮತ್ತು ಬದಲಾವಣೆಯನ್ನು ತರಬಯಸುವ ನಾಟಕಕಾರರ ದೃಷ್ಟಿಕೋನದ ಕಾರಣ ಇಂತಹ ಭಾಷೆಯು ಸೂಕ್ತವೆನಿಸುತ್ತದೆ. ನೇರವಾಗಿ ಮಾತನಾಡಿದ ಹಾಗೆ ತೋರುವ ಛಂದೋವಿಧಾನದ ಬಳಕೆಯನ್ನು ಇಲ್ಲಿ ಗಮನಿಸಬಹುದು. "ಗ್ರಾಮೀಣವೂ ಅರ್ಧ ನಾಗರೀಕವೂ ಆದ ಒಂದು ಭಾಷೆಯನ್ನು ಸಮಕಾಲೀನ ಸಂವೇದನೆಯ ಅಭಿವ್ಯಕ್ತಿಗಾಗಿ –

ದುಡಿಸಿಕೊಳ್ಳಬೇಕಾದ ಸಮಸ್ಯೆಯೇ ತುಂಬಾ ಮುಖ್ಯವಾದುದು"[೩] ಈ ಸಮಸ್ಯೆಗೆ ಉತ್ತರವನ್ನು ಕಂಡುಕೊಂಡಿದ್ದಾರೆ ಮನಜ. ನಾಟಕದ ಕೊನೆಯಲ್ಲಿ ಗೌತಮನಿಗೆ ಯಶೋಧರೆಯು ಹಾಕುವ ಭಿಕ್ಷೆಯ ಅರ್ಥವನ್ನು ವ್ಯಾಖ್ಯಾನಿಸಿರುವಲ್ಲಿಯೂ ನಾಟಕಕಾರರ ನೂತನ ದೃಷ್ಟಿಕೋನ ಕೆಲಸ ಮಾಡಿದೆ. 'ಜಲ' ನಾಟಕ ಪಾತ್ರಗಳ ಸಂಭಾಷಣೆಗಿಂತ ದೃಶ್ಯವೇ ಪ್ರಧಾನವಾಗಿರುವುದರಿಂದ ಇಲ್ಲಿ ಭಾಷೆಗಿಂತ ಕ್ರಿಯೆ ಹೆಚ್ಚು ಪ್ರಾಮುಖ್ಯ ಪಡೆಯುತ್ತದೆ. ನಾಟಕಕ್ಕೆ ಕ್ರಿಯೆ ಮುಖ್ಯವೂ ಆಗಿರುವುದರಿಂದ ರಂಗಕೃತಿಯಾಗಿ ನಾಟಕದ ಯಶಸ್ಸಿಗೆ ಕಾರಣವಾಗುತ್ತದೆ.

ಒಟ್ಟಾರೆಯಾಗಿ ಅಭಿವ್ಯಕ್ತಿ ಮತ್ತು ಕಲಾತ್ಮಕ ದೃಷ್ಟಿಯಿಂದ ನಿಬಂಧದ ಎಲ್ಲಾ ನಾಟಕಗಳು ವೈಶಿಷ್ಟ್ಯವನ್ನು ಮೆರೆದಿರುವುದು ಗಮನಾರ್ಹವಿಚಾರವಾಗಿದೆ. ಕುವೆಂಪು ಮತ್ತು ಮಾಸ್ತಿಯವರು ಪದ್ಯ ಮಾಧ್ಯಮದಲ್ಲಿ ಅಭಿವ್ಯಕ್ತಿಸಿದರೆ ಬಿ. ಪುಟ್ಟಸ್ವಾಮಯ್ಯನವರು ಗದ್ಯವನ್ನು ಬಳಸಿಕೊಂಡಿದ್ದಾರೆ. ಆದರೆ ಈ ಇಬ್ಬರ ಕೃತಿಗಳಲ್ಲಿಯೂ ಕಾವ್ಯಾತ್ಮಕ ಗುಣಗಳಿರುವುದು ನಾಟಕಕ್ಕೆ ಸೊಗಸು ತಂದುಕೊಟ್ಟಿದೆ. ಕಾರಂತರು ಮಾತ್ರ ಪೌರಾಣಿಕ ವಸ್ತುವಿಗೆ ಯೋಗ್ಯವಾದ ಗೀತನಾಟಕವನ್ನು ರಚಿಸಿರುವುದು ವಿಶಿಷ್ಟವಾಗಿದೆ. ಮನಜ ಅವರು ಆಡು ಮಾತಿನ ಗದ್ಯವನ್ನು ಬಳಸಿಕೊಂಡಿದ್ದಾರೆ.

ನಿಬಂಧದ ವ್ಯಾಪ್ತಿಗೆ ಒಳಪಡುವ ನಾಟಕಗಳು ಕಥಾವಸ್ತು, ಪಾತ್ರ ವಿವೇಚನೆ, ಸನ್ನಿವೇಶ ನಿರ್ಮಾಣ, ತಾತ್ವಿಕ ದೃಷ್ಟಿಕೋನ ಮೊದಲಾದವುಗಳೊಂದಿಗೆ ಭಾಷೆ, ಛಂದಸ್ಸು ತಂತ್ರಗಳಲ್ಲೂ ಕಲಾತ್ಮಕತೆ ಸಾಧಿಸಿರುವುದು ಸ್ಪಷ್ಟವಾಗುತ್ತದೆ.

---

೩. ಪ್ರಜ್ಞೆ ಮತ್ತು ಪರಿಸರ ಯು.ಆರ್ ಅನಂತಮೂರ್ತಿ. ಪುಟ ಸಂ. ೧೦೧

ಅಧ್ಯಾಯ– ೭

ಉಪ ಸಂಹಾರ

ಬುದ್ಧ ಬುದ್ಧ ಬುದ್ಧ
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ

ಎಂಬ ದ.ರಾ ಬೇಂದ್ರೆಯವರ ಕವನದ ಸಾಲುಗಳು ಬುದ್ಧನ ಜೀವನದ ಸಾರವನ್ನು ಒಂದು ವಾಕ್ಯದಲ್ಲಿ ವ್ಯಾಖ್ಯಾನಿಸುತ್ತದೆ. ಭೋಗದ ತುತ್ತ ತುದಿಯಲ್ಲಿದ್ದ ಶಾಕ್ಯರಸ ಲೌಕಿಕ ಕಾಮನೆಗಳನ್ನು ಮೀರಿದ ಆಧ್ಯಾತ್ಮಿಕ ಸೆಳೆತಕ್ಕೆ ಒಳಗಾದುದು ಲೋಕ ಪ್ರಸಿದ್ಧ ವಿಚಾರವಾಗಿದೆ. ಇಂತಹ ವೈರಾಗ್ಯ ನಿರೂಪಣೆ ಪ್ರಾಚೀನ ಜೈನ ಕಾವ್ಯಗಳಲ್ಲಿ ಕಂಡುಬಂದರೂ ಬುದ್ಧನ ವೈರಾಗ್ಯ ಅವೆಲ್ಲಕ್ಕಿಂತ ವಿಶಿಷ್ಟವಾದದು. ಜೈನ ತೀರ್ಥಂಕರರು ಭೋಗವನ್ನು ಸಂಪೂರ್ಣವಾಗಿ ಅನುಭವಿಸಿ, ನಂತರ ವೈರಾಗ್ಯ ಪರವಶರಾದರೆ ಭೋಗದ ತೀವ್ರ ಸೆಳೆತದಲ್ಲಿದ್ದಾಗಲೇ ಅದನ್ನು ತ್ಯಜಿಸಿ ಸನ್ಯಾಸ ಸ್ವೀಕರಿಸಿದ್ದು ಬುದ್ಧನ ವೈಶಿಷ್ಟ್ಯ. ಸತ್ಯ ಶೋಧನೆಯ ಮಾರ್ಗದಲ್ಲಿ ಹಿಂದಿನ ಧರ್ಮಗಳ ಹಾದಿಯನ್ನು ಅನುಸರಿಸಿ ಅದರಲ್ಲಿ ವಿಫಲನಾದ ನಂತರ ನೂತನ ಮಾರ್ಗವನ್ನು ನಿರ್ಮಿಸಿದ ಮಾರ್ಗದಾತ ಬುದ್ಧ. ಯಾವ ಸಂಕೋಲೆಗೂ ಒಳಗಾಗದೆ ಯಾವ ಧರ್ಮ ಅಥವಾ ದೈವದ ಆರಾಧಕನಾಗದೆ ಜ್ಞಾನ ಸಂಪಾದಿಸಿದ ಮೊದಲಿಗ ಬುದ್ಧ. ವಿಚಾರಪ್ರದವಾದ, ಜನಸಾಮಾನ್ಯರ ಕಷ್ಟ ಕೋಟಲೆಗಳಿಗೆ ಪರಿಹಾರ ಕಂಡುಹಿಡಿಯುವ ಗುರಿಯುಳ್ಳ ಬುದ್ಧ ಬೋಧಿಸಿದ ತತ್ವಗಳು ಅವನ ನಂತರ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿತು. ತಾನು ಕಂಡುಕೊಂಡ ಜ್ಞಾನದ ಬಲದಿಂದ ದೈನಂದಿನ ಜೀವನದ ಸಾವು ನೋವಿನಂತಹ ಸಮಸ್ಯೆಗಳಿಗೆ ಪರಿಹಾರ ನೀಡಲು ಜನರ ಬಳಿಗೆ ಹೋದಂತಹ ಮಹಾನ್ ಮಾನವತಾವಾದಿ ಆತ. ಜೀವನದ ಮುಖ್ಯ ಸಮಸ್ಯೆಯಾದ ದುಃಖವನ್ನು ಕುರಿತು ಚರ್ಚಿಸಿ 'ಆಸೆಯೇ ದುಃಖಕ್ಕೆ ಮೂಲ' ಎಂಬ ತತ್ವದಿಂದ ಅದಕ್ಕೆ ಪರಿಹಾರವನ್ನು ಸೂಚಿಸಿದ ಬುದ್ಧ ಮತ್ತು ಅವನ ಬೋಧನೆಗಳು ಜೀವಪರ, ಜನಪರವಾಗಿದ್ದರಿಂದಲೇ ಜನಪ್ರಿಯವೂ ಆಯಿತು.

ಬುದ್ಧ ಕ್ರಿಸ್ತ ಪೂರ್ವದ ವ್ಯಕ್ತಿಯಾದರೂ ಆತನ ಜೀವನ ಮತ್ತು ಆತ ಬೋಧಿಸಿದ ತತ್ವಗಳು ಸಾರ್ವಕಾಲಿಕ ಮೌಲ್ಯವನ್ನು ಪಡೆದಿರುವಂತಹವು. ಹಿಂಸೆ, ಕ್ರೌರ್ಯಕ್ಕೆ

ಪರ್ಯಾಯವಾಗಿ ಶಾಂತಿ ಕರುಣೆಯ ಸಂದೇಶವನ್ನು ಸಾರಿದ ಆತ "ನಿನ್ನೆಯವನಲ್ಲ. ಇವೊತ್ತಿನವ, ನಾಳಿನವ, ಭವಿಷ್ಯದವ"[೧] ಹಾಗಾಗಿ ಸಿದ್ಧಾರ್ಥನಿಗೆ ವೈರಾಗ್ಯ ಪ್ರಾಪ್ತವಾಗಿ ಆತ ಗೃಹ ತ್ಯಾಗ ಮಾಡಿದ್ದು, ಜ್ಞಾನೋದಯವಾಗಿದ್ದು, ತನ್ನ ಜ್ಞಾನದ ಸಾರವನ್ನು ಜನರಿಗೆ ಬೋಧಿಸಿದ್ದು ಈ ಮೂರು ಅಂಶಗಳು ಎಲ್ಲಾ ಕಾಲಕ್ಕೂ ಪ್ರಸ್ತುತವಾಗುತ್ತವೆ. ಬುದ್ಧನ ಜೀವನವನ್ನು, ಜೀವನ ಮತ್ತು ಸಾಧನೆಯಿಂದ ಪ್ರಭಾವಿತರಾದ ನಮ್ಮ ಅನೇಕ ಸಾಹಿತಿಗಳು ಆತನ ಜೀವನವನ್ನು ಸೃಜನಶೀಲ ಪ್ರಕ್ರಿಯೆಗೆ ಒಳಗು ಮಾಡಿದ್ದು ಜಗತ್ತಿನ ಬಹುತೇಕ ಭಾಷೆಗಳಲ್ಲಿ ಬುದ್ಧ ಪರವಾದ ರಚನೆಗಳು ಕಾಣಿಸಿಕೊಂಡಿವೆ. ಪ್ರಸ್ತುತ ನಿಬಂಧದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ನಾಟಕ ಪ್ರಕಾರದಲ್ಲಿ ಬುದ್ಧ ನನ್ನು ಕುರಿತ ಹತ್ತು ಕೃತಿಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ.

'ಕಾವ್ಯೇಷು ನಾಟಕಂ ರಮ್ಯಂ' ಎಂಬ ಮೀಮಾಂಸಕರ ಮಾತಿನಂತೆ ರಮ್ಯವಾದ ನಾಟಕ ಪ್ರಕಾರದಲ್ಲಿ ಭವ್ಯವಾದ ಬುದ್ಧನ ಜೀವನವನ್ನು ಕಡೆದಿಡುವ ಪ್ರಯತ್ನವನ್ನು ಮಾಡಿದ್ದಾರೆ. ಕುವೆಂಪುರವರ 'ಮಹಾರಾತ್ರಿ', ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ', ಮಾಸ್ತಿಯವರ 'ಯಶೋಧರಾ', ಶಿವರಾಮಕಾರಂತರ 'ಕಿಸಾಗೋತಮಿ' ಮತ್ತು 'ಬುದ್ಧೋದಯ', ಪ್ರಭುಶಂಕರರ 'ಬುದ್ಧ ನಾಟಕ ಚಕ್ರ'ದಲ್ಲಿನ ಅಂಗುಲೀಮಾಲ, ಆಮ್ರಪಾಲಿ, ಸುಜಾತ ಮತ್ತು ಗಾಳಿ ಎಂಬ ಕುದುರೆ ಏರಿ ಎಂಬ ನಾಲ್ಕು ನಾಟಕಗಳು ಮನಜ ಅವರ 'ಜಲ' ಈ ಹತ್ತು ನಾಟಕಗಳನ್ನು ಈ ನಿಬಂಧದಲ್ಲಿ ತೌಲನಿಕ ವಿವೇಚನೆಗೆ ಒಳಗು ಮಾಡಿದೆ.

ಕುವೆಂಪು ಅವರ 'ಮಹಾರಾತ್ರಿ'. ಸಿದ್ಧಾರ್ಥ ಬುದ್ಧನಾಗಲು ಹೊರಟ ರಾತ್ರಿಯ ಚಿತ್ರಣವನ್ನು ಒಳಗೊಂಡಿದ್ದು, ಅರ್ಧರಾತ್ರಿ ವ್ಯಾಪ್ತಿಯ ಈ ನಾಟಕ ಸರಳ ರಗಳೆಯಲ್ಲಿ ರಚಿತವಾಗಿದೆ. ಹೊಸ ಪಾತ್ರಗಳ ಸೃಷ್ಟಿ, ಈಗಾಗಲೇ ಇರುವ ಪಾತ್ರಗಳನ್ನು ಮನೋವಿಶ್ಲೇಷಣಾತ್ಮಕ ನೆಲೆಗಟ್ಟಿನಲ್ಲಿ ವಿವೇಚಿಸುವುದು ಈ ನಾಟಕದ ಉದ್ದೇಶವಾಗಿದೆ. ಸಮಕಾಲೀನ ಸಮಾಜ ಪರಿಸ್ಥಿತಿಯ ವಿಡಂಬನೆಯು ಇಲ್ಲಿದೆ.

---

೧. ಷಷ್ಟಿ ಸಂಪದ: ರಾ.ಗೌ ಅಭಿನಂದನಾ ಗ್ರಂಥ. ಪುಟ –೫೫೧

ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ' ಬುದ್ಧನ ಸಮಗ್ರ ಜೀವನ ಚಿತ್ರವನ್ನು ಗದ್ಯರೂಪದಲ್ಲಿ ಅಭಿವ್ಯಕ್ತಿಸಿರುವ ನಾಟಕ ಕೃತಿಯಾಗಿದೆ. ಸಮಕಾಲೀನ ರಂಗಭೂಮಿಯನ್ನು ಹಿನ್ನೆಲೆಯಲ್ಲಿರಿಸಿಕೊಂಡು ರಚಿತವಾದ ಈ ಕೃತಿಯಲ್ಲಿ ಗಾಂಧೀಜಿಯವರ ಅಹಿಂಸಾ ತತ್ವದ ಪ್ರಭಾವವಿದೆ. ಅಲ್ಲಲ್ಲಿ ಗೀತೆಗಳು ಕಾಣಿಸಿಕೊಳ್ಳುವ ಈ ಕೃತಿಯಲ್ಲಿ ಕೆಲವೊಂದು ಸಂದರ್ಭದ ಚಿತ್ರಣದಲ್ಲಿ ಕುವೆಂಪು ಶೈಲಿಯ ಛಾಯೆಯಿದೆ. ಇದೊಂದು ಗದ್ಯನಾಟಕವಾದರೂ ಕಾವ್ಯಾತ್ಮಕ ಗುಣದಿಂದ ಮನಮುಟ್ಟುವಂತಿದೆ.

ಮಾಸ್ತಿಯವರ 'ಯಶೋಧರಾ' ನೇರವಾಗಿ ಬುದ್ಧನ ಜೀವವನ್ನು ಚಿತ್ರಿಸದೆ ಬುದ್ಧನ ಜೀವನದಲ್ಲಿ ಅನಾದರಕ್ಕೊಳಗಾಗಿದ್ದ ಆತನ ಪೂರ್ವಾಶ್ರಮದ ಸತಿ ಯಶೋಧರೆಯ ಮಾನಸಿಕ ತುಮುಲವನ್ನು ಹೃದಯಸ್ಪರ್ಶಿಯಾಗಿ ಅನಾವರಣಗೊಳಿಸುತ್ತದೆ. ಪ್ರತಿಮೆ ರೂಪಕಗಳಿಂದ ತುಂಬಿರುವ 'ಯಶೋಧರಾ' ಪದ್ಯ ನಾಟಕವಾಗಿದೆ. ಯಶೋಧರೆಯ ನೆಲೆಯಲ್ಲಿ ಬುದ್ಧನ ಜೀವನವನ್ನು ಶೋಧಿಸುವ ಈ ಕೃತಿಯಲ್ಲಿ ಮಾಸ್ತಿಯವರ ಸ್ತ್ರೀಪರ ಸಾತ್ವಿಕ ದೃಷ್ಟಿಕೋನವಿದ್ದು ಅಧ್ಯಾತ್ಮ ಮಾರ್ಗದಲ್ಲಿನ ಸ್ತ್ರೀಯ ಸಹಭಾಗಿತ್ವವನ್ನು ಎತ್ತಿಹಿಡಿಯುತ್ತದೆ.

ಕಾರಂತರ 'ಕಿಸಾಗೋತಮಿ' ಮತ್ತು 'ಬುದ್ಧೋದಯ' ಗೀತನಾಟಕಗಳಾಗಿದ್ದು, ಲಯ, ತಾಳ, ನಾದದಿಂದ ಮಧುರವಾಗಿದ್ದರೂ ವಸ್ತು ವಿವೇಚನೆಯಲ್ಲಿ ಗಾಂಭೀರ್ಯವನ್ನು ಒಳಗೊಂಡಿದೆ. ಸಾವಿನ ಅನಿವಾರ್ಯತೆಯನ್ನು ಸ್ವಾನುಭವದಿಂದ ಅರಿವು ಮಾಡಿಕೊಡುವ 'ಕಿಸಾಗೋತಮಿ', ಭೋಗಜೀವನದ ಉತ್ತುಂಗದಲ್ಲಿದ್ದು, 'ಬಯಲಾ ದಾಟುವ ಜಗವಾ ಸುತ್ತುವ' ಹಂಬಲವನ್ನು ವ್ಯಕ್ತಪಡಿಸುವ ಸಿದ್ಧಾರ್ಥನ ಗೃಹತ್ಯಾಗವನ್ನು ಬಿಂಬಿಸುವ 'ಬುದ್ಧೋದಯ' ಆಕಾರದಲ್ಲಿ ಕಿರಿದಾದರೂ ವಿಶಾಲ ಅರ್ಥವ್ಯಾಪ್ತಿಯನ್ನು ಧ್ವನಿಸುವಂಥದ್ದು.

ಪ್ರಭುಶಂಕರರ ನಾಲ್ಕು ನಾಟಕಗಳಲ್ಲಿ 'ಅಂಗುಲೀಮಾಲ' ಮತ್ತು 'ಆಮ್ರಪಾಲಿ' ನಾಟಕಗಳು ಬುದ್ಧನ ಪ್ರಭಾವಲಯಕ್ಕೆ ಒಳಗಾಗಿ ಸಮಾಜದಿಂದ ತಿರಸ್ಕೃತರಾದವರು, ಹಿಂಸೆ, ಕ್ರೌರ್ಯ ಮತ್ತು ಇಂದ್ರೀಯಾಕರ್ಷಣೆಗಳನ್ನು ಮೀರಿ ಉನ್ನತ ವ್ಯಕ್ತಿತ್ವದತ್ತ ಸಾಗುವ ಚಿತ್ರಣವನ್ನು ಒಳಗೊಂಡಿದ್ದು, ಕರುಣೆಯ ಸಂದೇಶವನ್ನು ರಾಗವಿರಾಗದ ಸಂಘರ್ಷವನ್ನು ಚಿತ್ರಿಸುತ್ತದೆ. 'ಸುಜಾತ' ಬುದ್ಧೋದಯದ ಸೂಚನೆಯನ್ನು ಪೂರ್ವಭಾವಿಯಾಗಿ ಅರಿತು ಮಹಾನ್ ಚೇತನದ ಆಗಮನಕ್ಕಾಗಿ ಹಂಬಲಿಸುವ ಹೆಣ್ಣೊಬ್ಬಳ ಕಥೆಯಾಗಿದ್ದು, ಸ್ಮರಣ ತಂತ್ರದ ಬಳಕೆಯಿಂದ

ವಿಶಿಷ್ಟವಾಗಿದೆ. 'ಗಾಳಿ ಎಂಬ ಕುದುರೆ ಏರಿ' ಕೃತಿಯಲ್ಲಿ ವೈರಾಗ್ಯದಿಂದ ಭೋಗದ ಕಡೆಗೆ, ಭೋಗದಿಂದ ವಿರಾಗದೆಡೆಗೆ ಸಾಗುವ ಇಬ್ಬರು ವ್ಯಕ್ತಿಗಳ ಮನಸ್ಥಿತಿಯನ್ನು ವಿವರಿಸುತ್ತದೆ. ಈ ಎಲ್ಲಾ ನಾಟಕಗಳು ತಂತ್ರದ ಗೋಜಿಗೆ ಹೋಗದೆ ಉದಾತ್ತ ದೃಷ್ಟಿಕೋನವನ್ನು ಸರಳವಾಗಿ ಬಿಂಬಿಸುತ್ತದೆ.

ಮನಜ ಅವರ 'ಜಲ' ಸಿದ್ಧಾರ್ಥನ ಗೃಹ ತ್ಯಾಗಕ್ಕೆ ಸಾಂಪ್ರದಾಯಿಕವಾದ ಹಿಂದಿನ ನಾಟಕಕಾರರು ನೀಡುವ ಕಾರಣವನ್ನು ನೀಡದೆ ಜಲವಿವಾದಂತಹ ಸಮಸ್ಯೆ ಕಾರಣವೆಂಬ ವ್ಯಾಖ್ಯಾನ ನೀಡುತ್ತದೆ. ಭಾಷೆ, ತಂತ್ರ ಮತ್ತು ವಸ್ತುವಿನಿಂದ 'ಜಲ' ವಿಭಿನ್ನವಾಗಿದೆ ಮತ್ತು ವಿಶಿಷ್ಟವಾಗಿದೆ. ಇಲ್ಲಿಯೂ ಅಹಿಂಸೆ ಮತ್ತು ಜೀವಪರವಾದ ಕಾಳಜಿಯ ಬುದ್ಧನ ಚಿತ್ರಣವಿದೆ.

ಒಟ್ಟಾರೆ ಪ್ರಸ್ತುತ ನಿಬಂಧದಲ್ಲಿ ನಾಟಕಕಾರರ ಪರಿಚಯ, ಬುದ್ಧನ ಜೀವನ ಚರಿತ್ರೆ, ನಾಟಕಗಳಲ್ಲಿ ಬುದ್ಧನ ಕಥಾವಸ್ತು, ಕಥಾವಿನ್ಯಾಸ, ದೃಷ್ಟಿಧೋರಣೆ, ತಂತ್ರ ಅಭಿವ್ಯಕ್ತಿ ವಿಧಾನಗಳಲ್ಲಿ ಈ ಎಲ್ಲಾ ನಾಟಕಕಾರರ ವೈಶಿಷ್ಟ್ಯವನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಈಗಾಗಲೇ ಈ ನಾಟಕಗಳನ್ನು ಕುರಿತು ಬಿಡಿ ಲೇಖನಗಳು ವಿಮರ್ಶೆಗಳು ಬಂದಿದ್ದರೂ ಈ ನಿಬಂಧದಲ್ಲಿ ಕನ್ನಡ ನಾಟಕಗಳಲ್ಲಿ ಬಂದಿರುವ ಬುದ್ಧನ ಕುರಿತ ರಚನೆಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ.

~*~*~*~*~

ಃ ಗ್ರಂಥ ಋಣ ಃ

~*~*~*~*~*~

1. ಮಹಾರಾತ್ರಿ : ಕುವೆಂಪು, ಉದಯರವಿ ಪ್ರಕಾಶನ
ಪರಿಷ್ಕೃತ ಮೊದಲ ಮುದ್ರಣ-೧೯೬೨
ವಾಣಿವಿಲಾಸಪುರಂ, ,ಮೈಸೂರು-೨

2. ಗೌತಮಬುದ್ಧ : ಬಿ. ಪುಟ್ಟಸ್ವಾಮಯ್ಯ
ಮೂರನೆಯ ಮುದ್ರಣ-೧೯೮೦
ಶಾರದ ಪ್ರಕಾಶನ
ಬೆಂಗಳೂರು-೫೩

3. ಯಶೋಧರಾ : ಶ್ರೀನಿವಾಸ
ಎಂಟನೆಯ ಮುದ್ರಣ-೧೯೮೧
ಜೀವನ ಕಾರ್ಯಾಲಯ
ಬೆಂಗಳೂರು

4. ಗೀತ ನಾಟಕಗಳು : ಕೆ. ಶಿವರಾಮ ಕಾರಂತ
ರಾಜಲಕ್ಷ್ಮಿ ಪ್ರಕಾಶನ
ಬೆಂಗಳೂರು-೫೩

5. ಬುದ್ಧನಾಟಕ ಚಕ್ರ : ಪ್ರಭುಶಂಕರ
ಡಿ.ವಿ.ಕೆ ಮೂರ್ತಿ
ಕೃಷ್ಣಮೂರ್ತಿಪುರಂ
ಮೈಸೂರು-೪

6. ಜಲ : ಮನಜ
ಬಹುಜನ ಮಾಧ್ಯಮ ಕೇಂದ್ರ (ರಿ)
ರಾಮಕೃಷ್ಣನಗರ
ಮೈಸೂರು

7. ಮಾಸ್ತಿಯವರ ನಾಟಕಗಳು : ಜಿ.ಎನ್ ರಂಗನಾಥರಾವ್
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

8. ಕನ್ನಡ ಗೀತನಾಟಕಗಳ ಅಧ್ಯಯನ : ಡಾ॥ ವಿಜಯಲಕ್ಷ್ಮಿ ಸುಬ್ಬರಾಜ್
ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ-ಬೆಂಗಳೂರು

9. ಕುವೆಂಪು ನಾಟಕ ಸಮೀಕ್ಷೆ : ಎಂ.ಸಿ ವಸಂತಕುಮಾರ್
ಪ್ರಥಮ ಆವೃತ್ತಿ ೧೯೭೨

10. ಆಧುನಿಕ ಕನ್ನಡ ನಾಟಕ : ಡಾ॥ ಕೆ. ಮರುಳಸಿದ್ಧಪ್ಪ
(ಪರಿಷ್ಕೃತ, ವಿಸ್ತೃತ ಆವೃತ್ತಿ)
ಅಂಕಿತ ಪುಸ್ತಕ
ಬಸವನಗುಡಿ-ಬೆಂಗಳೂರು

11. ನಾಟಕ ರಂಗಕೃತಿ : ಪ್ರಸನ್ನ, ನಾಟಕ ವಿಮರ್ಶೆಯ ಕೆಲವು ವಿಚಾರಗಳು
ಅಕ್ಷರ ಪ್ರಕಾಶನ, ಸಾಗರ

12. ಗಂಗೋತ್ರಿ : ಕುವೆಂಪು ಅಭಿನಂದನಾ ಗ್ರಂಥ
ಕುವೆಂಪು ಅವರ ನಾಟಕಗಳು (ಲೇಖನ)
ಡಾ॥ ಎಚ್. ತಿಪ್ಪೇರುದ್ರಸ್ವಾಮಿ

13. ಸಾಲು ದೀಪಗಳು : ಸಂ. ಜಿ.ಎಸ್ ಸಿದ್ಧಲಿಂಗಯ್ಯ
ಎಂ.ಎಚ್ ಕೃಷ್ಣಯ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು (೩೭೭)

14. ಅಭಿವ್ಯಕ್ತಿ : ಡಾ॥ ಸಾ.ಶಿ. ಮರುಳಯ್ಯ
ರಾಗಿಣಿ ಶಿಕ್ಷಣ ಪ್ರತಿಷ್ಠಾನ
ವಿಜಯನಗರ, ಬೆಂಗಳೂರು

~*~*~*~

15. ಷಷ್ಠಿ ಸಂಪದ : ಡಾ॥ ರಾಗೌ
ಸಂವಹನ ಪ್ರಕಾಶನ. ೨೦೦೬